ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 22 ಮಂಗಳವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

45

ಸಂಪುಟ: 45 | ಸಂಚಿಕೆ: 186 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮೈಸೂರಲ್ಲಿ ಮಳೆ ಅಬ್ಬರ; ಹೊಳೆ–ಹೊಂಡಗಳಾದ ರಸ್ತೆಗಳು; ಜನ–ವಾಹನ ಸಂಚಾರ ಅಸ್ತವ್ಯಸ್ತ



ಶೇಷಾದ್ರಿ ಅಯ್ಯರ್ ರಸ್ತೆಯಲ್ಲಿ ಕೆರೆ ಮಾದರಿ ನೀರು ತುಂಬಿರುವುದು.



ಮಹಾರಾಣಿ ಕಾಲೇಜು ಮುಂಭಾಗ ವಾಲ್ಮೀಕಿ ರಸ್ತೆ ಹೊಳೆಯಂತಾಗಿರುವುದು.



ದೇವರಾಜ ಮಾರುಕಟ್ಟೆಗೆ ನುಗ್ಗಿದ ನೀರು.

ಮೈಸೂರು, ಅ.21(ಬಿಎಲ್‌ಯು, ಎಸ್‌ಬಿಡಿ)– ಡಾನಾ ಚಂಡಮಾರುತದ ಪರಿಣಾಮ ಮೈಸೂರು ನಗರದಲ್ಲೂ ಸೋಮವಾರ ಧಾರಾಕಾರ ಮಳೆ ಸುರಿಯಿತು. ಇದರಿಂದ ನಗರದ ಜನಜೀವನ ಸಂಪೂರ್ಣ ಅಸ್ತವ್ಯಸ್ತವಾಗಿತ್ತು.

ಬೆಳಗ್ಗೆಯಿಂದಲೇ ಮೋಡ ಕವಿದ ವಾತಾವರಣವಿತ್ತಾದರೂ ಆಗಾಗ್ಗೆ ಬಿಸಿಲು ಝಳಪಿಸಿತ್ತು. ನಗರದ ಕೆಲವು ಭಾಗಗಳಲ್ಲಿ ಬೆಳಗ್ಗೆ 10.15ರಿಂದ ಮಧ್ಯಾಹ್ನ 12 ಗಂಟೆವರೆಗೆ ಮಳೆಯಾಗಿದ್ದರಿಂದ ಶಾಲಾ–ಕಾಲೇಜು ಹಾಗೂ ಕಚೇರಿಗೆ ಹೋಗುವವರು ಹೈರಾಣಾದರು. ಮತ್ತೆ ಸಂಜೆ 4.30ರ ಸುಮಾರಿಗೆ ಕಾರ್ಮೋಡದೊಂದಿಗೆ ಕತ್ತಲು ಆವರಿಸಿತು. ಇದರ ಬೆನ್ನಲ್ಲೇ ಗುಡುಗು ಸಹಿತ ಆರಂಭವಾದ ಮಳೆ ಬಿಟ್ಟೂ ಬಿಡದಂತೆ ಅರ್ಧ ಗಂಟೆಗೂ ಹೆಚ್ಚು ಕಾಲ ಅಬ್ಬರಿಸಿತು. ಮಳೆಯ ರಭಸಕ್ಕೆ ದ್ವಿಚಕ್ರ ವಾಹನ ಸವಾರು ಹಾಗೂ ಪಾದಚಾರಿಗಳು ತತ್ತರಿಸಿದರು. ಕೆಲವೇ ನಿಮಿಷಗಳಲ್ಲಿ ರಸ್ತೆಗಳಲ್ಲಿ ನೀರು ತುಂಬಿದ್ದರಿಂದ ಆಟೋ, ಕಾರು ಲಘು ವಾಹನಗಳ ಸಂಚಾರಕ್ಕೂ ತೀವ್ರ ಅಡ್ಡಿಯಾಗಿತ್ತು. ಜೋರು ಮಳೆಯಿಂದಾಗಿ ಬೀದಿಬದಿ ವ್ಯಾಪಾರಿಗಳಿಗೆ ಭಾರಿ ಹೊಡೆತ ಬಿದ್ದಿತು. ಶಾಲಾ–ಕಾಲೇಜುಗಳಿಂದ ಮನೆಗೆ ತೆರಳುತ್ತಿದ್ದ ವಿದ್ಯಾರ್ಥಿಗಳ ಪರಿಪಾಟಲು ಹೇಳತೀರದ್ದಾಗಿತ್ತು. ಕಚೇರಿ ಮುಗಿಸಿ ಮನೆಯತ್ತ ಸಾಗುತ್ತಿದ್ದ ಉದ್ಯೋಗಿಗಳೂ ಹೈರಾಣಾದರು.

ಮಾರುಕಟ್ಟೆಗೆ ನುಗ್ಗಿದ ನೀರು: ಚಿಕ್ಕಗಡಿಯಾರ ವೃತ್ತ ಜಲಾವೃತವಾಗಿತ್ತು. ದೇವರಾಜ ಮಾರುಕಟ್ಟೆಯೊಳಗೂ ನೀರು ನುಗ್ಗಿದ್ದರಿಂದ ವ್ಯಾಪಾರಿಗಳು ರೋಸಿ ಹೋದರು. ನೀರಿನಲ್ಲೇ ಸಿಮೆಂಟ್ ಇಟ್ಟಿಗೆ, ಸ್ಟೂಲ್ ■ 6ನೇ ಪುಟಕ್ಕೆ

ಮೈಸೂರು, ಕೊಡಗು, ಮಂಡ್ಯ, ಹಾಸನ, ಚಾ.ನಗರ ವ್ಯಾಪ್ತಿ ಭಾರಿ ಮಳೆ ಸಾಧ್ಯತೆ

● ಅ.24 ರಂದು ಒಡಿಶಾ, ಪಶ್ಚಿಮ ಬಂಗಾಳಕ್ಕೆ ಅಪ್ಪಳಿಸುವ ಚಂಡಮಾರುತ
● ಚಂಡಮಾರುತದಿಂದ ಹಿಂಗಾರಿಗೆ ಹಿನ್ನಡೆಯೂ ಆಗಬಹುದು

ಮೈಸೂರು, ಅ.21(ಬಿಎಲ್‌ಯು)– ಅರಬ್ಬಿ ಸಮುದ್ರದಿಂದ ಶ್ರೀಲಂಕಾದ ಕರಾವಳಿ ಮೂಲಕ ಬಂಗಾಳಕೊಲ್ಲಿ ಕಡೆಗೆ ಸಾಗುತ್ತಿರುವ ಡಾನಾ ಚಂಡಮಾರುತದ ಪರಿಣಾಮ ಮೈಸೂರು, ಮಂಡ್ಯ, ಕೊಡಗು, ಚಾಮರಾಜನಗರ, ಹಾಸನ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಭಾರಿ ಮಳೆಯಾಗುವ ಮುನ್ಸೂಚನೆ ಇದೆ ಎಂದು ಹವಾಮಾನ ಇಲಾಖೆ ಮೂಲಗಳು ತಿಳಿಸಿವೆ.

ಡಾನಾ ಚಂಡಮಾರುತದ ಪರಿಣಾಮ ಭಾನುವಾರ ರಾತ್ರಿ ಹಾಗೂ ಸೋಮವಾರ ಸಂಜೆ ಮೈಸೂರು ಜಿಲ್ಲೆಯಲ್ಲಿ ದಟ್ಟ ಮೋಡ ಆವರಿಸಿ, ಜೋರು ಮಳೆಯಾಗಿದೆ. ಈಗ ಅರಬ್ಬಿ ಸಮುದ್ರದಿಂದ ಶ್ರೀಲಂಕಾದ ಕರಾವಳಿ ಮೂಲಕ ಬಂಗಾಳಕೊಲ್ಲಿ ಕಡೆಗೆ ಬೀಸುತ್ತಿರುವ ಡಾನಾ ಚಂಡಮಾರುತ ಅ.24 ರಂದು ಒಡಿಶಾ ಹಾಗೂ ಪಶ್ಚಿಮಬಂಗಾಳಕ್ಕೆ ಅಪ್ಪಳಿಸಲಿದೆ. ಇದರ ಪರಿಣಾಮ ಮೈಸೂರು, ಕೊಡಗು ಸೇರಿದಂತೆ ಇತರೆ ಜಿಲ್ಲೆಯ ಮೇಲೆ ಮಳೆಯ ಪರಿಣಾಮ ಬೀರಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ದಕ್ಷಿಣ ಒಳನಾಡಿನ ಮೈಸೂರು, ಚಾಮರಾಜನಗರ, ಮಂಡ್ಯ, ಕೊಡಗು, ರಾಮನಗರ, ಬೆಂಗಳೂರು, ಕೋಲಾರ, ಚಿಕ್ಕಮಗಳೂರು, ತುಮಕೂರು, ಚಿತ್ರದುರ್ಗ ಜಿಲ್ಲೆಗಳಲ್ಲಿ ಅ.25ರವರೆಗೆ ಗುಡುಗು ಸಹಿತ ಭಾರಿ ಮಳೆಯಾಗುವ ಸಾಧ್ಯತೆ ಇದೆ. ಚಂಡಮಾರುತಕ್ಕೆ ಗಾಳಿಯ ದಿಕ್ಕನ್ನು ಬದಲಿಸುವ ಶಕ್ತಿ ಇದೆ. ಇದರ ಪರಿಣಾಮ ಡಾನಾ ಚಂಡಮಾರುತದಿಂದ ಮೈಸೂರು, ಕೊಡಗು, ಚಾಮರಾಜನಗರ ಸೇರಿದಂತೆ ಇತರೆಡೆ ಹೆಚ್ಚು ಮಳೆ ಯಾಗಬಹುದು. ಇಲ್ಲವೇ ಗಾಳಿಯ ದಿಕ್ಕು ಬದಲಾಗಿ ಮೋಡಗಳನ್ನು ಹೊತ್ತೊಯ್ದರೆ ಹಿಂಗಾರು ಮಾರುತಕ್ಕೆ ಭಾರಿ ಹಿನ್ನಡೆಯಾಗುವ ಸಾಧ್ಯತೆ ಕೂಡ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

'ಡಾನಾ' ಅಮೂಲ್ಯ ಮುತ್ತು: ಡಾನಾ ಎನ್ನುವುದು ಕತಾರ್ ಮೂಲದ ಹೆಸರು. ಅರೇಬಿಕ್ ಭಾಷೆಯಲ್ಲಿ ಡಾನಾ ಎಂದರೆ ಸುಂದರ ಮತ್ತು ಅಮೂಲ್ಯವಾದ ಮುತ್ತು ಎಂದರ್ಥ. ಡಾನಾ ಚಂಡಮಾರುತದ ಪರಿಣಾಮ ಈಗ ಭಾರಿ ಮಳೆ ಸುರಿಯುತ್ತಿದೆ. ಈ ಹಿನ್ನೆಲೆ ಯಾವುದೇ ಅವಘಡ ಸಂಭವಿಸದಂತೆ ಸರ್ಕಾರ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಬೇಕಿದೆ. ಮರಗಳು ಧರಶಾಯಿ ಆಗುವುದು, ■ 6ನೇ ಪುಟಕ್ಕೆ

ನೂರಕ್ಕೆ ನೂರರಷ್ಟು ಮೂರು ಕ್ಷೇತ್ರದಲ್ಲಿ ನಾವೇ ಗೆಲ್ಲುತ್ತೇವೆ

ಚಿತ್ರದುರ್ಗ: ನೂರಕ್ಕೆ ನೂರರಷ್ಟು ಮೂರು ಕ್ಷೇತ್ರದಲ್ಲಿ ನಾವೇ ಗೆಲ್ಲುತ್ತೇವೆ ಎಂದು ಉಪಚುನಾವಣೆ ವಿಚಾರವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.



ಜಿಲ್ಲೆಯ ಚಳ್ಳಕೆರೆ ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯೋಗೇಶ್ವರ್‌ಗೆ ಕಾಂಗ್ರೆಸ್ ಸರ್ಕಾರ ಗಾಳ ಹಾಕುತ್ತಿದೆ ಎಂದು ಜೆಡಿಎಸ್ ಆರೋಪಿಸುತ್ತಿರುವ ವಿಚಾರವಾಗಿ ಜೆಡಿಎಸ್‌ನವರು ಬಾಯಿಗೆ ಬಂದಂತೆ ಮಾತಾಡುತ್ತಾರೆ. ಮೊದಲು ಜೆಡಿಎಸ್‌ನವರು ಅಭ್ಯರ್ಥಿ ಘೋಷಣೆ ಮಾಡಲಿ. ಇಂದು ಸಂಜೆ ಅಥವಾ ನಾಳೆ ನಾವು ಅಭ್ಯರ್ಥಿ ಘೋಷಿಸುತ್ತೇವೆ. ನೂರಕ್ಕೆ ನೂರರಷ್ಟು ಮೂರು ಕ್ಷೇತ್ರದಲ್ಲಿ ಗೆಲ್ಲುತ್ತೇವೆ ಎಂದು ಪ್ರತಿಕ್ರಿಯಿಸಿದರು. ಇನ್ನೂ ಕಾಂಗ್ರೆಸ್ ನಾಯಕರನ್ನು ■ 2ನೇ ಪುಟಕ್ಕೆ

'ಗೊಂಬೆ ನಾಡು' ಚನ್ನಪಟ್ಟಣದಲ್ಲಿ ರಾಜಕೀಯ ಚದುರಂಗದಾಟ...!

ಪರಿಷತ್ ಸದಸ್ಯತ್ವಕ್ಕೆ ಯೋಗೇಶ್ವರ್ ರಾಜೀನಾಮೆ

● 'ಕೈ'ವಶಕ್ಕೆ ಕಾಂಗ್ರೆಸ್ ಕಸರತ್ತು! ● ಬಿಜೆಪಿ–ಜೆಡಿಎಸ್ ಮೈತ್ರಿಕೂಟದಲ್ಲಿ ತಲ್ಲಣ



ಸಿ.ಪಿ.ಯೋಗೇಶ್ವರ್ ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರಿಗೆ ತಮ್ಮ ವಿಧಾನಪರಿಷತ್ ಸದಸ್ಯತ್ವಕ್ಕೆ ರಾಜೀನಾಮೆ ಸಲ್ಲಿಸಿದರು.

ಬೆಂಗಳೂರು, ಅ. 21–ಚನ್ನಪಟ್ಟಣ ಉಪ ಚುನಾವಣೆಯಲ್ಲಿ ಕ್ಷೇತ್ರವನ್ನು ಜೆಡಿಎಸ್‌ಗೆ ಬಿಜೆಪಿ ವರಿಷ್ಠರು ಬಿಟ್ಟುಕೊಟ್ಟಿದ್ದಾರೆ. ತಮಗೆ ಬಿಜೆಪಿಯಿಂದಲೇ ಸ್ಪರ್ಧಿಸಲು ಅವಕಾಶ ನೀಡಬೇಕೆಂದು ಪಟ್ಟು ಹಿಡಿದಿದ್ದ ಸಿ.ಪಿ. ಯೋಗೇಶ್ವರ್ ಇಂದು ತಮ್ಮ ವಿಧಾನಪರಿಷತ್ ಸದಸ್ಯತ್ವಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ.



ಇದೀಗ ಈ ಕ್ಷೇತ್ರದಲ್ಲಿ ರಾಜಕೀಯ ಚದುರಂಗದಾಟವೇ ನಡೆಯುತ್ತಿದ್ದು, ಯಾವ ಪಕ್ಷದಿಂದ ಯಾರು ಅಭ್ಯರ್ಥಿ ಆಗಲಿದ್ದಾರೆ ಎಂಬ ಕುತೂಹಲ ಮನೆ ಮಾಡಿದೆ. ಅದೇ ವೇಳೆ ಯೋಗೇಶ್ವರ್ ರಾಜೀನಾಮೆ ಬಿಜೆಪಿ ಹಾಗೂ ಜೆಡಿಎಸ್‌ಗೆ ನುಂಗಲಾರದ ತುತ್ತಾಗಿ ಪರಿಣಮಿಸಿದ್ದರೆ, ಕಾಂಗ್ರೆಸ್ ಫುಲ್ ಅಲರ್ಟ್ ಆಗಿದೆ. ಪ್ರಭಾವಿ ಮುಖಂಡರ ಪಕ್ಷ ಸೇರ್ಪಡೆ ಎಂದು ಹೇಳಿಕೊಂಡು ಕೆಪಿಸಿಸಿ ಕಚೇರಿಯಲ್ಲಿ ಸಿದ್ಧತೆಗಳು ನಡೆಸುತ್ತಿದ್ದು, ಬಹುಶಃ ಸಿ.ಪಿ. ಯೋಗೇಶ್ವರ್ ಕಾಂಗ್ರೆಸ್ ಹುರಿಯಾಳಾಗಿ ಕಣಕ್ಕಿಳಿಯುವ ಸಾಧ್ಯತೆ ದಟ್ಟವಾಗಿ ಕಾಣುತ್ತಿದೆ.

ಇಂದು ಸಂಜೆ ಹುಬ್ಬಳ್ಳಿಗೆ ತೆರಳಿದ ಸಿ.ಪಿ. ಯೋಗೇಶ್ವರ್, ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರಲ್ಲಿ ರಾಜೀನಾಮೆ ಸಲ್ಲಿಸಿದರು. ಈ ವೇಳೆ ಮಾತನಾಡಿದ ಅವರು, ಕ್ಷೇತ್ರವನ್ನು ಜೆಡಿಎಸ್‌ಗೆ ಬಿಟ್ಟುಕೊಟ್ಟಿರುವುದರಿಂದ ತಾವು ಪಕ್ಷೇತರರಾಗಿ ಸ್ಪರ್ಧಿಸಲು ನಿರ್ಧರಿಸಿ, ಪರಿಷತ್ ಸದಸ್ಯತ್ವಕ್ಕೆ ರಾಜೀನಾಮೆ ಸಲ್ಲಿಸಿರುವುದಾಗಿ ಹೇಳಿದರು. ಅದೇ ವೇಳೆ ಕೇಂದ್ರ ಸಚಿವರಾದ ಪ್ರಹ್ಲಾದ್ ಜೋಶಿ, ಬಿಜೆಪಿ ಹಿರಿಯ ಶಾಸಕ ಅರವಿಂದ ಬೆಲ್ಲದ್ ಅವರೊಂದಿಗೆ ತಾವು ಮಾತನಾಡಿದ್ದು, ಅವರು ಕ್ಷೇತ್ರವನ್ನು ಬಿಜೆಪಿಗೆ ಬಿಟ್ಟುಕೊಡುವಂತೆ ಕುಮಾರಸ್ವಾಮಿಯವರನ್ನು ■ 6ನೇ ಪುಟಕ್ಕೆ

ವಿದ್ಯಾರ್ಥಿಗಳಿಗೆ ಯಾಕೆ ಕಿರುಕುಳ ನೀಡುತ್ತಿದ್ದೀರಿ...!

● ಪ್ರೌಢಶಿಕ್ಷಣದ ಅರ್ಧವಾರ್ಷಿಕ ಪರೀಕ್ಷೆ ಸಂಬಂಧ ಸರ್ಕಾರಕ್ಕೆ 'ಸುಪ್ರೀಂ' ತರಾಟೆ ● ಫಲಿತಾಂಶ ಪ್ರಕಟಿಸದಂತೆ ತಾಕೀತು; ಪರೀಕ್ಷೆ ನಡೆಸದಂತೆಯೂ ಸೂಚನೆ

ನವದೆಹಲಿ: 8 ರಿಂದ 10ನೇ ತರಗತಿಗಳ ಅರ್ಧವಾರ್ಷಿಕ ಪರೀಕ್ಷೆಗಳ ಫಲಿತಾಂಶಗಳನ್ನು ಪ್ರಕಟಿಸದಂತೆ ಸೋಮವಾರ ಸುಪ್ರೀಂ ಕೋರ್ಟ್ ಕರ್ನಾಟಕ ಸರ್ಕಾರಕ್ಕೆ ನಿರ್ಬಂಧ ಹೇರಿದೆ. ವಿವಿಧ ತರಗತಿಗಳಿಗೆ ಬೋರ್ಡ್ ಪರೀಕ್ಷೆಗಳನ್ನು ನಡೆಸುವ ಮೂಲಕ ವಿದ್ಯಾರ್ಥಿಗಳಿಗೆ ಕಿರುಕುಳ ನೀಡುತ್ತಿರುವುದಾಗಿ ಕರ್ನಾಟಕ ಸರ್ಕಾರವನ್ನು ಸುಪ್ರೀಂ ಕೋರ್ಟ್ ಸೋಮವಾರ ತರಾಟೆಗೆ ತೆಗೆದುಕೊಂಡಿದ್ದು, ಮುಂದಿನ ಆದೇಶದವರೆಗೆ 8, 9 ಮತ್ತು 10ನೇ ತರಗತಿಗಳ ಬೋರ್ಡ್ ಪರೀಕ್ಷೆಗಳ ಫಲಿತಾಂಶಗಳನ್ನು ಪ್ರಕಟಿಸದಂತೆ ತಾಕೀತು ಮಾಡಿದೆ.



ಮಾರ್ಚ್ 22 ರಂದು ಕರ್ನಾಟಕ ಹೈಕೋರ್ಟ್ ನೀಡಿದ ತೀರ್ಪಿನ ವಿರುದ್ಧ ಅನುದಾನರಹಿತ ಮಾನ್ಯತೆ ಪಡೆದ ಶಾಲೆಗಳ ಸಂಸ್ಥೆ ಸಲ್ಲಿಸಿದ ಮೇಲ್ಮನವಿಯನ್ನು ಸುಪ್ರೀಂಕೋರ್ಟ್ ವಿಚಾರಣೆ ನಡೆಸಿತ್ತು.

ವಿದ್ಯಾರ್ಥಿಗಳಿಗೆ ಯಾಕೆ ಕಿರುಕುಳ ನೀಡುತ್ತಿದ್ದೀರಿ, ನೀವು ಈ ರೀತಿ ವರ್ತಿಸಬಾರದು, ಇದನ್ನು ಅಹಂಕಾರದ ಸಮಸ್ಯೆ ಮಾಡಿಕೊಳ್ಳಬೇಡಿ, ನಿಮಗೆ ನಿಜವಾಗಿಯೂ ವಿದ್ಯಾರ್ಥಿಗಳ ಹಿತದ ಬಗ್ಗೆ ಕಾಳಜಿ ಇದ್ದರೆ ದಯವಿಟ್ಟು ಒಳ್ಳೆಯ ಶಾಲೆಗಳನ್ನು ತೆರೆಯಿರಿ. ವಿದ್ಯಾರ್ಥಿಗಳ ಕತ್ತು ಹಿಸುಕುವ ಕೆಲಸ ಮಾಡಬೇಡಿ. ಕರ್ನಾಟಕ ಸರ್ಕಾರ ಅನುಸರಿಸುತ್ತಿರುವ ಶಿಕ್ಷಣದ ಮಾದರಿಯನ್ನು ಬೇರೆ ಯಾವುದೇ ರಾಜ್ಯಗಳು ಅನುಸರಿಸುತ್ತಿಲ್ಲ ಎಂದು ಕರ್ನಾಟಕ ಸರ್ಕಾರದ ಪರವಾಗಿ ವಾದ ಮಂಡಿಸಿದ ಹಿರಿಯ ವಕೀಲ ದೇವದತ್ ಕಾಮತ್ ಅವರಿಗೆ ಪೀಠ ಹೇಳಿದೆ

ರಾಜ್ಯದ ಏಳು ಗ್ರಾಮಾಂತರ ಜಿಲ್ಲೆಗಳಲ್ಲಿ ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ 5, 8, 9 ಮತ್ತು 10ನೇ ತರಗತಿಯ ವಿದ್ಯಾರ್ಥಿಗಳಿಗೆ ಬೋರ್ಡ್ ಪರೀಕ್ಷೆಗಳನ್ನು ನಡೆಸುವ ಸುತ್ತೋಲೆಯನ್ನು ರಾಜ್ಯ ಸರ್ಕಾರ ಹಿಂಪಡೆದಿದೆ. ಇತರ 24 ಜಿಲ್ಲೆಗಳಲ್ಲಿಯೂ ಪರೀಕ್ಷೆ ನಡೆಸಲಾಗಿದೆ ಎಂದು ಇದೇ ವೇಳೆ ವಕೀಲ ಕಾಮತ್ ಹೇಳಿದರು. ■ 2ನೇ ಪುಟಕ್ಕೆ

ಕೆಆರ್‌ಎಸ್ ಹಿನ್ನೀರಲ್ಲಿ ಜಲವಿಮಾನ ಯೋಜನೆ ಅನುಷ್ಠಾನ

● ನ.10ರಂದು ಟ್ರಯಲ್ ರನ್; ತಂತ್ರಜ್ಞರು, ಅಧಿಕಾರಿಗಳ ಪರಿಶೀಲನೆ ● ರಾಜ್ಯದಲ್ಲಿ ಇಂತಹ ಮೊದಲ ಯೋಜನೆಗೆ ಮೈಸೂರು ವಿಮಾನ ನಿಲ್ದಾಣ ಟ್ರಾನ್ಸಿಟ್ ಪಾಯಿಂಟ್

ಮೈಸೂರು, ಅ. 21(ಆರ್‌ಕೆ)– ವಿಶ್ವ ಪ್ರಸಿದ್ಧ ಕೃಷ್ಣರಾಜಸಾಗರ (ಕೆಆರ್‌ಎಸ್) ಜಲಾಶಯದ ಹಿನ್ನೀರಲ್ಲಿ ಜಲವಿಮಾನ ಪ್ರವಾಸೋದ್ಯಮ ಆರಂಭಿಸಲು ಸರ್ಕಾರ ಮುಂದಾಗಿದೆ. ಕೇಂದ್ರ ಸರ್ಕಾರದ ಉಡಾನ್ ಪ್ರಾದೇಶಿಕ ಸಂಪರ್ಕ ಯೋಜನೆಯಡಿ ಕರ್ನಾಟಕ ರಾಜ್ಯ ಕೈಗಾರಿಕಾ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆಎಸ್‌ಐಐಡಿಸಿ)ವು ಕೆಆರ್‌ಎಸ್ ಹಿನ್ನೀರಲ್ಲಿ ಜಲವಿಮಾನ ಅನುಷ್ಠಾನಗೊಳಿಸಲು ಸಿದ್ಧತೆ ಮಾಡುತ್ತಿದೆ. ರಾಜ್ಯ ಜಲಸಾರಿಗೆ ಮಂಡಳಿ ಎಕ್ಸಿಕ್ಯೂಟಿವ್ ಇಂಜಿನಿಯರ್ ತಾರಾನಾಥ್ ಎಸ್. ರಾಥೋಡ್ ನೇತೃತ್ವದ ತಾಂತ್ರಿಕ ಅಧಿಕಾರಿಗಳ ತಂಡ ಭಾನುವಾರ ಸಂಜೆ ಕೆಆರ್‌ಎಸ್ ಹಿನ್ನೀರಲ್ಲಿ ದೋಣಿ ವಿಹಾರದ ಮೂಲಕ ಸ್ಥಳ ಪರಿಶೀಲನೆ ನಡೆಸಿತು.





ಕೆಆರ್‌ಎಸ್ ಹಿನ್ನೀರಲ್ಲಿ ಅಧಿಕಾರಿಗಳು ಹಾಗೂ ತಂತ್ರಜ್ಞರು ಭಾನುವಾರ ಸಂಜೆ ದೋಣಿ ವಿಹಾರದ ಮೂಲಕ ಸ್ಥಳ ಪರಿಶೀಲಿಸಿದರು (ಎಡಚಿತ್ರ). ಗುಜರಾತ್‌ನ ಅಹಮದಾಬಾದ್‌ನಲ್ಲಿ 2020ರಲ್ಲಿ ಆರಂಭವಾದ ಭಾರತದ ಮೊದಲ ಜಲವಿಮಾನ ಯೋಜನೆಯ ಫೈಲ್ ಫೋಟೋವನ್ನು ಬಲಚಿತ್ರದಲ್ಲಿ ಕಾಣಬಹುದು.

ಜಲವಿಮಾನ ಸಾರಿಗೆ ತಂತ್ರಜ್ಞ ಕಮ್ರಾನ್ ಹುಸೇನ್ ಅವರು ಆನಂದೂರು ಬಳಿ ಹಿನ್ನೀರಲ್ಲಿ ಪರಿಶೀಲನೆ ನಡೆಸಿದರು. ನೀರಿನ ಆಳ, ಪ್ರಸ್ತುತ ಸ್ಥಿತಿಗತಿಗಳು, ತಾಂತ್ರಿಕ ಸೌಲಭ್ಯಗಳ ಬಗ್ಗೆ ಕಾವೇರಿ ನೀರಾವರಿ ನಿಗಮದ ಇಂಜಿನಿಯರ್‌ಗಳಿಂದ ಮಾಹಿತಿ ಪಡೆದುಕೊಂಡರು.

ವಿಮಾನದ ಟೇಕ್‌ಆಫ್ ಮತ್ತು ಲ್ಯಾಂಡಿಂಗ್ ನೀರಿನಲ್ಲೇ ಆಗುವುದರಿಂದ ಅದಕ್ಕೆ ಕೆಆರ್‌ಎಸ್ ಹಿನ್ನೀರು ಪೂರಕವಾಗಿದೆಯೇ, ಅದರಿಂದ ಶಬ್ದಮಾಲಿನ್ಯ, ಪರಿಸರ ಮಾಲಿನ್ಯವಾಗುತ್ತದೆಯೇ, ಕನಿಷ್ಠ 10 ಅಡಿ ಆಳ, 1.5 ಕಿ.ಮೀ. ಉದ್ದದ ನೀರಿನ ಪ್ರದೇಶ ಈ ಯೋಜನೆಗೆ ಅಗತ್ಯವಿರುವುದರಿಂದ ಅಧಿಕಾರಿಗಳು ಸ್ಥಳ ಪರಿಶೀಲಿಸಿ ಅಗತ್ಯ ಮಾಹಿತಿ ಪಡೆದುಕೊಂಡರು.

ನವೆಂಬರ್ 10ರಂದು 19 ಆಸನಗಳ ಸಾಮರ್ಥ್ಯದ ಜಲವಿಮಾನ ಹಾರಾಟದ ಟ್ರಯಲ್ ರನ್ ನಡೆಸಲುದ್ದೇಶಿಸಲಾಗಿದ್ದು, ವಿಮಾನ ಹಾರಾಟ ಮತ್ತು ಇಳಿಸಲು ಕೆಆರ್‌ಎಸ್ ಹಿನ್ನೀರಲ್ಲಿ ತಾಂತ್ರಿಕ ಅವಶ್ಯಕತೆಗಳಿವೆಯೇ ಎಂಬುದರ ಬಗ್ಗೆಯೂ ಅಧಿಕಾರಿಗಳು ಅಧ್ಯಯನ ನಡೆಸಿದರು.

ಅಲ್ಲದೇ, ಈ ಮಹತ್ವದ ಯೋಜನೆ ಕುರಿತಂತೆ ಸಂಬಂಧಪಟ್ಟ ಇಲಾಖೆಗಳ ಹಿರಿಯ ಅಧಿಕಾರಿಗಳು ಶನಿವಾರ ಬೆಂಗಳೂರಿನಿಂದ ವಿಡಿಯೋ ಕಾನ್ಫರೆನ್ಸ್ ಮೂಲಕ ಸಭೆ ನಡೆಸಿ ಪೂರಕ ಮಾಹಿತಿ ಪಡೆದುಕೊಂಡಿದ್ದರು. ಮಂಡ್ಯ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಡಿಸಿ, ಶ್ರೀರಂಗಪಟ್ಟಣ ತಹಸೀಲ್ದಾರ್, ಕಾವೇರಿ ನೀರಾವರಿ ನಿಗಮ, ಪರಿಸರ, ಗಣಿ ಮತ್ತು ಭೂ ವಿಜ್ಞಾನ, ಪ್ರವಾಸೋದ್ಯಮ, ಪೊಲೀಸ್ ಇಲಾಖೆ ಹಾಗೂ ಮೈಸೂರು ವಿಮಾನ ನಿಲ್ದಾಣದ ಅಧಿಕಾರಿಗಳು ವಿಡಿಯೋ ಕಾನ್ಫರೆನ್ಸ್ ಸಭೆಯಲ್ಲಿ ಹಾಜರಿದ್ದು, ಮಾಹಿತಿ ನೀಡಿದ್ದರು.

ಟ್ರಯಲ್ ರನ್‌ಗೆ ಕೆಆರ್‌ಎಸ್ ಹಿನ್ನೀರಿನ ಆನಂದೂರು ಬಳಿ ಸುರಕ್ಷತಾ ಕ್ರಮ, ಪೊಲೀಸ್ ಭದ್ರತೆ, ಮೂಲಸೌಕರ್ಯದೊಂದಿಗೆ ಸರ್ವ ರೀತಿಯಲ್ಲಿ ಸಿದ್ಧತೆ ಮಾಡಿಕೊಳ್ಳುವಂತೆಯೂ ಹಿರಿಯ ಅಧಿಕಾರಿಗಳು ಸೂಚನೆ ನೀಡಿದ್ದು, ಅದರಂತೆ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳು ತಯಾರಿ ಮಾಡಿಕೊಳ್ಳುತ್ತಿದ್ದಾರೆ.

ಸ್ಥಳ ಪರಿಶೀಲನೆ ನಂತರ ಕೆಆರ್‌ಎಸ್‌ನ ಕಾವೇರಿ ನೀರಾವರಿ ನಿಗಮದ ಎಕ್ಸಿಕ್ಯೂಟಿವ್ ಇಂಜಿನಿಯರ್ ಕಚೇರಿ ಸಭಾಂಗಣದಲ್ಲಿ ರಾಥೋಡ್ ನೇತೃತ್ವದ ಅಧಿಕಾರಿಗಳು ಯೋಜನೆ ಸಂಬಂಧ ಪೂರ್ವಭಾವಿ ಸಭೆ ನಡೆಸಿ ರಾತ್ರಿ ಬೆಂಗಳೂರಿಗೆ ಹಿಂದಿರುಗಿದರು.

ವಂದನಾಗೆ ರಾಷ್ಟ್ರೀಯ ಕಿಕ್ ಬಾಕ್ಸಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಬೆಳ್ಳಿ ಪದಕ



ಮೈಸೂರು,ಅ.21–ಜೆಕೆ ಟೈರ್ ಅಂಡ್ ಇಂಡಸ್ಟ್ರೀಸ್ ಲಿಮಿಟೆಡ್‌ನಲ್ಲಿ ಸಮರ್ಪಿತ ಉದ್ಯೋಗಿಯಾಗಿರುವ ವಂದನಾ ಪಿಪಿ ಅವರು ಉತ್ತರಾಖಂಡದ ಡೆಹ್ರಾಡೂನ್‌ನಲ್ಲಿ ನಡೆದ 2024ರ ರಾಷ್ಟ್ರೀಯ ಕಿಕ್‌ಬಾಕ್ಸಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಬೆಳ್ಳಿ ಪದಕ ಪಡೆದುಕೊಂಡಿದ್ದಾರೆ. ಕೇವಲ 28 ವರ್ಷ ವಯಸ್ಸಿನಲ್ಲಿ, ವಂದನಾ ಕ್ರೀಡೆಯಲ್ಲಿ ಗಮನಾರ್ಹ ಪ್ರತಿಭೆಯಾಗಿ ಹೊರಹೊಮ್ಮಿದ್ದಾರೆ, ರಾಷ್ಟ್ರೀಯ ವೇದಿಕೆಯಲ್ಲಿ ತಮ್ಮ ಕೌಶಲಗಳನ್ನು ಪ್ರದರ್ಶಿಸಿದ್ದಾರೆ.

ಮೈಸೂರಿನಲ್ಲಿ ಟೀಮ್ ಜೆನೆಸಿಸ್‌ನೊಂದಿಗೆ ತರಬೇತಿ ಪಡೆದ ವಂದನಾಳ ಕಿಕ್‌ಬಾಕ್ಸಿಂಗ್‌ನಲ್ಲಿನ ಪ್ರಯಾಣವು ಅವರ ವೃತ್ತಿ ಮತ್ತು ಅಥ್ಲೆಟಿಕ್ಸ್ ಎರಡರಲ್ಲೂ ಅವರ ಉತ್ಸಾಹ ಮತ್ತು ಬದ್ಧತೆಯಿಂದ ಉತ್ತೇಜಿಸಲ್ಪಟ್ಟಿದೆ. KFI ಉತ್ತರಾಖಂಡ್ ಅಸೋಸಿಯೇಷನ್‌ನ ಸಹಯೋಗದೊಂದಿಗೆ ಕಿಕ್‌ಬಾಕ್ಸಿಂಗ್ ಫೆಡರೇಶನ್ ಆಫ್ ಇಂಡಿಯಾ ಆಯೋಜಿಸಿದ್ದ ಚಾಂಪಿಯನ್‌ಶಿಪ್, ದೇಶಾದ್ಯಂತದ ಉನ್ನತ ಸ್ಪರ್ಧಿಗಳನ್ನು ಆಕರ್ಷಿಸಿತು.

ವಂದನಾ ಅವರ ಯಶಸ್ಸು ತನ್ನ ಅಥ್ಲೆಟಿಕ್ ಕನಸುಗಳನ್ನು ಅನುಸರಿಸುವಾಗ ಎಪಿ ಟೈರ್‌ನಲ್ಲಿ ತನ್ನ ವೃತ್ತಿಪರ ಜವಾಬ್ದಾರಿಗಳನ್ನು ಸಮತೋಲನಗೊಳಿಸುವ ಅವರ ಅದ್ಭುತ ಸಾಮರ್ಥ್ಯವನ್ನು ಎತ್ತಿ ತೋರಿಸುತ್ತದೆ. ಸಹೋದ್ಯೋಗಿಗಳು ಮತ್ತು ಸಹ ಕ್ರೀಡಾಪಟುಗಳು ಆಕೆಯ ಸಮರ್ಪಣೆ ಮತ್ತು ಸ್ಥಿತಿಸ್ಥಾಪಕತ್ವವನ್ನು ಶ್ಲಾಘಿಸಿದ್ದಾರೆ. ಅವಳನ್ನು ಅನೇಕರಿಗೆ ಸ್ಫೂರ್ತಿಯಾಗಿ ವೀಕ್ಷಿಸಿದ್ದಾರೆ.

ಅವರು ಟೀಮ್ ಜೆನೆಸಿಸ್‌ನೊಂದಿಗೆ ತರಬೇತಿಯನ್ನು ಮುಂದುವರೆಸುತ್ತಿರುವಾಗ, ವಂದನಾ ಅವರು ಎದುರಿಸಬಹುದಾದ ಸವಾಲುಗಳನ್ನು ಲೆಕ್ಕಿಸದೆ ತಮ್ಮ ಕನಸುಗಳನ್ನು ಬೆನ್ನಟ್ಟಲು ಇತರರನ್ನು ಪ್ರೇರೇಪಿಸುವ ಮೂಲಕ ಹೆಚ್ಚು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಈವೆಂಟ್‌ಗಳಲ್ಲಿ ಸ್ಪರ್ಧಿಸುವ ಗುರಿಯನ್ನು ಹೊಂದಿದ್ದಾರೆ. ಆಕೆಯ ಬೆಳ್ಳಿ ಪದಕ ಆಕೆಯ ಕೌಶಲಕ್ಕೆ ಸಾಕ್ಷಿಯಾಗಿರದೆ ಎಲ್ಲೆಡೆ ಉತ್ಸಾಹಿ ಕ್ರೀಡಾಪಟುಗಳಿಗೆ ಭರವಸೆಯ ಬೆಳಕಾಗಿದೆ.

ಮೇಘಾಲಯ ರಾಜ್ಯಪಾಲ ಸಿ.ಹೆಚ್.ವಿಜಯಶಂಕರ್‌ಗೆ ಹುಟ್ಟುಹಬ್ಬದ ಶುಭಾಶಯ



ಮೇಘಾಲಯ ರಾಜ್ಯಪಾಲ ಸಿ.ಹೆಚ್.ವಿಜಯಶಂಕರ್ ಅವರಿಗೆ ಮೈಸೂರಿನ ಸಿ.ಎಚ್.ವಿಜಯಶಂಕರ್ ಅಭಿಮಾನಿಗಳು ಮೇಘಾಲಯಕ್ಕೆ ಹೋಗಿ ಅವರಿಗೆ ಜನ್ಮದಿನದ ಶುಭಾಶಯ ಕೋರಿದರು. ಈ ವೇಳೆ ಕಡಕೊಳ ಬೀರೇಶ್ವರ ಟ್ರಸ್ಟ್ ಅಧ್ಯಕ್ಷ ನಾಗರಾಜ, ವಿಜಯಶಂಕರ್ ಅಭಿಮಾನಿ ಬಳಗದ ಅಧ್ಯಕ್ಷ ಕಡಕೊಳ ಹರೀಶ್, ಪಂಚಾಯತಿ ಸದಸ್ಯ ಶಿವಕುಮಾರ್, ರಮೇಶ್, ಶಿವ, ಬೀರ, ಬಸವರಾಜು, ತಾಪಂ ಮಾಜಿ ಸದಸ್ಯ ಶ್ರೀಕಂಠ ಸಾಭಾ, ಚಂದ್ರಪ್ಪ, ಮುಕುಂದ, ಶ್ರೀನಿವಾಸ ರೆಡ್ಡಿ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ದೀಪಾಲಂಕಾರ ಮಾಸಾಂತ್ಯದವರೆಗೆ ವಿಸ್ತರಿಸಿ



ಮೈಸೂರು, ಅ. 21–2024ರ ದಸರಾ ದೀಪಾಲಂಕಾರವನ್ನು ಅ.23ರವರೆಗೆ ಏರ್ಪಡಿಸಿದ್ದು, ಇದು ಮೈಸೂರಿಗೆ ಪ್ರವಾಸಿಗರು, ಶಾಲಾ ಮಕ್ಕಳು ಮತ್ತು ನಗರದ ಜನತೆ ಸಂಭ್ರಮಿಸಲು ಅನುಕೂಲವಾಯಿತು. ಬಂಧು ಬಳಗದವರು ಮೈಸೂರಿಗೆ ಕರೆ ತಂದು ದೀಪಾಲಂಕಾರವನ್ನು ತೋರಿಸಿ ಖುಷಿಪಟ್ಟಿದ್ದಾರೆ. ನವರಾತ್ರಿಯ ದಸರಾ ಸಂದರ್ಭದಲ್ಲಿ ದೀಪಾಲಂಕಾರ, ಇತರೆ ಸೌಂದರ್ಯ ಸವಿಯಲಾಗದ ಪ್ರವಾಸಿಗರು ಈಗ ಅಧಿಕ ಸಂಖ್ಯೆಯಲ್ಲಿ ಆಗಮಿಸುತ್ತಿದ್ದಾರೆ.

ಈ ತಿಂಗಳು ಇನ್ನೂ 3 ಸರಕಾರಿ ರಜೆಗಳು ಇರುವ ಜೊತೆಗೆ ಹಾಗೂ ದೀಪಾವಳಿ ಹಬ್ಬ ಸಮೀಪಿಸುತ್ತಿರುವುದರಿಂದ ದೀಪಾಲಂಕಾರವನ್ನು ನ.3ರವರೆಗೆ, ಇನ್ನೂ ಹತ್ತು ದಿನ ವಿಸ್ತರಿಸುವುದು ಒಳ್ಳೆಯದು ಎಂದು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮತ್ತು ಜಿಲ್ಲಾಡಳಿತವನ್ನು ಒತ್ತಾಯಿಸಿದ್ದಾರೆ. ಇದರಿಂದ ಮೈಸೂರು ಪ್ರವಾಸೋದ್ಯಮ ಅಭಿವೃದ್ಧಿಗೆ ಅನುಕೂಲವೂ ಆಗಲಿದೆ ಎಂದು ಹೇಳಿದ್ದಾರೆ.

ಜಿಲ್ಲಾ ಮಟ್ಟದ ಅಥ್ಲೆಟಿಕ್ಸ್ ಕ್ರೀಡಾಕೂಟ

ಮೈಸೂರು,ಅ.21– ಶಾಲಾ ಶಿಕ್ಷಣ ಇಲಾಖೆ ವತಿಯಿಂದ 14ರಿಂದ 17 ವರ್ಷದ ಪ್ರಾಥಮಿಕ ಹಾಗೂ ಪ್ರೌಢಶಾಲಾ ಬಾಲಕ ಮತ್ತು ಬಾಲಕಿಯರ ಜಿಲ್ಲಾ ಮಟ್ಟದ ಅಥ್ಲೆಟಿಕ್ಸ್ ಕ್ರೀಡಾಕೂಟವನ್ನು ಅ.24 ಮತ್ತು 25ರಂದು ಬೆಳಿಗ್ಗೆ 8.30 ಗಂಟೆಯಿಂದ ಸಂಜೆ 5.30ರವರೆಗೆ ನಜರ್‌ಬಾದ್‌ನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದೆ. ಅಥ್ಲೆಟಿಕ್ಸ್ ಕ್ರೀಡಾಕೂಟಕ್ಕೆ ಜಿಲ್ಲೆಯ ಹಲವಾರು ಪ್ರತಿಭಾವಂತ ಗ್ರಾಮೀಣ ಮತ್ತು ನಗರದ ಸುಮಾರು 600 ಕ್ರೀಡಾಪಟುಗಳು ಭಾಗವಹಿಸಲಿದ್ದಾರೆ. ಹೆಚ್ಚಿನ ಮಾಹಿತಿಗೆ ದೂ.ಸಂ:9448877854 ಅನ್ನು ಸಂಪರ್ಕಿಸಬಹುದು.

ಪತ್ರ ಬರೆದಿಟ್ಟು ವಿದ್ಯಾರ್ಥಿ ನಾಪತ್ತೆ

ಮೈಸೂರು, ಅ.21(ಎಸ್‌ಪಿಎನ್)– ಹತ್ತನೇ ತರಗತಿ ವಿದ್ಯಾರ್ಥಿಯೋರ್ವ ನಾಪತ್ತೆಯಾಗಿರುವ ಘಟನೆ ನಂಜನಗೂಡು ತಾಲೂಕು ಕೆಂಪಿಸಿದ್ದನಹುಂಡಿಯಿಂದ ವರದಿಯಾಗಿದೆ. ಇಲ್ಲಿನ ನಿವಾಸಿ ಲೇಟ್ ನಾಗರಾಜು ಅವರ ಪುತ್ರ ಭರತ್(16) ಅ.19ರಂದು ಬೆಳಗ್ಗೆ ನಾನು 2 ವರ್ಷ ಮನೆ ಬಿಟ್ಟು ಹೋಗಿ, ಹಣ ಗಳಿಸಿಕೊಂಡು ಬರುತ್ತೇನೆ. ನನ್ನನ್ನು ಯಾರು ಹುಡುಕಬೇಡಿ ಎಂದು ಪತ್ರ ಬರೆದಿಟ್ಟು ಮನೆ ಬಿಟ್ಟು ಹೋಗಿದ್ದಾನೆ ಎಂದು ಪೊಲೀಸರಿಗೆ ನೀಡಿದ್ದ ದೂರಿನಲ್ಲಿ ತಿಳಿಸಲಾಗಿದೆ. ಈತನ ಸುಳಿವು ಸಿಕ್ಕಲ್ಲಿ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆ ದೂ.ಸಂ: 08221–226259, ಜಿಲ್ಲಾ ಪೊಲೀಸ್ ಕಂಟ್ರೋಲ್ ರೂಂ 0821– 2418612 ಅನ್ನು ಸಂಪರ್ಕಿಸುವಂತೆ ಪೊಲೀಸ್ ಪ್ರಕಟಣೆ ಕೋರಿದೆ.



ಒಂದನೇ ಪುಟದಿಂದ

ಯಾಕೆ ಕಿರುಕುಳ ನೀಡುತ್ತಿದ್ದೀರಿ...!

ಇನ್ನು ಸುಪ್ರೀಂಕೋರ್ಟ್ ನಾಲ್ಕು ವಾರಗಳಲ್ಲಿ ಪರೀಕ್ಷೆಯ ನಿಖರವಾದ ವಿವರಗಳನ್ನು ನೀಡುವ ಅಫಿಡವಿಟ್ ಸಲ್ಲಿಸಲು ರಾಜ್ಯ ಸರ್ಕಾರವನ್ನು ಕೇಳಿದೆ. ಈ ಕುರಿತ ವಿಚಾರಣೆ ನಡೆಸಿದ ನ್ಯಾಯ ಮೂರ್ತಿಗಳಾದ ಬೇಲಾ ಎಂ ತ್ರಿವೇದಿ ಮತ್ತು ಸತೀಶ್ ಚಂದ್ರ ಶರ್ಮಾ ಅವರ ಪೀಠವು ಯಾವುದೇ ಜಿಲ್ಲೆಯಲ್ಲಿ ಪರೀಕ್ಷೆಯನ್ನು ನಡೆಸದಿದ್ದರೆ ಅದನ್ನು ಫಲಿತಾಂಶಕ್ಕೆ ತೆಗೆದುಕೊಳ್ಳಬಾರದು ಎಂದು ನಿರ್ದೇಶಿಸಿದೆ. ಏಕ ನ್ಯಾಯಾಧೀಶರ ಪೀಠದ ಮಾರ್ಚ್ 6ರ ಆದೇಶವನ್ನು ತಳ್ಳಿಹಾಕಿ 2023–24ನೇ ಶೈಕ್ಷಣಿಕ ವರ್ಷಕ್ಕೆ ವಿವಿಧ ತರಗತಿಗಳಿಗೆ ಬೋರ್ಡ್ ಪರೀಕ್ಷೆಗಳನ್ನು ನಡೆಸಲು ಹೈಕೋರ್ಟ್‌ನ ವಿಭಾಗೀಯ ಪೀಠವು ರಾಜ್ಯ ಸರ್ಕಾರಕ್ಕೆ ಅನುಮತಿ ನೀಡಿತ್ತು. ಕರ್ನಾಟಕ ರಾಜ್ಯ ಪರೀಕ್ಷೆ ಮತ್ತು ಮೌಲ್ಯಮಾಪನ ಮಂಡಳಿ (ಕೆಎಸ್‌ಇಎಬಿ) ಮೂಲಕ ವಿವಿಧ ತರಗತಿಗಳಿಗೆ ಬೋರ್ಡ್ ಪರೀಕ್ಷೆಗಳನ್ನು ನಡೆಸುವ ರಾಜ್ಯ ಸರ್ಕಾರದ ಅಕ್ಟೋಬರ್ 2023ರ ನಿರ್ಧಾರವನ್ನು ಹೈಕೋರ್ಟ್‌ನ ಏಕ ನ್ಯಾಯಾಧೀಶರು ರದ್ದುಗೊಳಿಸಿದ್ದಾರೆ.

ಮೂರು ಕ್ಷೇತ್ರದಲ್ಲಿ ನಾವೇ ಗೆಲ್ಲುತ್ತೇವೆ

ಯೋಗೇಶ್ವರ್ ಭೇಟಿಯಾಗಿದ್ದಾರೆ ಎಂದು ಜೆಡಿಎಸ್‌ನವರು ಆರೋಪಿಸುತ್ತಿದ್ದಾರೆ. ಜೆಡಿಎಸ್‌ನವರು ಬಾಯಿಗೆ ಬಂದಂತೆ ಮಾತನಾಡುತ್ತಿದೆ. ಮೊದಲು ನೀವು ಅಭ್ಯರ್ಥಿಯನ್ನು ಆಯ್ಕೆ ಮಾಡಿ ಎಂದರು.

ಬೆಂಗಳೂರಲ್ಲಿ ಮಳೆ ಜಾಸ್ತಿಯಾಗಿದೆ. ಆದರೆ ಬೆಳೆಗಳಿಗೆ ಯಾವುದೇ ತೊಂದರೆ ಆಗಿಲ್ಲ. ನಮ್ಮ ಸರ್ಕಾರ ಮುಂಜಾಗ್ರತಾ ಕ್ರಮ ಕೈಗೊಂಡಿದೆ. ನಮ್ಮ ಸರ್ಕಾರ ಬೀಳಿಸಲು ಸಾವಿರ ಕೋಟಿ ರೂ. ಖರ್ಚೆಂದು ಯತ್ನಾಳ್ ಹೇಳಿದ್ದರು. ಸಾವಿರ ಕೋಟಿ ಬ್ಲಾಕ್ ಮನಿ ಅಲ್ಲವೇ, ಅಷ್ಟೊಂದು ಹಣ ಎಲ್ಲಿಂದ ತರುತ್ತಾರೆ, ಬಿಜೆಪಿಯವರು ಬ್ಲಾಕ್ ಮನಿ ಮಾಡಿದ್ದಾರೆ ಎಂದು ಕಿಡಿಕಾರಿದರು.

ಜಾತಿ ಜನಗಣತಿ, ಒಳ ಮೀಸಲಾತಿ ಜಾರಿಗೆ ಆಗ್ರಹಿಸಿ ಮೈಸೂರಲ್ಲಿ ದಸಂಸ ಪ್ರತಿಭಟನೆ



ಜಾತಿ ಜನಗಣತಿ ಜಾರಿ ಮಾಡುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಸೋಮವಾರ ಕರ್ನಾಟಕ ದಲಿತ ಸಂಘರ್ಷ ಸಮಿತಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರು,ಅ.21(ಎಂಟಿವೈ)– ಜಾತಿ ಜನಗಣತಿ ವರದಿ, ಒಳ ಮೀಸಲಾತಿ ಜಾರಿಗೊಳಿಸುವುದೂ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಗಾಗಿ ಒತ್ತಾಯಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಕಾರ್ಯಕರ್ತರು ಸೋಮವಾರ ಪ್ರತಿಭಟನೆ ನಡೆಸಿದರು.

ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ನೂತನ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಪ್ರತಿಭಟನೆ ಮಾಡಿದ ಕಾರ್ಯಕರ್ತರು, ಸರ್ಕಾರ ಕೂಡಲೇ ಜಾತಿ ಗಣತಿ ವರದಿ ಬಿಡುಗಡೆ ಮಾಡಬೇಕು. ಇದರಿಂದ ರಾಜ್ಯದಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಶೋಷಿತ ಸಮುದಾಯಗಳಿಗೆ ನ್ಯಾಯ ಒದಗಿಸಲು ನೆರವಾಗುತ್ತದೆ. ಸಮಾನತೆ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಮಾಜಿಕ ನ್ಯಾಯ ಒದಗಿಸಲು ಜಾತಿ ಜನಗಣತಿ ವರದಿ ಜಾರಿ ಅವಶ್ಯ ಎಂದು ಒತ್ತಾಯಿಸಿದರು.

2023ರ ವಿಧಾನಸಭಾ ಚುನಾವಣೆಗೂ ಮುನ್ನ ಕಾಂಗ್ರೆಸ್ ಒಳ ಮೀಸಲಾತಿ ಜಾರಿಗೊಳಿಸುವ ಭರವಸೆ ನೀಡಿತ್ತು. ಈಗ ಅದರಂತೆ ನಡೆದುಕೊಳ್ಳಬೇಕು. ಇದುವರೆಗೆ ಮೀಸಲಾತಿ ಸೌಲಭ್ಯ ಪ್ರಬಲ ವರ್ಗಕ್ಕೆ ಮಾತ್ರ ಸೀಮಿತವಾಗಿದೆ. ಇದರಿಂದ ಸಣ್ಣಪುಟ್ಟ ಸಮುದಾಯಗಳು ಇಂದಿಗೂ ಮೀಸಲಾತಿ ಸೌಲಭ್ಯ ಪಡೆದುಕೊಳ್ಳಲು ಸಾಧ್ಯವಾಗಿಲ್ಲ. ಈ ಹಿನ್ನೆಲೆಯಲ್ಲಿ ಕೆನೆ ಪದರ ತೆಗೆದು ಅರ್ಹರಿಗೆ ಸೌಲಭ್ಯ ಒದಗಿಸಲು ಒಳಮೀಸಲಾತಿ ವ್ಯವಸ್ಥೆ ಜಾರಿಗೊಳಿಸಬೇಕು ಎಂದು ಮನವಿ ಮಾಡಿದರು.

ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆಗಳಾದ ಗ್ಯಾರಂಟಿ ಯೋಜನೆಗಳಿಗಾಗಿ ಎಸ್‌ಸಿಪಿ, ಟಿಎಸ್‌ಪಿ ಹಣ ಬಳಸಲಾಗಿದೆ. ಬಳಕೆ ಮಾಡಿರುವ ಹಣವನ್ನು ಮತ್ತೆ ನಿಗಮಕ್ಕೆ ಹಿಂದಿರುಗಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಪದಾಧಿಕಾರಿಗಳಾದ ಬನ್ನಳ್ಳಿ ಸೋಮಣ್ಣ, ಮಲ್ಲಹಳ್ಳಿ ನಾರಾಯಣ್, ದೊಡ್ಡಸಿದ್ದು ಹಾದನೂರು, ಚಂದ್ರು ಕಳ್ಳಿಮುದ್ದನಹಳ್ಳಿ, ನಾಗರಾಜ್(ವಾಟಾಳ್), ಬಸವರಾಜು ದೇವರಸನಹಳ್ಳಿ, ಮಹಾದೇವಮ್ಮ, ಭವ್ಯ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ನ.6ರಂದು ಶ್ರೀ ಸುತ್ತೂರು ಕ್ಷೇತ್ರದಲ್ಲಿ ಸಾಮೂಹಿಕ ವಿವಾಹ

ಸುತ್ತೂರು, ಅ. 21– ಶ್ರೀ ಸುತ್ತೂರು ಕ್ಷೇತ್ರದಲ್ಲಿ ನ.6ರಂದು ಮಾಸಿಕ ಸಾಮೂಹಿಕ ವಿವಾಹ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ಸುತ್ತೂರು ಶ್ರೀ ಕ್ಷೇತ್ರದಲ್ಲಿ ಏರ್ಪಡಿಸಲಿರುವ ಸಾಮೂಹಿಕ ವಿವಾಹದಲ್ಲಿ ಹರಗುರು ಚರಮೂರ್ತಿಗಳು, ವಧುವರರ ಬಂಧುಮಿತ್ರರು ಹಾಗೂ ಸಾರ್ವಜನಿಕರು ಭಾಗವಹಿಸಿ ನೂತನ ದಂಪತಿಗೆ ಶುಭ ಹಾರೈಸಲಿದ್ದಾರೆ.

ಈ ವಿವಾಹದಲ್ಲಿ ಭಾಗವಹಿಸುವ ವರನಿಗೆ 21 ವರ್ಷ, ವಧುವಿಗೆ 18 ವರ್ಷ ಪೂರ್ಣಗೊಂಡಿರಬೇಕು. ಅರ್ಜಿ ನಮೂನೆಯಲ್ಲಿ ವರ ಮತ್ತು ವಧುವಿನ ಭಾವಚಿತ್ರಗಳನ್ನು ಲಗತ್ತಿಸಿರಬೇಕು. ಜಾತಿ ದೃಢೀಕರಣ ಪತ್ರ ವಧುವರರ ವಯಸ್ಸಿನ ಬಗ್ಗೆ ಶಾಲೆಯಿಂದ ಪಡೆದ ದಾಖಲಾತಿ ಪತ್ರ ಪಡೆದ ದೃಢೀಕರಣ ಪತ್ರ ಲಗತ್ತಿಸಿರಬೇಕು. ಬಾಲ್ಯವಿವಾಹಕ್ಕೆ ಅವಕಾಶವಿರುವುದಿಲ್ಲ. ಆಸಕ್ತರು 8 ದಿನಗಳ ಮುಂಚಿತವಾಗಿ ಆಡಳಿತಾಧಿಕಾರಿಗಳು, ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು, ಸುತ್ತೂರು ಇವರನ್ನು ನೇರವಾಗಿ ಸಂಪರ್ಕಿಸಿ ಅಥವಾ ದೂರವಾಣಿ: 08221–232217, 232033, 9741342222, ಸಂಪರ್ಕಿಸಬಹುದು.

ಜಮ್ಮು–ಕಾಶ್ಮೀರ ಭಯೋತ್ಪಾದಕ ದಾಳಿ ಹೊಣೆ ಹೊತ್ತ ಪಾಕ್ ಮೂಲದ ಟಿಆರ್‌ಎಫ್ ಸಂಘಟನೆ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದ ಗಂದರ್ಬಾಲ್ ಜಿಲ್ಲೆಯಲ್ಲಿ ನಡೆದ ಉಗ್ರದಾಳಿಯ ಹೊಣೆಯನ್ನು ಪಾಕಿಸ್ತಾನ ಮೂಲದ ರೆಸಿಸ್ಟೆನ್ಸ್ ಫ್ರಂಟ್ (ಟಿಆರ್‌ಎಫ್) ವಹಿಸಿಕೊಂಡಿದೆ.

ಓರ್ವ ವೈದ್ಯ ಸೇರಿದಂತೆ 7 ಮಂದಿ ನಿರಾಯುಧ, ಮುಗ್ಧ ನಾಗರಿಕರ ಮೇಲೆ ಭಾನುವಾರ ನಡೆದ ಭಯೋತ್ಪಾದಕ ದಾಳಿಯ ಜವಾಬ್ದಾರಿಯನ್ನು ಪಾಕಿಸ್ತಾನ ಮೂಲದ ಭಯೋತ್ಪಾದಕ ಸಂಘಟನೆ ರೆಸಿಸ್ಟೆನ್ಸ್ ಫ್ರಂಟ್ (ಟಿಆರ್‌ಎಫ್) ವಹಿಸಿಕೊಂಡಿದೆ ಎಂದು ಸೇನಾ ಅಧಿಕೃತ ಮೂಲಗಳು ದೃಢಪಡಿಸಿವೆ.

ಪಾಕಿಸ್ತಾನ ಮೂಲದ ಟಿಆರ್‌ಎಫ್ ಮುಖ್ಯಸ್ಥ ಶೇಖ್ ಸಜ್ಜಾದ್ ಗುಲ್ ಈ ದಾಳಿಯ ಮಾಸ್ಟರ್ ಮೈಂಡ್ ಎಂದು ಮೂಲಗಳು ತಿಳಿಸಿವೆ. ಆತನ ಸೂಚನೆಯ ಮೇರೆಗೆ, ಟಿಆರ್‌ಎಫ್‌ನ ಸ್ಥಳೀಯ ಮಾಡ್ಯೂಲ್ ಸಕ್ರಿಯವಾಗಿ ಈ ಕಾರ್ಯಾಚರಣೆ ನಡೆಸಿದೆ ಎಂದು ಹೇಳಲಾಗಿದೆ. ಸೇನಾ ಮೂಲಗಳ ಪ್ರಕಾರ ಟಿಆರ್‌ಎಫ್‌ನ ಸ್ಥಳೀಯ ಘಟಕ ಕಳೆದ ಒಂದು ತಿಂಗಳಿನಿಂದ ಅಪರಾಧದ ಸ್ಥಳವನ್ನು ಪರಿಶೀಲಿಸುತ್ತಿತ್ತು. ಕಾಶ್ಮೀರದಲ್ಲಿ ಸಕ್ರಿಯವಾಗಿರುವ ಈ ಭಯೋತ್ಪಾದಕ ಸಂಘಟನೆ ಕಳೆದ ಒಂದೂವರೆ ವರ್ಷಗಳಲ್ಲಿ ಕಾಶ್ಮೀರಿ ಪಂಡಿತರು, ಸಿಖ್ಖರು ಮತ್ತು ಸ್ಥಳೀಯರಲ್ಲದವರನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಿದೆ.

ನ.16ಕ್ಕೆ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಶಾಖೆ ನಿರ್ದೇಶಕರ ಚುನಾವಣೆ

ಮೈಸೂರು,ಅ.21–ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ 2024–29ನೇ ಅವಧಿಯ ಜಿಲ್ಲಾ ಶಾಖೆಯ ಕಾರ್ಯಕಾರಿ ಸಮಿತಿಯ ನಿರ್ದೇಶಕರ ಚುನಾವಣಾ ವೇಳಾಪಟ್ಟಿಯನ್ನು ಬಿಡುಗಡೆ ಮಾಡಲಾಗಿದೆ. ಅರ್ಹ ಅಭ್ಯರ್ಥಿಗಳು ಅ.28ರಿಂದ ನ.7ರ ಸಂಜೆ 5ರವರೆಗೆ ನಾಮಪತ್ರವನ್ನು ಸಲ್ಲಿಸಬಹುದಾಗಿದ್ದು, ನ.8ರಂದು ನಾಮಪತ್ರಗಳನ್ನು ಪರಿಶೀಲಿಸಿ, ಅರ್ಹ ಅಭ್ಯರ್ಥಿಗಳ ಹೆಸರನ್ನು ಪ್ರಕಟಣೆ ಮಾಡಲಾಗುತ್ತದೆ. ಉಮೇದುವಾರಿಕೆಯನ್ನು ಹಿಂಪಡೆಯಲು ನ.11ರ ಸಂಜೆ 4.30 ಕೊನೆಯ ದಿನಾಂಕವಾಗಿದ್ದು, ನ.11 ರ ಸಂಜೆ 5.30 ಗಂಟೆಯ ನಂತರ ಚುನಾವಣಾ ಕಣದಲ್ಲಿ ಉಳಿದ ಅಭ್ಯರ್ಥಿಗಳ ಹೆಸರನ್ನು ಪ್ರಕಟಣೆ ಮಾಡಲಾಗುವುದು.

ನ.16ರಂದು ಬೆಳಗ್ಗೆ 9ರಿಂದ 4 ಗಂಟೆಯವರೆಗೆ ಚುನಾವಣೆ ನಡೆಯಲಿದ್ದು, ಮತದಾನ ಮುಕ್ತಾಯವಾದ ನಂತರ ಮತಗಳ ಎಣಿಕೆ ಕಾರ್ಯ ನಡೆಯಲಿದೆ. ಮತ ಎಣಿಕೆ ಮುಗಿದ ನಂತರ ಫಲಿತಾಂಶ ಪ್ರಕಟಗೊಳಿಸಲಾಗುವುದು ಎಂದು ಬೆಂಗಳೂರಿನ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯ ಚುನಾವಣಾ ಅಧಿಕಾರಿಗಳು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆಯಿಂದ ರಾಷ್ಟ್ರೀಯ ಸಮ್ಮೇಳನ

ಮೈಸೂರು,ಅ.21– ಮಾನಸಗಂಗೋತ್ರಿಯ ಗಣಿತಶಾಸ್ತ್ರ ಅಧ್ಯಯನ ವಿಭಾಗದ ವತಿಯಿಂದ ಅ.23 ಮತ್ತು 24 ರಂದು National Conference on Graph theory and Allied Topics ಎಂಬ ವಿಷಯದ ಮೇಲೆ ರಾಷ್ಟ್ರೀಯ ಸಮ್ಮೇಳನ (National Conference) ವನ್ನು ಆಯೋಜಿಸಲಾಗಿದ್ದು, ಅ.23 ರಂದು ಬೆಳಗ್ಗೆ 10 ಗಂಟೆಗೆ ಗಣಿತಶಾಸ್ತ್ರ ಅಧ್ಯಯನ ವಿಭಾಗ ಸೆಮಿನಾರ್ ಹಾಲ್‌ನಲ್ಲಿ ಉದ್ಘಾಟನಾ ಕಾರ್ಯಕ್ರಮ ನಡೆಯಲಿದೆ.

ಗುಲ್ಬರ್ಗ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ವಿ.ಆರ್.ಕುಲ್ಲಿ ಅವರು ಕಾರ್ಯಕ್ರಮದ ಉದ್ಘಾಟನೆ ಮಾಡಲಿದ್ದು, ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಎನ್.ಕೆ.ಲೋಕನಾಥ್ ಅಧ್ಯಕ್ಷತೆ ವಹಿಸಲಿದ್ದಾರೆ. ಮೈಸೂರು ವಿಶ್ವ ವಿದ್ಯಾನಿಲಯದ ಗಣಿತಶಾಸ್ತ್ರ ವಿಭಾಗದ ಹಿರಿಯ ಪ್ರಾಧ್ಯಾಪಕರಾದ ಡಿ.ಸೋನೇರ್ ನಂದಪ್ಪ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.



ಯೋಗ ಪ್ರಾಣ ವಿದ್ಯಾ ಹೀಲಿಂಗ್ ಶಿಬಿರ

ಮೈಸೂರಿನ ಕುವೆಂಪುನಗರದ ಆದಿ ಚುಂಚನಗಿರಿ ಮಹಿಳಾ ಒಕ್ಕಲಿಗ ಸಮಾಜದಿಂದ ಎಸ್.ಮೀನಾಕ್ಷಿ ಅವರ ಯೋಗ ಪ್ರಾಣ ವಿದ್ಯಾ ಹೀಲಿಂಗ್ ಶಿಬಿರ ಶ್ರೀಮತಿ ಸವಿತಗೌಡ ಅಧ್ಯಕ್ಷತೆಯಲ್ಲಿ ನೆರವೇರಿತು. ಪದಾಧಿಕಾರಿಗಳಾದ ವಾಣಿ, ಜಯಂತಿ, ಮೀನಾ, ಶಿವಕುಮಾರಿ, ಮಂಜುಳ, ಕಲ್ಪನಾ ಇತರರು ಉಪಸ್ಥಿತರಿದ್ದರು.

ಹೆಲ್ತ್‌ಕೇರ್ ಇನ್ನೋವೇಶನ್‌ನಲ್ಲಿ ಇತ್ತೀಚಿನ ಪ್ರವೃತ್ತಿಗಳ ಕುರಿತು ಅಂತರರಾಷ್ಟ್ರೀಯ ಸಮ್ಮೇಳನ


ಮೈಸೂರು, ಅ.21–ಹೆಲ್ತ್‌ಕೇರ್ ಆವಿಷ್ಕಾರದಲ್ಲಿನ ಇತ್ತೀಚಿನ ಪ್ರವೃತ್ತಿಗಳ ಕುರಿತು 2 ದಿನಗಳ ವಾರ್ಷಿಕ ಅಂತರರಾಷ್ಟ್ರೀಯ ಸಮ್ಮೇಳನ (ಎಐಸಿಆರ್‌ಟಿ ಎಚ್‌ಐ) 2024 ಅನ್ನು ಮಾಹಿತಿ ವಿಜ್ಞಾನ ಮತ್ತು ಎಂಜಿನಿಯರಿಂಗ್ ವಿಭಾಗವು ಮೈಸೂರಿನ ವಿದ್ಯಾವರ್ಧಕ ಎಂಜಿನಿಯರಿಂಗ್ ಕಾಲೇಜಿನಲ್ಲಿ (ವಿವಿಸಿಇ) ಅ.24 ಮತ್ತು 25ರಂದು ಆಯೋಜಿಸಲಾಗಿದೆ.

ಈ ವಿಶಿಷ್ಟ ವಾರ್ಷಿಕ ಈವೆಂಟ್ ಇತ್ತೀಚಿನ ಬೆಳವಣಿಗೆಗಳನ್ನು ತನಿಖೆ ಮಾಡಲು ಮತ್ತು ತಂತ್ರಜ್ಞಾನ, ವ್ಯವಹಾರ ಮತ್ತು ಸಂಶೋಧನೆಗೆ ನವೀನ ವಿಧಾನಗಳ ಕುರಿತು ಉದ್ದೇಶಪೂರ್ವಕವಾಗಿ ತನಿಖೆ ಮಾಡಲು ಜಗತ್ತಿನಾದ್ಯಂತದ ವ್ಯಾಪಾರ ನಾಯಕರು, ವೃತ್ತಿಗಾರರು, ಉದ್ಯಮ ವೃತ್ತಿಪರರು ಮತ್ತು ಸಂಶೋಧಕರನ್ನು ಒಟ್ಟುಗೂಡಿಸುತ್ತದೆ.

ಕೃತಕ ಬುದ್ಧಿಮತ್ತೆ, ಯಂತ್ರ ಕಲಿಕೆ ಮತ್ತು ದತ್ತಾಂಶ ವಿಜ್ಞಾನದಂತಹ ಕ್ಷೇತ್ರಗಳಲ್ಲಿ ಆರೋಗ್ಯ ರಕ್ಷಣೆಯ ಆವಿಷ್ಕಾರಕ್ಕೆ ನಿರ್ದಿಷ್ಟ ಒತ್ತು ನೀಡುವ ಮೂಲಕ ಸಮ್ಮೇಳನವು ಭಾರತ ಮತ್ತು ಹೊರಗಿನ ಶಿಕ್ಷಣ ತಜ್ಞರು ಮತ್ತು ಅಧ್ಯಾಪಕರ ಸಂಶೋಧನಾ ಪ್ರಬಂಧಗಳನ್ನು ಒಳಗೊಂಡಿರುತ್ತದೆ. ಎರಡು ದಿನಗಳ ಸಮ್ಮೇಳನದಲ್ಲಿ 62ಕ್ಕೂ ಹೆಚ್ಚು ಪ್ರಬಂಧಗಳನ್ನು ಮಂಡಿಸಲಾಗುವುದು. 2 ದಿನಗಳ ಸಮ್ಮೇಳನದ ಉದ್ಘಾಟನಾ ಸಮಾರಂಭವು ಅ.24ರಂದು ಬೆಳಿಗ್ಗೆ 9.30ಕ್ಕೆ ವಿವಿಸಿಇಯ ಬಿ.ಸಿ.ಲಿಂಗಯ್ಯ ಸಭಾಂಗಣದಲ್ಲಿ ನಡೆಯಲಿದೆ. ಕ್ಯಾನ್ಸರ್ ಮತ್ತು ಜೀನೋಮಿಕ್ ಸೈನ್ಸಸ್ ವಿಭಾಗದಲ್ಲಿ ಇಂಟಿಗ್ರೇಟಿವ್ ಅನಾಲಿಟಿಕ್ಸ್ ಮತ್ತು ಕೃತಕ ಬುದ್ಧಿಮತ್ತೆಯಲ್ಲಿ ಸಹಾಯಕ ಪ್ರಾಧ್ಯಾಪಕರಾಗಿರುವ ಯುನೈಟೆಡ್ ಕಿಂಗ್‌ಡಂನ ಬರ್ಮಿಂಗ್‌ಹ್ಯಾಮ್ ವಿಶ್ವವಿದ್ಯಾಲಯದ ಡಾ.ಅನಿಮೇಶ್ ಆಚಾರ್ಜಿ ಮುಖ್ಯ ಭಾಷಣ ಮಾಡಲಿದ್ದಾರೆ. ಮೈಸೂರು ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪ ಗೌಡ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸುವರು. ಗೌರವ ಅತಿಥಿಗಳಾಗಿ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಪಿ.ವಿಶ್ವನಾಥ್ ಹಾಗೂ ಖಜಾಂಚಿ ಶ್ರೀಶೈಲ ರಾಮಣ್ಣನವರ್ ಆಗಮಿಸುವರು.

ವಿವಿಸಿಇಯ ಪ್ರಾಂಶುಪಾಲರಾದ ಡಾ.ಬಿ.ಸದಾಶಿವೇಗೌಡ, ವೈಸ್ ಪ್ರಾಂಶುಪಾಲರು ಮತ್ತು ಶೈಕ್ಷಣಿಕ ವ್ಯವಹಾರಗಳ ಡೀನ್ ಡಾ.ಶೋಭಾ ಶಂಕರ್ ಅವರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದು, ಮಾಹಿತಿ ವಿಜ್ಞಾನ ಮತ್ತು ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಡಾ.ರವಿಕುಮಾರ್, ಡಾ.ಜಿ.ಬಿ.ಕೃಷ್ಣಪ್ಪ, ಸಂಶೋಧನೆ ಮತ್ತು ಅಭಿವೃದ್ಧಿಯ ಡೀನ್, ಡಾ. ಗುರುರಾಜ್ ಎಚ್.ಎಲ್, ಎಂಐಟಿ ಬೆಂಗಳೂರು ಸಹ ಪ್ರಾಧ್ಯಾಪಕರು ಮತ್ತು ಡಾ ಪ್ರೇಮಾ ಎನ್.ಎಸ್ ಎರಡು ದಿನಗಳ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಮತ್ತು ಮುಖ್ಯ ಭಾಷಣಕಾರರಾಗಿ ಫಿಲಿಪ್ಸ್ ಬೆಂಗಳೂರಿನ ಪ್ರಧಾನ ವಿಜ್ಞಾನಿ ಡಾ.ದಿನೇಶ್ ಎಂ.ಎಸ್. ಭಾಗವಹಿಸಲಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

22.10.2024 ಮಂಗಳವಾರ, ಮಳೆ ನಕ್ಷತ್ರ: ಚಿತ್ತ, 10.10.2024ರಿಂದ 23.10.2024
ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಯುಜ ಮಾಸ, ಕೃಷ್ಣ ಪಕ್ಷ,
ತಿಥಿ: ಪಂಚಮಿ, ನಕ್ಷತ್ರ: ಮೃಗಶಿರ, ರಾಹುಕಾಲ: ಮಧ್ಯಾಹ್ನ 3 ರಿಂದ 4.30 ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಮೂತ್ರಪಿಂಡ (ಕಿಡ್ನಿ) ಕಾಯಿಲೆಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9ರಿಂದ ಸಂಜೆ 4.30 ರವರೆಗೆ.
- **ಮೈಸೂರು ಜಿಲ್ಲಾ ರಂಗಭೂಮಿ ವೃತ್ತಿ ಕಲಾವಿದೆಯರ ಸಂಘ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ:** ಸಂಘದ 35ನೇ ಸಂಭ್ರಮಾಚರಣೆ ಪ್ರಯುಕ್ತ ಎಸ್.ಎಸ್.ಗಾಯಿತ್ರಿ ಅವರ ನೆನಪಿನ ನಾಟಕೋತ್ಸವ, ಗಾಯತ್ರಿ ಕಲಾ ವೃಂದದವರಿಂದ ಪ್ರಕಾಶ್ ಕಡಪಟ್ಟಿಯವರ ವಿರಚಿತ ಸ್ತ್ರೀಯರಿಂದ ಚಿನ್ನದ ಗೊಂಬೆ ಸಾಮಾಜಿಕ ನಾಟಕ ಪ್ರದರ್ಶನ, ಸ್ಥಳ: ಪುರಭವನ, ಮಧ್ಯಾಹ್ನ 1ಕ್ಕೆ.
- **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನದ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆಯ ಮೇಲೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ.
- **ಚಿನ್ಮಯ ಮಿಷನ್, ಮೈಸೂರು:** ಗೀತಾಜ್ಞಾನ ಯಜ್ಞ, ಸ್ವಾಮಿ ಆದಿತ್ಯಾನಂದ ಅವರಿಂದ ಶ್ರೀ ಗಂಗಾ ಸ್ತೋತ್ರಂ ಕುರಿತು ಉಪನ್ಯಾಸ, ಸ್ಥಳ: ಶ್ರೀ ಗುರುದೇವ ದತ್ತ ಸನ್ನಿಧಿ, ಗೋಕುಲಂ ಮೂರನೇ ಹಂತ, 6ನೇ ಮುಖ್ಯ ರಸ್ತೆ, ಬೆಳಗ್ಗೆ 7ರಿಂದ.
- **ಕಾವೇರಿ ಆಯುರ್ವೇದ ಆಸ್ಪತ್ರೆ :** ಉಚಿತ ಆರೋಗ್ಯ ತಪಾಸಣೆ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್, ಬೆಳಗ್ಗೆ 10 ರಿಂದ
- **ಮೈಸೂರು ವಿಶ್ವವಿದ್ಯಾನಿಲಯ, ಮಹಾರಾಜ ಕಾಲೇಜು :** ಅನಂತಯಾತ್ರಿ ವಾರ್ಷಿಕ ಸಂಚಿಕೆ ಅನಾವರಣ, ಮುಖ್ಯ ಅತಿಥಿಗಳು : ಶ್ರೀಮತಿ ಶಾಂತಲ ಧರ್ಮರಾಜ್, ವನ್ಯಜೀವಿ ಛಾಯಾಗ್ರಾಹಕ ಡಾ. ಲೋಕೇಶ್ ಮೊಸಳೆ, ಅಧ್ಯಕ್ಷತೆ : ಮಹಾರಾಜ ಕಾಲೇಜು ಪ್ರಿನ್ಸಿಪಾಲ್ ಪ್ರೊ. ಹೆಚ್.ಸಿ. ದೇವರಾಜೇಗೌಡ, ಉಪಸ್ಥಿತರು : ಆಡಳಿತಾಧಿಕಾರಿ ಪ್ರೊ. ವಿ. ಷಣ್ಮುಗಂ, ಅನಂತಯಾತ್ರಿ ಸಂಪಾದಕ ಪ್ರೊ. ವಿಜಯಲಕ್ಷ್ಮಿ ಮನಾಪುರ, ಸ್ಥಳ : ಜೂನಿಯರ್ ಬಿ.ಎ. ಹಾಲ್, ಮಹಾರಾಜ ಕಾಲೇಜು, ಬೆಳಗ್ಗೆ 11ಕ್ಕೆ.
- **ಮೈಸೂರು ವಿಶ್ವವಿದ್ಯಾನಿಲಯ, ಪ್ರಾಚ್ಯವಿದ್ಯಾ ಸಂಶೋಧನಾಲಯ :** ಬೆಳಗ್ಗೆ 10 ಗಂಟೆಗೆ ಸತ್ಯ–ಭದ್ರ ಕೃತಿ ಸಮೀಕ್ಷಾ ಕುರಿತು ರಾಷ್ಟ್ರ ಮಟ್ಟದ ವಿಚಾರ ಗೋಷ್ಠಿ, ವೆಬ್‌ಸೈಟ್ ಲೋಕಾರ್ಪಣೆ ಮತ್ತು ಶತಾವಧಾನಿ ಡಾ. ರಾ. ಗಣೇಶ್ ಅವರು ಸಂಪಾದಿಸಿರುವ ಅಲಂಕಾರಸುಧಾನಿಧಿ ಗ್ರಂಥ ಬಿಡುಗಡೆ ಸಮಾರಂಭ, ಅಧ್ಯಕ್ಷತೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಮುಖ್ಯ ಅತಿಥಿಗಳು : ಶ್ರೀ ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್ ಸ್ವಾಮೀಜಿ, ಕುಲಸಚಿವರಾದ ಶ್ರೀಮತಿ ವಿ.ಆರ್. ಶೈಲಜಾ, ಹಣಕಾಸು ಅಧಿಕಾರಿ ಶ್ರೀಮತಿ ಕೆ.ಎಸ್. ರೇಖಾ, ಅಧ್ಯಕ್ಷತೆ : ಕಾಲೇಜು ಶಿಕ್ಷಣ ವಿಭಾಗದ ನಿವೃತ್ತ ಉಪ ನಿರ್ದೇಶಕ ಡಾ. ಟಿ.ಎನ್. ಪ್ರಭಾಕರ; ಸಂಜೆ 4 ಗಂಟೆಗೆ ಸಮಾರೋಪ ಸಮಾರಂಭ, ಸಮಾರೋಪ ಭಾಷಣ : ವಿಶ್ರಾಂತ ಉಪಕುಲಪತಿ ಪ್ರೊ.ಮಲ್ಲೇಪುರ ಜಿ. ವೆಂಕಟೇಶ್, ಉಪಸ್ಥಿತರು : ಪ್ರಾಚ್ಯವಿದ್ಯಾ ಸಂಶೋಧನಾಲಯದ ಉಪನಿರ್ದೇಶಕರಾದ ಡಾ. ಸಿ. ಪಾರ್ವತಿ, ನಿರ್ದೇಶಕ ಡಾ.ಡಿ.ಪಿ. ಮಧುಸೂಧನಾಚಾರ್ಯ, ಸ್ಥಳ: ವಿಜ್ಞಾನ ಭವನ ಸಭಾಂಗಣ, ಮಾನಸಗಂಗೋತ್ರಿ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಶ್ರದ್ಧೆಯ ಶಿಲ್ಪ–ಕರ್ನಾಟಕದ ಪ್ರಾಚೀನ ದೇವಾಲಯಗಳ ಪರಿಚಯ ಮಾಲಿಕೆ, ಲೇಖನ ಮತ್ತು ಪ್ರಸ್ತುತಿ: ಟಿ.ಎಸ್. ಗೋಪಾಲ್, ಪ್ರಾಯೋಜಕರು: ಅದಮ್ಯ ಚೇತನ ಫೌಂಡೇಶನ್, ಬೆಂಗಳೂರು, 6.40 ಸಕ್ಕರೆ ನಾಡಿನ ಅಕ್ಕರೆಯ ಲೇಖಕರು, ಲೇಖನ ಹಾಗೂ ಪ್ರಸ್ತುತಿ : ಶಭಾನ ಮತ್ತು ಕೀರ್ತಿ, ಪರಿಕಲ್ಪನೆ : ಅಬ್ದುಲ್ ರಶೀದ್, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ: ಅ.ನ.ಕೃ ಅವರ 'ಉದಯರಾಗ' ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ : ಉಮೇಶ್ ಎಸ್. ಎಸ್., 8.30 ಹಾಸನಾಂಬೆ ದರ್ಶನ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು : ಜಿಲ್ಲಾಡಳಿತ, ಹಾಸನ, 8.45 ಬಾನುಲಿ ಇಂಗ್ಲೀಷ್ ಪಾಠ–ರೇಡಿಯೋ ಸರಣಿ, ಪ್ರಸ್ತುತಿ : ಸದಾನಂದ. ಆರ್., 8.55 ಕರೆಗೊಂದು ಗೀತೆ–ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ನೇರ ಫೋನ್ ಇನ್ ಕಾರ್ಯಕ್ರಮ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಎಂ. ಎಸ್. ಗೌತಮ್ ಮತ್ತು ನಾರಾಯಣ–ಯುಗಳ ನಾಗಸ್ವರವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಕಥೆಯಲ್ಲಿದೆ ಉತ್ತರ, ಪ್ರಸ್ತುತಿ : ಪ್ರಭುಸ್ವಾಮಿ ಮಳಿಮಠ್ ಹಾಗೂ ಚೈತ್ರಿಕಾ

ಮಧ್ಯಾಹ್ನ: 12.05 ವನಿತಾ ವಿಹಾರ, 12.30 ದೇವರನಾಮ – ನಿರಂಜನ್, 12.45 ಕನ್ನಡದಲ್ಲಿ ಭಾಷಣ, 1.00 ಬಾನುಲಿ ಇಂಗ್ಲೀಷ್ ಪಾಠ–ರೇಡಿಯೋ ಸರಣಿ, ಪ್ರಸ್ತುತಿ : ಸದಾನಂದ. ಆರ್., 1.20 ಹಾಸನಾಂಬೆ ದರ್ಶನ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು : ಜಿಲ್ಲಾಡಳಿತ, ಹಾಸನ, 1.25 ಭಾವಗೀತೆಗಳು–ಹಂಸಿನಿ. ಎಸ್. ಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಯು.ಪಿ. ರಾಜು–ಮ್ಯಾಂಡೋಲಿನ್, 4.00 ಕಥಾ ಕಾಲಕ್ಷೇಪ–ಲವಕುಶ, ಪ್ರಸ್ತುತಿ: ವಿದ್ವಾನ್. ಆರ್. ಗುರುರಾಜುಲು ನಾಯ್ಡು, 6.50 ಕೃಷಿರಂಗ: ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ, ರೇಷ್ಮೆ ಐಸಿರಿ–ರೇಷ್ಮೆ ಕೃಷಿ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ ರೇಷ್ಮೆ ಹುಳುಗಳ ಪೌಷ್ಟಿಕಾಂಶದ ಪೂರಕಗಳು, ಗೂಡಿನ ಇಳುವರಿ ಮತ್ತು ಗುಣಮಟ್ಟದ ಮೇಲೆ ಇದರ ಪರಿಣಾಮ ಈ ಕುರಿತು ಸಂವಾದ. ಭಾಗವಹಿಸುತ್ತಾರೆ : ಮೈಸೂರಿನ ಕೇಂದ್ರ ರೇಷ್ಮೆ ಸಂಶೋಧನೆ ಹಾಗೂ ತರಬೇತಿ ಸಂಸ್ಥೆಯ ವಿಜ್ಞಾನಿ ಡಾ. ಇ. ಭುವನೇಶ್ವರಿ ಹಾಗೂ ಮೈಸೂರು ತಾಲೂಕು ಜಯಪುರ ಹೋಬಳಿ ದಾರಿಪುರದ ಎಸ್. ರವಿಕುಮಾರ್, ಪ್ರಸ್ತುತಿ : ಎನ್. ಕೇಶವಮೂರ್ತಿ, 7.45 'ಮೈಸೂರು ಜಂಕ್ಷನ್' ಸಾಪ್ತಾಹಿಕ ಸಂಚಿಕೆ, ಪ್ರಸ್ತುತಿ : ಜಾಂಪಣ್ಣ ಆಶೀಹಾಳ್, 8.00 ಕ್ರೀಡಾಲೋಕ, 8.30 ರೇಡಿಯೋ ಸರಣಿ 'ಸ್ವಚ್ಛ ಆನಂದ', ರಚನೆ–ಎ. ಎಸ್. ಪ್ರಕಾಶ್, ನಿರ್ಮಾಣ–ಉಮೇಶ್. ಎಸ್. ಎಸ್., 9.30 ಕರ್ನಾಟಕ ಶಾಸ್ತ್ರೀಯ ಸಂಗೀತ : ಪ್ರಭಾಕರ್. ಎಂ –ಹಾಡುಗಾರಿಕೆ, 10.00 ಚೈತ್ರವನ–ಲಕ್ಷ್ಮೀಶನ ಜೈಮಿನಿ ಭಾರತದ ಸಮಗ್ರ ವಾಚನ ಹಾಗೂ ವ್ಯಾಖ್ಯಾನ. ವಾಚನ : ಹೆಚ್. ಎಲ್. ಶ್ರೀ ಕಂಠ, ವ್ಯಾಖ್ಯಾನ : ಹೆಚ್. ಎಸ್. ಗೋಪಾಲ್, ಪ್ರಸ್ತುತಿ: ಡಾ. ಎ. ಎಸ್. ಶಂಕರನಾರಾಯಣ, 10.30 ಸವಿನೆನಪು

ರಾಷ್ಟ್ರೀಯ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ ಮೈಸೂರಿನ ಯುಕ್ತಿಗೆ ಪ್ರಥಮ ಸ್ಥಾನ



ಸಿಬಿಎಸ್‌ಇ ರಾಷ್ಟ್ರೀಯ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್ 2024ರಲ್ಲಿ ಅಂಡರ್-14 ಲಾಂಗ್‌ಜಂಪ್ ವಿಭಾಗದಲ್ಲಿ ಮೈಸೂರಿನ ಯುಕ್ತಿ ಪ್ರಥಮ ಸ್ಥಾನ ಪಡೆದಳು.

ಮೈಸೂರು, ಅ.21- ಮೈಸೂರಿನ ಎಸ್‌ವಿಐ ಪಬ್ಲಿಕ್ ಶಾಲೆಯ ಪ್ರತಿಭಾವಂತ ವಿದ್ಯಾರ್ಥಿನಿ ಯುಕ್ತಿ, ಸಿಬಿಎಸ್‌ಇ ರಾಷ್ಟ್ರೀಯ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್ 2024ರಲ್ಲಿ ಅಂಡರ್-14 ಲಾಂಗ್‌ಜಂಪ್ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ.

ವಾರಣಾಸಿಯ ಸಂತ ಅತುಲಾನಂದದಲ್ಲಿ ನಡೆದ ಸ್ಪರ್ಧೆಯಲ್ಲಿ ಯುಕ್ತಿ 4.95 ಮೀಟರ್ ಉದ್ದದ ಜಿಗಿತದ ಮೂಲಕ ತನ್ನ ಪ್ರತಿಸ್ಪರ್ಧಿಗಳನ್ನು ಮೀರಿಸಿದ ಸಾಧನೆ ಮಾಡಿದ್ದಾರೆ.

ಮೈಸೂರಿನ ಹೆಬ್ಬಾಳು ನಿವಾಸಿ ಕಿಶೋರ್‌ಕುಮಾರ್ ಮತ್ತು ನಂದಿನಿ ದಂಪತಿ ಪುತ್ರಿಯಾಗಿರುವ ಯುಕ್ತಿ, ತನ್ನ ಅನನ್ಯ ಕ್ರೀಡಾ ಪ್ರದರ್ಶನದ ಮೂಲಕ ತನ್ನ ಶಾಲೆಯಷ್ಟೇ ಅಲ್ಲ, ಮೈಸೂರಿಗೆ ಪ್ರಶಸ್ತಿ ತಂದುಕೊಟ್ಟಿದ್ದಾರೆ. ದೇಶದ ವಿವಿಧೆಡೆಗಳಿಂದ ಬಂದ ಉತ್ತಮ ಕ್ರೀಡಾಪಟುಗಳೊಂದಿಗೆ ಪೈಪೋಟಿ ನಡೆಸಿ, ತಮ್ಮ ಪರಿಶ್ರಮ ಮತ್ತು ಅಭ್ಯಾಸದಿಂದ ಯುಕ್ತಿ ರಾಷ್ಟ್ರ ಮಟ್ಟದ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಸಾಧಿಸಿದ್ದಾರೆ.

ಪ್ರತಿಕೂಲ ಹವಾಮಾನ ಪರಿಸ್ಥಿತಿಯಿಂದ ಕಾಫಿ ದರ ಹೆಚ್ಚಳವಾಗುವ ನಿರೀಕ್ಷೆ



• ವಿಶ್ವದ ಒಟ್ಟು ಕಾಫಿ ರಫ್ತಿನಲ್ಲಿ ಭಾರತಕ್ಕೆ 5ನೇ ಸ್ಥಾನ • ಭಾರತದಲ್ಲಿ ಉತ್ಪಾದನೆಯಾಗುವ ಒಟ್ಟು ಕಾಫಿಯಲ್ಲಿ ಕರ್ನಾಟಕದ ಪಾಲು ಶೇ.71

ಮೈಸೂರು,ಅ.21(ಪಿಎಂ)- ಮುಂದಿನ ಎರಡು ವರ್ಷಗಳಲ್ಲಿ ಕಾಫಿ ಬೆಲೆ ಏರುತ್ತಲೇ ಹೋಗಲಿದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ದಕ್ಷಿಣ ಏಷ್ಯಾ ಮತ್ತು ಲ್ಯಾಟಿನ್ ಅಮೆರಿಕದಾದ್ಯಂತ ಅಕಾಲಿಕ ಮಳೆ, ಬೆಂಕಿ ಮತ್ತು ಅನಾವೃಷ್ಟಿಯಂತಹ ತೀವ್ರತರ ಪ್ರತಿಕೂಲ ಹವಾಮಾನವು ಈಗಾಗಲೇ ಏರುತ್ತಿರುವ ಕಾಫಿ ಬೆಲೆಯನ್ನು ಮತ್ತಷ್ಟು ಹೆಚ್ಚಿಸುವ ಸನ್ನಿವೇಶ ನಿರ್ಮಿಸಿದೆ.

ಕಾಫಿ ಕಡೆಗೆ ಭಾರತೀಯ ಗ್ರಾಹಕರಲ್ಲಿ ಹೆಚ್ಚುತ್ತಿರುವ ಆದ್ಯತೆಯು ಉತ್ಪಾದಕರಿಗೆ ಪ್ರಯೋಜನಕಾರಿಯಾಗಿದೆ ಎಂದು ಸಾಬೀತಾಗಿದೆ. ಹೆಚ್ಚುತ್ತಿರುವ ಬೇಡಿಕೆಯೊಂದಿಗೆ ಸ್ಥಳೀಯ ಮಾರುಕಟ್ಟೆಗಳು ಅಭಿವೃದ್ಧಿ ಹೊಂದುತ್ತಿವೆ. ಜೊತೆಗೆ ಹೆಚ್ಚಿನ ಬೆಳೆಗಾರರು ಉತ್ತಮ ಸ್ಥಿತಿಯಲ್ಲಿದ್ದಾರೆ ಎನ್ನುತ್ತಾರೆ ಕಾಫಿ ಉದ್ಯಮದ ಸಲಹೆಗಾರರೊಬ್ಬರು.

ಭವಿಷ್ಯದಲ್ಲಿ ಬೆಲೆಗಳು ಹೆಚ್ಚಾಗುತ್ತಲೇ ಇರುತ್ತದೆ ಎಂದು ಮಧ್ಯಸ್ಥಗಾರರು ಹಾಗೂ ಉದ್ಯಮ ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ನಿರಂತರ ಪೂರೈಕೆಯಲ್ಲಿ ಉಂಟಾಗುವ ಅಡಚಣೆಗಳಿಂದ ಕಾಫಿ ಬೆಲೆ, ಅದರಲ್ಲಿಯೂ ಅರೇಬಿಕಾ ಬೀನ್ಸ್, 13 ವರ್ಷಗಳಲ್ಲಿ ಅತ್ಯಧಿಕ ಬೆಲೆಯನ್ನು ಮುಟ್ಟಿದೆ. 2024ರಲ್ಲಿ ಬೆಲೆಯು ಸರಿಸುಮಾರು ಶೇ.40ರಷ್ಟು ಹೆಚ್ಚಾಗಿದೆ.

ಜಾಗತಿಕ ಸನ್ನಿವೇಶದಲ್ಲಿ ನೋಡುವುದಾದರೆ, ಕಾಫಿಯ ಉತ್ಪಾದನೆಯಲ್ಲಿ ಮುಂಚೂಣಿಯಲ್ಲಿರುವ ಬ್ರೆಜಿಲ್‌ನಲ್ಲಿನ ಅನಿಯಮಿತ ಹವಾಮಾನದಿಂದ ಕಾಫಿ ದರ ಹೆಚ್ಚಳದಲ್ಲಿ ವೇಗ ಪಡೆದಿದೆ. ಕಡಿಮೆ ಮಳೆ ಮತ್ತು ಬೆಚ್ಚಗಿನ ತಾಪಮಾನವು ದಕ್ಷಿಣ ಅಮೆರಿಕಾ ರಾಷ್ಟ್ರದಲ್ಲಿನ ಕಾಫಿ ಉತ್ಪಾದನೆಯನ್ನು ಘಾಸಿಗೊಳಿಸಿದೆ. ಬ್ರೆಜಿಲ್ ಉತ್ಪಾದಿಸುವ ಅಗ್ಗದ ರೋಬಸ್ಟಾ ಕಾಫಿ ಬೆಲೆ ಕೂಡ ಜಿಗಿದಿದೆ.

ಕಾಫಿಯ ಎರಡನೇ ಅತಿ ದೊಡ್ಡ ಉತ್ಪಾದಕ ರಾಷ್ಟ್ರ ವಿಯೆಟ್ನಾಂ ಕೂಡ ಅಧಿಕ ಮಳೆಯ ಪರಿಣಾಮವನ್ನು ಎದುರಿಸುತ್ತಿದೆ. ಜೊತೆಗೆ ರೈತರು ದಕ್ಷಿಣ ಏಷ್ಯಾದಲ್ಲಿ ವ್ಯಾಪಕವಾಗಿ ಜನಪ್ರಿಯವಾಗಿರುವ ಡುರಿಯನ್ ಹಣ್ಣನ್ನು ಉತ್ಪಾದಿಸಲು ಮುಂದಾಗಿದ್ದು, ಇದು ಕಾಫಿಗಿಂತ ಹೆಚ್ಚು ಲಾಭದಾಯಕವಾಗಿದೆ.

ಭಾರತೀಯ ಮಾರುಕಟ್ಟೆ ಬೆಳೆಯುವ ನಿರೀಕ್ಷೆ ಇದೆ. ಭಾರತದ ಎರಡು ಮುಖ್ಯ ವಿಧಗಳೆಂದರೆ ಅರೇಬಿಕಾ ಮತ್ತು ರೋಬಸ್ಟಾ, ಅರೇಬಿಕಾವು ಅದರ ಸೌಮ್ಯವಾದ ಸುಗಂಧಭರಿತ ಸುವಾಸನೆಯಿಂದ ರೋಬಸ್ಟಾ ಕಾಫಿಗಿಂತ ಹೆಚ್ಚಿನ ಬೇಡಿಕೆಯನ್ನು ಹೊಂದಿದೆ. ಭಾರತದ ಆಹಾರ ಮತ್ತು ಕೃಷಿ ಸಂಸ್ಥೆಯ ಪ್ರಕಾರ ಭಾರತದಲ್ಲಿ ಉತ್ಪಾದನೆಯಾಗುವ ಒಟ್ಟು ಕಾಫಿಯಲ್ಲಿ ಸುಮಾರು ಶೇ.70ರಷ್ಟು ರಫ್ತು ಮಾಡಲಾಗುತ್ತದೆ. ವಿಶ್ವದ ಒಟ್ಟು ಕಾಫಿ ರಫ್ತಿನಲ್ಲಿ ಭಾರತವು ಐದನೇ ಸ್ಥಾನದಲ್ಲಿದೆ.

ಭಾರತದಲ್ಲಿ ಉತ್ಪಾದನೆಯಾಗುವ ಒಟ್ಟು ಕಾಫಿಯಲ್ಲಿ ಕರ್ನಾಟಕದ ಉತ್ಪಾದನೆಯು ಶೇ.71ರಷ್ಟು ಆಗಿದೆ. ಈ ಪೈಕಿ ಬಹುಪಾಲು ರೋಬಸ್ಟಾ ಎಂಬುದು ಗಮನಾರ್ಹ. ಉಳಿದ ಉತ್ಪಾದನೆಯು ಕೇರಳ, ತಮಿಳುನಾಡು ಮತ್ತು ಈಶಾನ್ಯ ಪ್ರದೇಶದಿಂದ ಬರಲಿದೆ. 2023-24ರ ಸಾಲಿನಲ್ಲಿ ಭಾರತವು 3,74,200 ಮೆಟ್ರಿಕ್ ಟನ್‌ಗಳಷ್ಟು ಕಾಫಿ ಉತ್ಪಾದನೆ ಮಾಡಿದ್ದು, ಅದರಲ್ಲಿ ಕರ್ನಾಟಕವು 2,66,885 ಮೆಟ್ರಿಕ್ ಟನ್‌ಗಳಷ್ಟು ಕೊಡುಗೆ ನೀಡಿದೆ.

ಕಾಫಿ ಬೋರ್ಡ್ ಆಫ್ ಇಂಡಿಯಾ ಮಾಹಿತಿಯಂತೆ ಭಾರತದಲ್ಲಿ ಕಾಫಿ ಉತ್ಪಾದನೆಯಲ್ಲಿ ಅಲ್ಪ ಪ್ರಮಾಣದ ಕುಸಿತವನ್ನು ದಾಖಲಿಸಿದೆ. ಭಾರತದ ಕಾಫಿ ಬೆಳೆಗಾರರು ಹಲವಾರು ಸವಾಲುಗಳನ್ನು ಎದುರಿಸುತ್ತಿದ್ದು, ಈ ಪೈಕಿ ಕಾರ್ಮಿಕರ ಕೊರತೆ ಸಹ ಒಂದಾಗಿದೆ.

ನಾಳೆ ಕಿತ್ತೂರು ರಾಣಿ ಚನ್ನಮ್ಮ ಜಯಂತಿ



ಮೈಸೂರು, ಅ.21-ಶ್ರೀ ಭುವನೇಶ್ವರಿ ಸೇವಾ ಟ್ರಸ್ಟ್ ವತಿಯಿಂದ ಸ್ವಾತಂತ್ರ್ಯದ ಕಹಳೆಯನ್ನು ಮೊಳಗಿಸಿದ ವೀರರಾಣಿ ಕಿತ್ತೂರು ಚನ್ನಮ್ಮ ಜಯಂತಿ ಆಚರಣೆಯನ್ನು ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನದಲ್ಲಿ ಅ.23ರಂದು ಬೆಳಗ್ಗೆ 11 ಗಂಟೆಗೆ ಆಯೋಜಿಸಲಾಗಿದೆ. ಮುಖ್ಯ ಅತಿಥಿಗಳಾಗಿ ಬಿಜೆಪಿ ನಗರ ಅಧ್ಯಕ್ಷ ಎಲ್.ನಾಗೇಂದ್ರ, ಮಹಿಳಾ ಮೋರ್ಚಾ ಅಧ್ಯಕ್ಷೆ ರೇಣುಕಾರಾಜ್, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಹಿರಿಯ ಸಮಾಜ ಸೇವಕ ಕೆ.ರಘುರಾಮ್ ವಾಜಪೇಯಿ, ನಗರಪಾಲಿಕೆ ಮಾಜಿ ಸದಸ್ಯೆ ಪ್ರಮೀಳಾ ಭರತ್, ಬಿಜೆಪಿ ಮೈಸೂರು ನಗರ ಉಪಾಧ್ಯಕ್ಷೆ ಹೇಮಾ ನಂದೀಶ್, ಅಂಬಾ ಭವಾನಿ ಸಮಾಜ ಮಹಿಳಾ ಅಧ್ಯಕ್ಷೆ ಸವಿತಾ ಘಾಟ್ಕೆ ಇನ್ನಿತರರು ಭಾಗವಹಿಸಲಿದ್ದಾರೆ.

ನಾಗವಾಲದಲ್ಲಿ ವಾಲ್ಮೀಕಿ ಜಯಂತಿ



ಮೈಸೂರು ತಾಲೂಕು ನಾಗವಾಲ ಗ್ರಾಮದಲ್ಲಿ ನಡೆದ ವಾಲ್ಮೀಕಿ ಜಯಂತ್ಯುತ್ಸವದಲ್ಲಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ನಾಯಕ ಸಂಘದ ಉಪಾಧ್ಯಕ್ಷ ಕೆಂಪನಾಯಕ, ನಾಯಕ ಸಮುದಾಯದ ಹಿರಿಯ ಮುಖಂಡರಾದ ಟೆನಿಸ್ ಗೋಪಿ, ರಮ್ಮನಹಳ್ಳಿ ಸೋಮಣ್ಣ, ರಮ್ಮನಹಳ್ಳಿ ನಾಗೇಶ್ ಅವರನ್ನು ಗೌರವಿಸಲಾಯಿತು. ಈ ಸಂದರ್ಭದಲ್ಲಿ ಗ್ರಾಮದ ನಾಯಕ ಸಮುದಾಯದ ದೊಡ್ಡ ಯಜಮಾನರಾದ ಸೋಮಶೇಖರ್, ಗ್ರಾಪಂ ಸದಸ್ಯ ಸೋಮನಾಯಕ, ವಿಷಕಂಠನಾಯಕ, ತಿಮ್ಮನಾಯಕ, ಯುವ ಮುಖಂಡರಾದ ಸಿದ್ದನಾಯಕ, ಸಿದ್ದಪ್ಪಾಜಿ, ವಿನೋದ್ ನಾಯಕ, ಶಂಕರ್ ನಾಯಕ, ದ್ಯಾವನಾಯಕ ಇತರರಿದ್ದರು.

ಕಿತ್ತೂರು ರಾಣಿ ಚೆನ್ನಮ್ಮ ಸಂಗ್ರಾಮಕ್ಕೆ 200 ವರ್ಷ: ಅಂಚೆ ಚೀಟಿ ಬಿಡುಗಡೆಗೆ ಕೇಂದ್ರ ನಿರ್ಧಾರ

ಬೆಂಗಳೂರು, ಅ. 21: ಕಿತ್ತೂರು ರಾಣಿ ಚೆನ್ನಮ್ಮ ಅವರು ಬ್ರಿಟಿಷರ ವಿರುದ್ಧ ಸಾರಿದ ಸಂಗ್ರಾಮಕ್ಕೆ 200 ವರ್ಷ ತುಂಬಿದ ಹಿನ್ನೆಲೆ ಅ.23ರಂದು ಚೆನ್ನಮ್ಮ ಅಂಚೆ ಚೀಟಿ ಬಿಡುಗಡೆಗೆ ಕೇಂದ್ರ ಸರ್ಕಾರ ನಿರ್ಧಾರ ಮಾಡಿದೆ. ವಿಜಯದ ಜ್ಞಾಪಕಾರ್ಥವಾಗಿ ರಾಣಿ ಚೆನ್ನಮ್ಮ ಅಂಚೆ ಚೀಟಿ ಬಿಡುಗಡೆ ಮಾಡಲಾಗುತ್ತಿದ್ದು, ಪ್ರಧಾನಿ ನರೇಂದ್ರ ಮೋದಿಗೆ, ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಧನ್ಯವಾದ ಅರ್ಪಿಸಿದ್ದಾರೆ.

ಈ ಬಗ್ಗೆ ಟ್ವೀಟ್ ಮಾಡಿರುವ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ, ಇದೇ ಅಕ್ಟೋಬರ್ 23ಕ್ಕೆ ವೀರ ವನಿತೆ ಕಿತ್ತೂರು ರಾಣಿ ಚೆನ್ನಮ್ಮನವರು ಬ್ರಿಟಿಷರ ವಿರುದ್ಧ ಸಾರಿದ ಸಂಗ್ರಾಮದ ವಿಜಯಕ್ಕೆ 200 ವರ್ಷ ಸಂದಲಿವೆ. ಈ ಐತಿಹಾಸಿಕ ವಿಜಯದ ಜ್ಞಾಪಕಾರ್ಥವಾಗಿ ರಾಣಿ ಚೆನ್ನಮ್ಮನವರ ಅಂಚೆ ಚೀಟಿಯನ್ನು ಬಿಡುಗಡೆ ಮಾಡಲಾಗುತ್ತಿದೆ ಎಂದಿದ್ದಾರೆ.

ರಾಣಿ ಚೆನ್ನಮ್ಮನವರ ಅಂಚೆ ಚೀಟಿಯನ್ನು ಬಿಡುಗಡೆ ಮಾಡುವಂತೆ ಕಿತ್ತೂರು ಕರ್ನಾಟಕ ನಿಯೋಗದ ಪ್ರಮುಖರು, ರಾಜ್ಯಸಭಾ ಸಂಸದರಾದ ಈರಣ್ಣ ಕಡಾಡಿ, ವಿಶ್ವೇಶ್ವರ ಹೆಗಡೆ ಕಾಗೇರಿ, ಶಾಸಕರಾದ ಅರವಿಂದ ಬೆಲ್ಲದ್, ಅಭಯ್ ಪಾಟೀಲ್ ಮತ್ತು ಮಾಜಿ ಸಂಸದರಾದ ಅಣ್ಣಾಸಾಹೇಬ ಜೊಲ್ಲೆ ಹಾಗೂ ಪ್ರಮುಖರೊಂದಿಗೆ ಕೇಂದ್ರ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಅವರನ್ನು ಇತ್ತೀಚೆಗೆ ಭೇಟಿ ಮಾಡಿ, ಆಗ್ರಹಿಸಲಾಗಿತ್ತು.

ಬಳಿಕ ತಕ್ಷಣವೇ ರಾಣಿ ಚೆನ್ನಮ್ಮನ ಅಂಚೆ ಚೀಟಿಯನ್ನು ಇದೇ ಅಕ್ಟೋಬರ್ 23ಕ್ಕೆ ಬಿಡುಗಡೆ ಮಾಡಲು ಭಾರತ ಸರ್ಕಾರ ನಿರ್ಧರಿಸಿದೆ. ಪ್ರಧಾನಿ ಮೋದಿ ಸರ್ಕಾರದ ತ್ವರಿತ ನಿರ್ಧಾರ ಹಾಗೂ ಕಾರ್ಯರೂಪಕ್ಕೆ ಇದು ಕೈಗನ್ನಡಿ ಎಂದು ಹೇಳಿದ್ದಾರೆ. ಇದು ಭಾರತ ಸರ್ಕಾರವು ರಾಣಿ ಚೆನ್ನಮ್ಮನಿಗೆ ಸಲ್ಲಿಸುತ್ತಿರುವ ಗೌರವ. ಈ ತ್ವರಿತ ನಿರ್ಧಾರ ಕೈಗೊಂಡ ಪ್ರಧಾನಿ ಮೋದಿ, ಕೇಂದ್ರ ಸಚಿವರಾದ ಜ್ಯೋತಿರಾದಿತ್ಯ ಸಿಂಧಿಯಾ ಹಾಗೂ ಕೇಂದ್ರ ಸಂವಹನಾ ಸಚಿವಾಲಯಕ್ಕೆ ಪ್ರಹ್ಲಾದ್ ಜೋಶಿ ಹೃತ್ಪೂರ್ವಕ ಧನ್ಯವಾದ ಸಲ್ಲಿಸಿದ್ದಾರೆ.

ರಾಷ್ಟ್ರೀಯ ಈಜು ಸ್ಪರ್ಧೆ: ಚಿನ್ನ ಗೆದ್ದ ಚಿಣ್ಣರು

ಗ್ಲೋಬಲ್ ಸ್ಪೋರ್ಟ್ಸ್‌ನ ಜೀವಾಂಶ್, ರುತ್ವಾಗೆ ಚಿನ್ನದ ಪದಕ



ಸಿಬಿಎಸ್‌ಸಿ ರಾಷ್ಟ್ರೀಯ ಈಜು ಸ್ಪರ್ಧೆಯಲ್ಲಿ ಪದಕ ಪಡೆದ ಸುಬ್ರಹ್ಮಣ್ಯ ಜೀವಾಂಶ್, ಸಾನ್ವಿ, ರುತ್ವಾ, ತರಬೇತುದಾರ ಪವನ್ ಕುಮಾರ್, ಕಿಶೋರ್ ಕುಮಾರ್ ಅವರೊಂದಿಗೆ ಪೋಷಕರು.

ಮೈಸೂರು, ಅ.21- ಸಿಬಿಎಸ್‌ಸಿ ರಾಷ್ಟ್ರೀಯ ಈಜು ಕ್ರೀಡಾಕೂಟದಲ್ಲಿ ಮೈಸೂರಿನ ಗ್ಲೋಬಲ್ ಸ್ಪೋರ್ಟ್ಸ್ ಅಸೋಸಿಯೇಷನ್‌ನ ಜೀವಾಂಶ್ 2 ಮತ್ತು ರುತ್ವಾ 1 ಚಿನ್ನದ ಪದಕ, ಸಾನ್ವಿ 1 ಬೆಳ್ಳಿ ಪದಕ ಪಡೆದು ಮೈಸೂರಿನ ಕೀರ್ತಿ ಪತಾಕೆಯನ್ನು ಮೆರೆದಿದ್ದಾರೆ.

ಒಡಿಸ್ಸಾದ ಭುವನೇಶ್ವರದಲ್ಲಿ ಅ.11ರಿಂದ 14ರವರೆಗೆ ನಡೆದ ಸಿಬಿಎಸ್ಸಿ ರಾಷ್ಟ್ರೀಯ ಮಟ್ಟದ ಈಜು ಸ್ಪರ್ಧೆಯಲ್ಲಿ ಮೈಸೂರಿನ ಜೆ.ಪಿ.ನಗರ ನಾಲ್ವಡಿ ಕೃಷ್ಣರಾಜ ಒಡೆಯರ್ ಈಜುಕೊಳದ ಗ್ಲೋಬಲ್ ಸ್ಪೋರ್ಟ್ಸ್ ಅಸೋಸಿಯೇಷನ್‌ನಲ್ಲಿ ತರಬೇತಿ ಪಡೆಯುತ್ತಿರುವ ಮೂರು ಸ್ಪರ್ಧಿಗಳು ಮೂರು ಚಿನ್ನ ಹಾಗೂ ಮೂರು ಬೆಳ್ಳಿ ಪದಕಗಳನ್ನು ಪಡೆದಿದ್ದಾರೆ ಸಿಬಿಎಸ್ಸಿಯ ಅಂತಿಮ ಮಟ್ಟದ ಕ್ರೀಡಾಸ್ಪರ್ಧೆ ಇದಾಗಿದ್ದು, ದುಬೈ, ಒಮಾನ್ ಹೀಗೆ ವಿವಿಧ ದೇಶಗಳು ಸೇರಿದಂತೆ 500ಕ್ಕೂ ಹೆಚ್ಚು ಸ್ಪರ್ಧಿಗಳು ಭಾಗವಹಿಸಿದ್ದರು.

ಚಿನ್ನ ಗೆದ್ದ ಚಿಣ್ಣರು: ಜೀವಾಂಶ್: ಮೈಸೂರಿನ ಜೆ.ಪಿ.ನಗರದ ಡಿಎವಿ ಶಾಲೆಯಲ್ಲಿ 8ನೇ ತರಗತಿ ಓದುತ್ತಿರುವ ಸುಬ್ರಹ್ಮಣ್ಯ ಜೀವಾಂಶ್; 100 ಮೀ. ಬಟರ್ ಫ್ಲೈನಲ್ಲಿ ಚಿನ್ನ, 200 ಮೀ. ಬಟರ್ ಫ್ಲೈನಲ್ಲಿ ಚಿನ್ನ, 200 ಮೀ. ವೈಯಕ್ತಿಕ ಮೆಡ್ಲಿಯಲ್ಲಿ ಬೆಳ್ಳಿ ಪದಕ ಪಡೆದು ಅತ್ಯುತ್ತಮ ಪ್ರದರ್ಶನ ನೀಡಿದ್ದಾರೆ.

ರುತ್ವಾ: ಸೇಂಟ್ ಥಾಮಸ್ ಶಾಲೆಯಲ್ಲಿ 5ನೇ ತರಗತಿಯ ರುತ್ವಾ 50 ಮೀ. ಬಟರ್ ಫ್ಲೈನಲ್ಲಿ ಚಿನ್ನ, 100 ಮೀ. ಫ್ರೀ ಸ್ಟೈಲ್‌ನಲ್ಲಿ ಬೆಳ್ಳಿ ಪದಕ ಪಡೆದಿದ್ದಾರೆ.

ಸಾನ್ವಿ: ಡಿಎವಿ ಪಬ್ಲಿಕ್ ಶಾಲೆಯಲ್ಲಿ 5ನೇ ತರಗತಿ ಓದುತ್ತಿರುವ ಸಾನ್ವಿ 200 ಮೀ. ವೈಯಕ್ತಿಕ ಮೆಡ್ಲಿಯಲ್ಲಿ ಬೆಳ್ಳಿ ಪದಕ ಪಡೆದಿದ್ದಾರೆ.

ಮೈಸೂರಲ್ಲಿದ್ದಾರೆ ಮುಖ್ಯಮಂತ್ರಿ ಸಿದ್ದರಾಮಯ್ಯ

ಇಂದು ಸ್ವಕ್ಷೇತ್ರ ವರುಣದಲ್ಲಿ 501.81 ಕೋಟಿಯ ಅಭಿವೃದ್ಧಿ ಕಾಮಗಾರಿಗೆ ಶಂಕುಸ್ಥಾಪನೆ, ಕಟ್ಟಡಗಳ ಉದ್ಘಾಟನೆ

ಮೈಸೂರು,ಅ.21(ಪಿಎಂ)- ಮುಖ್ಯಮಂತ್ರಿ ಸಿದ್ದರಾಮಯ್ಯ ಸೋಮವಾರ ಸಂಜೆ ಮೈಸೂರಿಗೆ ಆಗಮಿಸಿದರು.



ಮಂಗಳವಾರ (ಅ.22) ಬೆಳಗ್ಗೆ 11ಕ್ಕೆ ಟಿ.ನರಸೀಪುರ ತಾಲೂಕಿನ ತಾಯೂರು ಗೇಟ್‌ನಲ್ಲಿ ಜಿಲ್ಲಾಡಳಿತ ಮತ್ತು ಜಿಪಂ ವತಿಯಿಂದ ಹಮ್ಮಿಕೊಂಡಿರುವ ವರುಣ ವಿಧಾನಸಭಾ ಕ್ಷೇತ್ರದ ವಿವಿಧ ಕಾಮಗಾರಿಗಳ ಶಂಕುಸ್ಥಾಪನೆ ಮತ್ತು ಅಭಿವೃದ್ಧಿ ಯೋಜನೆಗಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

ಆ ಮೂಲಕ ತಮ್ಮ ಸ್ವಕ್ಷೇತ್ರ ವರುಣ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ 501.81 ಕೋಟಿ ರೂ. ಮೌಲ್ಯದಲ್ಲಿ ಕಾಮಗಾರಿಗಳ ಶಂಕುಸ್ಥಾಪನೆ, ಕಟ್ಟಡಗಳ ಉದ್ಘಾಟನೆ ಹಾಗೂ ಫಲಾನುಭವಿಗಳಿಗೆ ಸವಲತ್ತು ವಿತರಣೆ ಕಾರ್ಯಕ್ರಮಗಳ ಉದ್ಘಾಟನೆಯನ್ನು ಮುಖ್ಯಮಂತ್ರಿಗಳು ನೆರವೇರಿಸಲಿದ್ದಾರೆ. ಬಳಿಕ ಬೆಂಗಳೂರಿಗೆ ತೆರಳಲಿದ್ದಾರೆ.

ಕುಟುಂಬದವರ ಸಹಕಾರ ಸಾಧನೆಗೆ ಸಾಕಾರ

ಮಹಿಳಾ ಸಾಧಕಿಯರನ್ನು ಸನ್ಮಾನಿಸಿದ ಮೌಂಟ್ ಎವರೆಸ್ಟ್ ಏರಿದ ಮಹಿಳಾ ಸಾಧಕಿ ಡಾ.ಉಷಾ ಹೆಗ್ಡೆ ಅಭಿಮತ



ವಿವಿಧ ಕ್ಷೇತ್ರದ ಮಹಿಳಾ ಸಾಧಕಿಯರಾದ ಶಾರದಾ ವಿಲಾಸ ಕಾಲೇಜು ಪ್ರಾಂಶುಪಾಲರಾದ ಡಾ.ಎಂ.ದೇವಿಕಾ, ನಿವೃತ್ತ ಅಧ್ಯಾಪಕಿ ಪ್ರೊ.ಎ.ಶಶಿಕಲಾ, ಕಲಾವಿದರಾದ ಸುಮಿತ್ರಾ ಪುಟ್ಟಿ, ಡಾ.ರಾಧಾ ಮಲ್ಲಪ್ಪ, ನೃತ್ಯಪಟು ಡಾ.ನಂದನ ಕೃಷ್ಣಕುಮಾರ್, ಚಿತ್ರಕಲಾವಿದೆ ವಿಜಯ, ಆಯುರ್ವೇದ ವೈದ್ಯೆ ಡಾ.ವಿ.ಸ್ಮಿತಾ, ಹೇಮಾ ಶಶಿಕುಮಾರ್ ಅವರನ್ನು ಸನ್ಮಾನಿಸಲಾಯಿತು.

ಮೈಸೂರು, ಅ.21(ಎಸ್‌ಪಿಎನ್)- ಸಾಧನೆಗೆ ವಯಸ್ಸು ಅಡ್ಡಿಯಲ್ಲ. ಆದರೆ, ತಾವು ಕೈಗೊಂಡ ಸಾಧನೆಗೆ ಕುಟುಂಬದವರ ಸಹಕಾರ ಅತೀಮುಖ್ಯ ಎಂದು ಮೌಂಟ್ ಎವರೆಸ್ಟ್ ಏರಿದ ಮೈಸೂರಿನ ಸಾಧಕಿ ಹಾಗೂ ಜೆಎಸ್‌ಎಸ್ ಮೆಡಿಕಲ್ ಕಾಲೇಜು ದಂತ ವೈದ್ಯಕೀಯ ವಿಭಾಗದ ಪ್ರಾಧ್ಯಾಪಕಿ ಡಾ.ಉಷಾ ಹೆಗ್ಡೆ ಅಭಿಪ್ರಾಯಪಟ್ಟರು.

ಮೈಸೂರು-ಗದ್ದಿಗೆ ರಸ್ತೆಯಲ್ಲಿರುವ ಧ್ಯಾಲೋಕದಲ್ಲಿ ಆಯೋಜಿಸಿದ್ದ ಲೋಟಸ್ ಅಂಡ್ ಲಿಲಿಸ್ ಎಕ್ಸಾಟ್ರವಗಾಂಜಾ (lotus and lilies extravaganza) ಸಂಸ್ಥೆ ವತಿಯಿಂದ ಆಯೋಜಿಸಿದ್ದ ವಿವಿಧ ಕ್ಷೇತ್ರದ ಮಹಿಳಾ ಸಾಧಕಿಯರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದರು.


ಮೌಂಟ್ ಎವರೆಸ್ಟ್ ಏರಲು ಹಲವು ವರ್ಷದ ತಯಾರಿಗಳನ್ನು ಮಾಡಿಕೊಳ್ಳಬೇಕು. ಈ ಸಾಧನೆ ಸುಲಭವಾಗಿ ನನಗೆ ದಕ್ಕಿದ್ದಲ್ಲ. ಮೊದಲಿಗೆ 17,598 ಅಡಿ ಎತ್ತರದಲ್ಲಿರುವ ಬೇಸ್ ಕ್ಯಾಂಪ್‌ನಲ್ಲಿ ತರಬೇತಿ ಪಡೆಯಲಾಯಿತು. ಎರಡನೇ ಹಂತವಾಗಿ ಕ್ಯಾಂಪ್ 1ಕ್ಕೆ (19,685 ಅಡಿ) ತಲುಪಿ ಮುಂದಿನ ಹಂತಕ್ಕೆ ಸಜ್ಜಾಗಲು ಅಗತ್ಯವಾದ ಸಿದ್ಧತೆ ಮಾಡಿಕೊಳ್ಳಬೇಕು. ನಂತರ ಆರಂಭವಾಗುವುದೇ ಕಠಿಣ ಹಾದಿ, ಅಲ್ಲಿಂದ ಹಂತ ಹಂತವಾಗಿ ಕ್ಯಾಂಪ್ 2 (21,000 ಅಡಿ) ಕ್ಯಾಂಪ್ 3 (23,625 ಅಡಿ), ಕ್ಯಾಂಪ್ 4 (26,085 ಅಡಿ) ರ ಅಪಾಯಕಾರಿ ಹಾದಿಗಳನ್ನು ಸಾಗಿ ಅಂತಿಮವಾಗಿ ಎವರೆಸ್ಟ್‌ನ ಏರಿದ (29,029 ಅಡಿ) ಕ್ಷಣವನ್ನು ವಿವರಿಸಿದರು.

ಹಲವು ವರ್ಷಗಳಿಂದ ವೈದ್ಯಕೀಯ ವಿದ್ಯಾರ್ಥಿಗಳ ಬೋಧನೆಯ ಜೊತೆಗೆ ಕ್ರೀಡಾ ಚಟುವಟಿಕೆಗಳಲ್ಲೂ ತೊಡಗಿಸಿಕೊಂಡಿದ್ದೇನೆ. ಅಂತೆಯೇ ಬೆಂಗಳೂರು, ಮುಂಬೈ ಮ್ಯಾರಥಾನ್‌ಗಳಲ್ಲಿ ಹಲವು ಬಾರಿ ಭಾಗವಹಿಸಿದ್ದೇನೆ ಎಂದು ತಮ್ಮ ಸಾಧನೆಯ ಹಾದಿಯನ್ನು ತಿಳಿಸಿದರು. ನನ್ನಂತೆ ಇಲ್ಲಿ ಸನ್ಮಾನಿತರಾಗಿರುವ ಇತರೆ ಸಾಧಕಿಯರು ಬೇರೆ ಬೇರೆ ಕ್ಷೇತ್ರದಲ್ಲಿ ಸಾಧನೆ ಮಾಡಿರುವುದು ಸಂತೋಷದ ಸಂಗತಿ. ಈ ಸಂತೋಷದಲ್ಲಿ ನನ್ನ ಕುಟುಂಬದವರ ಸಹಕಾರ ದೊಡ್ಡದು ಎಂದರು.

ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಶಾರದಾ ವಿಲಾಸ ಕಾಲೇಜಿನ ಪ್ರಾಂಶುಪಾಲರಾದ ಡಾ.ಎಂ.ದೇವಿಕಾ, ನಿವೃತ್ತ ಅಧ್ಯಾಪಕಿ ಪ್ರೊ.ಎ.ಶಶಿಕಲಾ, ಕಲಾವಿದರಾದ ಸುಮಿತ್ರಾ ಪುಟ್ಟಿ, ಡಾ.ರಾಧಾ ಮಲ್ಲಪ್ಪ, ನೃತ್ಯಪಟು ಡಾ.ನಂದನ ಕೃಷ್ಣಕುಮಾರ್, ಚಿತ್ರಕಲಾವಿದೆ ವಿಜಯ, ಆಯುರ್ವೇದ ವೈದ್ಯೆ ಡಾ.ವಿ.ಸ್ಮಿತಾ, ಹೇಮಾ ಶಶಿಕುಮಾರ್ ಅವರನ್ನು ಸನ್ಮಾನಿಸಲಾಯಿತು.

ಈ ವೇಳೆ ಲೋಟಸ್ ಅಂಡ್ ಲಿಲಿಸ್ ಎಕ್ಸಾಟ್ರವಗಾಂಜ ಮುಖ್ಯಸ್ಥರಾದ ಸಂಧ್ಯಾ ಮಂಜುನಾಥ್, ಸಂಚಾಲಕಿ ಸುಮನ ಅರಸ್, ಪದಾಧಿಕಾರಿಗಳಾದ ಶಾರದಾ ರಾಮಚಂದ್ರ ಪೂರ್ಣಿಮಾ, ಲೋಟಸ್ ರಾಘವೇಂದ್ರ ಪಾಟೀಲ್, ಶಶಿಕಲಾ ಉಪಸ್ಥಿತರಿದ್ದರು.

ರಾಜ್ಯದಲ್ಲಿ ಒಳಮೀಸಲಾತಿ ಜಾರಿಗೆ ಸಿಎಂ ಸಿದ್ದರಾಮಯ್ಯರಿಗೆ ಕರ್ನಾಟಕ ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆ ಮನವಿ



ಒಳಮೀಸಲಾತಿ ಜಾರಿಗೆ ಒತ್ತಾಯಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಕರ್ನಾಟಕ ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆ ಅಧ್ಯಕ್ಷರೂ ಆದ ಹಿರಿಯ ವಕೀಲ ಎಸ್. ಅರುಣ್‌ಕುಮಾರ್ ಮನವಿ ಸಲ್ಲಿಸಿದರು. ಈ ವೇಳೆ ಬೂದಿತಿಟ್ಟು ರಾಜೇಂದ್ರ ಶಿವಕುಮಾರ್, ದಾಸಯ್ಯ, ಚಂದ್ರಸೇನ ಸಾಗರ್, ಮಲ್ಲಪ್ಪ, ವಿನಾಯಕ್, ಸುರೇಂದ್ರ ಮತ್ತಿತರರಿದ್ದರು.

ಮೈಸೂರು, ಅ.21(ಎಸ್‌ಬಿಡಿ)- ಸುಪ್ರೀಂ ಕೋರ್ಟ್ ಆದೇಶದಂತೆ ರಾಜ್ಯದಲ್ಲಿ ಒಳಮೀಸಲಾತಿ ಜಾರಿ ಮಾಡುವಂತೆ ಕೋರಿ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಕರ್ನಾಟಕ ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆ ಮನವಿ ನೀಡಿದೆ.

ಮೈಸೂರಿನಲ್ಲಿ ಸೋಮವಾರ ವೇದಿಕೆ ಅಧ್ಯಕ್ಷರೂ ಆದ ಹಿರಿಯ ವಕೀಲ ಎಸ್.ಅರುಣ್‌ಕುಮಾರ್ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿ, ಒಳಮೀಸಲಾತಿ ಜಾರಿಗೆ ಆಗ್ರಹಿಸಿದರು. ಈ ವೇಳೆ ಬೂದಿತಿಟ್ಟು ರಾಜೇಂದ್ರ ಶಿವಕುಮಾರ್, ದಾಸಯ್ಯ, ಚಂದ್ರಸೇನಸಾಗರ್, ಮಲ್ಲಪ್ಪ, ವಿನಾಯಕ್, ಸುರೇಂದ್ರ ಮತ್ತಿತರರಿದ್ದರು.

ಮನವಿಯಲ್ಲಿರುವುದು: ಕರ್ನಾಟಕದ ಮಾದಿಗ ಸಮುದಾಯವು ಒಳಮೀಸಲಾತಿಗಾಗಿ ಬಹಳ ವರ್ಷಗಳಿಂದ ಹೋರಾಡುತ್ತಿದೆ. ಈ ಮಾದಿಗ ಸಮುದಾಯವು ಇನ್ನೂ ತನಗೆ ಸಿಗಬೇಕಾದ ಸಾಮಾಜಿಕ ನ್ಯಾಯವನ್ನು ಪಡೆಯಲು ಸಾಧ್ಯವಾಗಿಲ್ಲ. ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಅವರ ನೇತೃತ್ವದ 7 ನ್ಯಾಯಾಧೀಶರ ಸಾಂವಿಧಾನಿಕ ಪೀಠ, ಪರಿಶಿಷ್ಟ ಜಾತಿಯೊಳಗಿನ ಒಳ ಮೀಸಲಾತಿಗೆ ಸಂಬಂಧಿಸಿದಂತೆ ಕಳೆದ ಆಗಸ್ಟ್ 1ರಂದು ತೀರ್ಪು ನೀಡಿದೆ. ಆ ತೀರ್ಪಿನನ್ವಯ ಪರಿಶಿಷ್ಟ ಜಾತಿಯೊಳಗಿನ ಒಳಮೀಸಲಾತಿಯು ಭಾರತೀಯ ಸಂವಿಧಾನದ ಅನುಚ್ಛೇದ 14 ಮತ್ತು 341ರ ಉಲ್ಲಂಘನೆಯಲ್ಲ ಎಂದು ಹೇಳಿದೆ. ವೈಜ್ಞಾನಿಕ ದತ್ತಾಂಶವನ್ನು ಸಂಗ್ರಹ ಮಾಡಿರುವ ರಾಜ್ಯಗಳು ಮಾತ್ರ ಪರಿಶಿಷ್ಟ ಜಾತಿಯೊಳಗೆ ಒಳ ಮೀಸಲಾತಿಯನ್ನು ಜಾರಿಗೆ ತರಬಹುದೆಂದು ಐತಿಹಾಸಿಕ ತೀರ್ಪಿನಲ್ಲಿ ತಿಳಿಸಿದೆ.

ಕರ್ನಾಟಕದಲ್ಲಿ ಹಿಂದೆ ಬಿಜೆಪಿ ಸರ್ಕಾರ ಮತ್ತು ಪ್ರಸ್ತುತ ಕಾಂಗ್ರೆಸ್ ಸರ್ಕಾರದ ಕ್ಯಾಬಿನೆಟ್‌ನಲ್ಲಿ ಸದಾಶಿವ ಆಯೋಗದ ವರದಿಯನ್ನು ಒಪ್ಪಿಕೊಂಡಿವೆ. ಈ ಆಯೋಗದ ವರದಿಯಲ್ಲಿ ಕರ್ನಾಟಕದ ಪರಿಶಿಷ್ಟ ಜಾತಿ ಸಮುದಾಯದೊಳಗಿನ ವಿವಿಧ ಜಾತಿ ಗುಂಪುಗಳ ಸಾಮಾಜಿಕ, ಶೈಕ್ಷಣಿಕ ಮತ್ತು ಜನಸಂಖ್ಯೆಯ ಬಗ್ಗೆ ಆಳವಾದ ಅಧ್ಯಯನ ಮಾಡಿ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಸದಾಶಿವ ಆಯೋಗದ ವರದಿಯನ್ನು 2012ರಲ್ಲಿ ಅಂದಿನ ಬಿಜೆಪಿ ಸರ್ಕಾರವು ಅನುಮೋದಿಸಿದೆ.

ಆಗಿನ ಕಾನೂನು ಸಚಿವ ಮಾಧುಸ್ವಾಮಿ ನೇತೃತ್ವದಲ್ಲಿ ಉಪಸಮಿತಿಯನ್ನು ರಚಿಸಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮೀಸಲಾತಿಯನ್ನು ಶೇ.18ರಿಂದ ಶೇ.24ಕ್ಕೆ ಹೆಚ್ಚಿಸಲಾಯಿತು. ಪರಿಶಿಷ್ಟ ಜಾತಿಗೆ ಮಾದಿಗ ಮತ್ತು ಸಂಬಂಧಿತ ಜಾತಿಗಳಿಗೆ ಶೇ.6 ಸೇರಿದಂತೆ ಆಂತರಿಕ ಮೀಸಲಾತಿ ವಿಂಗಡಿಸಲಾಯಿತು. ಪರಿಶಿಷ್ಟ ಜಾತಿಗಳಿಗೆ ಮೀಸಲಾತಿಯನ್ನು ಶೇ.15ರಿಂದ 17ಕ್ಕೆ ಹೆಚ್ಚಿಸಿ, ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಲಾಯಿತು. ಪ್ರಸ್ತುತ ಸರ್ಕಾರ ನಡೆಸುತ್ತಿರುವ ಕಾಂಗ್ರೆಸ್, ಚುನಾವಣಾ ಪ್ರಣಾಳಿಕೆಯಲ್ಲಿ ಸದಾಶಿವ ಆಯೋಗದ ವರದಿಯನ್ನು ಜಾರಿಗೆ ತರುವುದಾಗಿ ಸ್ಪಷ್ಟವಾಗಿ ಹೇಳಿತ್ತು. ಅಧಿಕಾರಕ್ಕೆ ಬಂದ ನಂತರ ಕ್ಯಾಬಿನೆಟ್ ಸಭೆಯಲ್ಲಿ ಈ ಆಯೋಗದ ವರದಿಯನ್ನು ಅಂಗೀಕರಿಸಿದೆ.

ಹರಿಯಾಣ ಸರ್ಕಾರವು ತನ್ನ ಮೊದಲ ಕ್ಯಾಬಿನೆಟ್ ಸಭೆಯಲ್ಲಿ ಪರಿಶಿಷ್ಟ ಜಾತಿಯೊಳಗಿನ ಆಂತರಿಕ ಮೀಸಲಾತಿಗೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್ ತೀರ್ಪನ್ನು ಜಾರಿಗೆ ತಂದಿದೆ. ತೆಲಂಗಾಣದ ಪ್ರಸ್ತುತ ಕಾಂಗ್ರೆಸ್ ಸರ್ಕಾರವು 2 ತಿಂಗಳ ಕಾಲಮಿತಿಯೊಳಗೆ ಪ್ರಾಯೋಗಿಕ ದತ್ತಾಂಶವನ್ನು ಸಂಗ್ರಹಿಸಲು ಸಮಿತಿ ರಚಿಸಿ, ಅಲ್ಲಿಯವರೆಗೆ ಸರ್ಕಾರಿ ವಲಯದಲ್ಲಿ ಯಾವುದೇ ಬ್ಯಾಕ್‌ಲಾಗ್ ಅಥವಾ ಹೊಸ ನೇಮಕಾತಿ ನಡೆಸುವುದಿಲ್ಲ ಎಂದು ಹೇಳಿದೆ. ನಮ್ಮ ರಾಜ್ಯದಲ್ಲೂ ಬ್ಯಾಕ್‌ಲಾಗ್ ಉದ್ಯೋಗಗಳು ಅಥವಾ ಹೊಸ ಉದ್ಯೋಗಗಳ ಭರ್ತಿಗೆ ಸಂಬಂಧಿಸಿದಂತೆ ನೇಮಕಾತಿ ಪ್ರಕ್ರಿಯೆ ಸ್ಥಗಿತಗೊಳಿಸಲು ನಿರ್ದೇಶನ ನೀಡಿ, ಪರಿಶಿಷ್ಟ ಜಾತಿ ಒಳಮೀಸಲಾತಿ ಕುರಿತು ಸುಪ್ರೀಂ ಕೋರ್ಟ್ ತೀರ್ಪಿನ ನಂತರ ನೇಮಕಾತಿ ಮಾಡಿದ ಎಲ್ಲಾ ಬ್ಯಾಕ್‌ಲಾಗ್ ಹುದ್ದೆಗಳನ್ನೂ ಅನೂರ್ಜಿತ ಎಂದು ಘೋಷಿಸಬೇಕು ಎಂದು ಕರ್ನಾಟಕ ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆ ಪರವಾಗಿ ಮನವಿ ಮಾಡಿಕೊಳ್ಳುತ್ತಿದ್ದೇವೆ.

ಮಾನ್ಯ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ ಚಾಮರಾಜನಗರ

ಅಸಲು ದಾವಾ ಸಂಖ್ಯೆ: 359 /2020

ವಾದಿ: ಗುರುವಮ್ಮ ಕೋಂ, ಲೇ ವಿಷಕಂಠ ವಯಸ್ಸು 58 ವರ್ಷ ಹಾಲಿ ವಾಸ: ಕೊಡುಮಂಗಳೂರು ಗ್ರಾಮ ಜನತಾ ಕಾಲೋನಿ ಸೋಮವಾರಪೇಟೆ ತಾಲ್ಲೂಕು ಕೊಡಗು ಜಿಲ್ಲೆ.

ವಿರುದ್ಧ

ಪ್ರತಿವಾದಿಗಳು: 1. ಮಹದೇವಸ್ವಾಮಿ ಮತ್ತು ಇತರರು

3ಬಿ. ಕುಸುಮ ಬಿನ್. ಲೇ। ಮಹದೇವ ವಯಸ್ಸು 20 ವರ್ಷ ವಾಸ: ವಿಜಯನಗರ ಗ್ರಾಮ ಸರ್ಕಾರಿ ಶಾಲೆಯ ಪಕ್ಕ, ಕೊಡಮಂಗಳೂರು ಸೋಮವಾರಪೇಟೆ ತಾಲ್ಲೂಕು ಕೊಡಗು ಜಿಲ್ಲೆ.

ಸಿ.ಪಿ.ಸಿ ಆದೇಶ 5ನಿಯಮ 20 ರಡಿಯಲ್ಲಿ ನೋಟೀಸ್

ವಾದಿ ಈ ಮೇಲ್ಕಂಡ ದಾವೆಯನ್ನು ಪ್ರತಿವಾದಿಗಳ ವಿರುದ್ಧ ಭಾಗಾಂಶ ಮತ್ತು ಪ್ರತ್ಯೇಕ ಸ್ವಾಧೀನ ಕೋರಿ ದಾವೆ ಸಲ್ಲಿಸಿದ್ದು ಸದರಿ ದಾವೆಯಲ್ಲಿ 3ಬಿ ಪ್ರತಿವಾದಿಗೆ ನ್ಯಾಯಾಲಯದಿಂದ ಅನೇಕ ಬಾರಿ ನೊಟೀಸ್ ಜಾರಿ ಮಾಡಿದ್ದು ಉದ್ದೇಶ ಪೂರ್ವಕವಾಗಿ ಸ್ವೀಕರಿಸಿರುವುದಿಲ್ಲ. ಆದ್ದರಿಂದ ಈ ದಾವೆಯ 3ಬಿ ಪ್ರತಿವಾದಿಯು ದಿನಾಂಕ 27/11/24 ರಂದು ಬೆಳಿಗ್ಗೆ 11-00 ಗಂಟೆಗೆ ಮೇಲ್ಕಂಡ ಘನ ನ್ಯಾಯಾಲಯದಲ್ಲಿ ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗತಕ್ಕದ್ದು ತಪ್ಪಿದ್ದಲ್ಲಿ ಏಕಪಕ್ಷೀಯ ಎಂದು ಪರಿಗಣಿಸಿ ಕಾನೂನು ಪ್ರಕಾರ ಆದೇಶ ಮಾಡಲಾಗುವುದು.

ನ್ಯಾಯಾಲಯದ ಅಪ್ಪಣೆ ಮೇರೆಗೆ
ಸಹಿ/- ಶಿರಸ್ತೇದಾರರು, ಗೌರವಾನ್ವಿತ
ಹೆಚ್ಚುವರಿ ಸಿವಿಲ್ ನ್ಯಾಯಾಲಯ,
ಚಾಮರಾಜನಗರ

ವಾದಿ ಪರ ವಕೀಲರು
ಸಹಿ/- ಕೆ.ಪಿ. ನಾಗರಾಜು, ಬಿ.ಎ.ಎಲ್.ಎಲ್.ಬಿ.
ವಕೀಲರು, ಸಿ.ಎನ್.ಎಸ್. ಬಿಲ್ಡಿಂಗ್,
ಸಂತೇಮರಹಳ್ಳಿ ಸರ್ಕಲ್, ಚಾಮರಾಜನಗರ ಟೌನ್

ನಕ್ಕರೆ ಅದೇ ಸ್ವರ್ಗ

ಪೊಲೀಸ್ : ಈ ಕುರಿ ಮರಿ ಯಾರದು?
ಜೈಲರ್ : ಕುರಿ ಯಾರದು ಅಂತ ಗೊತ್ತಿಲ್ಲ... ಆದರೆ ಮರಿ ಯಾರದು ಅಂತ ಗೊತ್ತು.
ಪೊಲೀಸ್ : ಮರಿ ಯಾರದು?
ಜೈಲರ್ : ಮರಿ ಕುರಿದು ಸಾರ್...

ಮೈಸೂರು ಮಿತ್ರ
ಮಂಗಳವಾರ, 22 ಅಕ್ಟೋಬರ್ 2024
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ನಿಂತ ನೀರಲ್ಲಿ ಬಿಂಬ ನೋಡಿ ನನ್ನಂತಾರಿಲ್ಲವೆಂದು ಬೀಗಬೇಡ
ಮನವೆ ನೀರು ಇಂಗಿದರೆ ಬಿಂಬವೇ ಇರದೆಂಬ ಅತೀ ಸಣ್ಣ ಸತ್ಯವೂ
ಅರಿಯದಿದ್ದರೆ ವಿಪರ್ಯಾಸವಲ್ಲದೆ ಮತ್ತೇನು ಮರುಳೆ...

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮಂಗ ಮೊಸರು ತಿಂದು ಮೇಕೆ ಬಾಯಿಗೆ ಸವರಿದ ಹಾಗಾಯಿತು.

ನಿಮ್ಮ ಪತ್ರಗಳು

ಕನ್ನಡ ಭಾಷೆ ಅಸ್ಮಿತೆಯನ್ನು ಉಳಿಸುವಂತಾಗಬೇಕು

ಮಾನ್ಯರೆ,

ಇದೇ ಡಿಸೆಂಬರ್ ತಿಂಗಳಲ್ಲಿ ಮಂಡ್ಯದಲ್ಲಿ ನಡೆಯಲಿರುವ 87ನೇ ಮಹಾ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರ ಆಯ್ಕೆ ಕನ್ನಡ ಸಾಹಿತ್ಯ ಪರಿಷತ್‌ನ ಸದಸ್ಯರ ಅಭಿಪ್ರಾಯವನ್ನು ಆಧರಿಸಿಯೇ ಆಗಬೇಕು. ಸದಸ್ಯರು ಪೋಸ್ಟ್ ಕಾರ್ಡಿನಲ್ಲಿ ಬರೆದು ಅಥವಾ ಇ- ಮೇಲ್ ಮುಖಾಂತರ ತಮ್ಮ ಅಭಿಪ್ರಾಯ ತಿಳಿಸಲು ಅವಕಾಶ ಮಾಡಿಕೊಟ್ಟರೆ ಆಗ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆ ಸುಲಭವಾಗಿ ನೆರವೇರುತ್ತದೆ. ಆಗ ಬಹುಮತದ ಅಧ್ಯಕ್ಷರ ಆಯ್ಕೆ ನಡೆಯುತ್ತದೆ. ಯಾರ ಒತ್ತಡವೂ, ಪ್ರಭಾವವೂ ಇಲ್ಲದೇ ಆಗುತ್ತದೆ.

ಈಗಾಗಲೇ, ಹಿರಿಯ ರಾಜಕಾರಣಿಗಳ ಹೆಸರು, ಕೆಲವು ಮಠಾಧೀಶರುಗಳ ಹೆಸರು, ಸಾಹಿತಿಗಳು ಮತ್ತು ಕೆಲವು ಉದ್ಯಮಿಗಳ ಹೆಸರು ಅಧ್ಯಕ್ಷ ಸ್ಥಾನದ ಆಯ್ಕೆ ಪಟ್ಟಿಯಲ್ಲಿ ಇವೆ ಎಂದು ಸಾಹಿತ್ಯ ಪರಿಷತ್ ಅಧ್ಯಕ್ಷರು ಮಾಧ್ಯಮಗಳ ಮುಂದೆ ಹೇಳಿಕೆ ನೀಡಿದ್ದಾರೆ. ಈ ಹೆಸರುಗಳ ಪಟ್ಟಿಗೆ ಖ್ಯಾತ ಶಿಕ್ಷಣ ತಜ್ಞರು ಮತ್ತು ಸಾಹಿತಿಯೂ ಆದ ಡಾ.ಗುರುರಾಜ್ ಕರ್ಜಗಿ ಮತ್ತು ಸಾಹಿತಿ, ಉದ್ಯಮಿಯೂ ಆದ ಇನ್ಫೋಸಿಸ್ ಸಂಸ್ಥೆಯ ಮುಖ್ಯಸ್ಥೆ ಸುಧಾಮೂರ್ತಿ ಅವರನ್ನು ಸೇರಿಸಿ, ಒಟ್ಟಿನಲ್ಲಿ 87ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು ಕನ್ನಡ ಭಾಷೆಯ ಅಸ್ಮಿತೆಯನ್ನು ಉಳಿಸುವಂತವರಾಗಬೇಕು. ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಹೇಶ್ ಜೋಶಿಯವರು ತಮ್ಮ ಇಗೋಯಿಸಂ ಅನ್ನು ಬಿಟ್ಟು ಎಲ್ಲರ ಅಭಿಪ್ರಾಯವನ್ನು ಪಡೆದು ನಿರ್ಣಯಿಸಬೇಕು.

-ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ದಸರಾ ಭದ್ರತೆ-ಸುರಕ್ಷತೆಗಾಗಿ ಪೊಲೀಸರಿಗೆ ಧನ್ಯವಾದಗಳು

ಮಾನ್ಯರೆ,

ಮೈಸೂರಿನ ಹೆಮ್ಮೆಯ ನಾಡಹಬ್ಬ ದಸರಾ ಹಬ್ಬದ ಅಂಗವಾಗಿ ಅನೇಕ ಕಾರ್ಯಕ್ರಮಗಳು ಶುರುವಾದ ದಿನದಿಂದ ಹಿಡಿದು ದಸರಾ ಮುಗಿಯುವವರೆಗೆ, ಅದರಲ್ಲೂ ಯುವ ಸಂಭ್ರಮ, ಯುವ ದಸರಾ, ಫಲಪುಷ್ಪ ಪ್ರದರ್ಶನ, ವಸ್ತುಪ್ರದರ್ಶನ, ಆಹಾರ ಮೇಳ, ಅನೇಕ ಕಾರ್ಯಕ್ರಮಗಳ ಮನರಂಜನೆ ಪಡೆಯುವುದಕ್ಕಾಗಿ ಲಕ್ಷಾಂತರ ಸಾರ್ವಜನಿಕರು ಮೈಸೂರಿನಲ್ಲಿ ಬೀಡುಬಿಟ್ಟಿದ್ದರು. ದಸರಾ ಎಲ್ಲಾ ಕಾರ್ಯಕ್ರಮಗಳಿಗೆ ಸೂಕ್ತ ಭದ್ರತೆ ಕಲ್ಪಿಸಿ, ಅವುಗಳೆಲ್ಲಾ ಯಶಸ್ವಿಯಾಗಲು ಕಾರಣಕರ್ತರಾದ, ಜೊತೆಗೆ ಈಗಲೂ ದೀಪಾಲಂಕಾರ ಕಣ್ತುಂಬಿಕೊಳ್ಳಲು ಬರುತ್ತಿರುವ ಅಪಾರ ಜನರಿಗೆ ಭದ್ರತೆ ನೀಡುತ್ತಿರುವ ಪೊಲೀಸರಿಗೆ ನಾಡಿನ ಸಮಸ್ತ ಜನತೆಯ ಪರವಾಗಿ ಹೃತ್ಪೂರ್ವಕ ಧನ್ಯವಾದಗಳು. ಏಕೆಂದರೆ, ಅವರಿಗೂ ಕುಟುಂಬ ಇರುತ್ತದೆ. ತಮ್ಮ ತಮ್ಮ ಕುಟುಂಬಗಳ ಸದಸ್ಯರೊಂದಿಗೆ ಹಬ್ಬ ಹರಿದಿನಗಳಲ್ಲಿ ಕಾಲ ಕಳೆಯಬೇಕೆಂಬ ಆಸೆಗಳಿದ್ದರೂ ಅವೆಲ್ಲವನ್ನೂ ಬಿಟ್ಟು, ಸರ್ಕಾರದ ಆದೇಶದಂತೆ, ದಸರಾ ಸಮಯದಲ್ಲಿ ರಸ್ತೆಯಲ್ಲಿ ಸಂಚಾರ ನಿಯಮಗಳನ್ನು ಪಾಲಿಸುತ್ತಾ, ರಸ್ತೆಗಳು ತಲುಪುವ ಮಾರ್ಗಗಳನ್ನು ಸೂಚಿಸುತ್ತಾ, ಕಾರ್ಯಕ್ರಮಗಳಲ್ಲಿ ಕಳ್ಳರು, ಅನುಚಿತವಾಗಿ ವರ್ತಿಸುವವರನ್ನು, ಗುಂಪುಗಾರಿಕೆ ಮಾಡಿಕೊಂಡು ಗಲಾಟೆ, ಜಗಳ ಆಗುವುದನ್ನು ತಡೆದು, ಮದ್ಯಪಾನ ಮಾಡಿ ರಸ್ತೆಯಲ್ಲಿ ಬಾಟಲಿಗಳನ್ನು ಬಿಸಾಡಿ ಅನೈರ್ಮಲ್ಯ ಉಂಟು ಮಾಡುವುದನ್ನು ತಪ್ಪಿಸಿ, ವಿಶೇಷವಾಗಿ ಹಿರಿಯರು ಮತ್ತು ಮಹಿಳೆಯರಿಗೆ ವಿಶೇಷ ಭದ್ರತೆ ನೀಡಿ, ಗಾಳಿ, ಮಳೆ, ಚಳಿಯಲ್ಲೂ, ಸರಿಯಾಗಿ ಊಟ, ತಿಂಡಿಯನ್ನೂ ಮಾಡದೆ ಕರ್ತವ್ಯ ನಿರ್ವಹಿಸಿದ್ದಾರೆ. ಅವರಿಗೆ ಜನತೆಯ ಪರವಾಗಿ ಮತ್ತೊಮ್ಮೆ ಹೃತ್ಪೂರ್ವಕ ಧನ್ಯವಾದಗಳು.

-ನಾಗೇಶ್, ಮಾನಸಗಂಗೋತ್ರಿ, ಮೈಸೂರು.

ದಸರಾ ದೀಪಾಲಂಕಾರ ಜನ ಮೆಚ್ಚುಗೆ

ಮಾನ್ಯರೆ,

ಮೈಸೂರು ದಸರಾ ಎಂದರೆ ಪ್ರಸಿದ್ಧಿ, ಪ್ರಖ್ಯಾತಿ ಜಗದ್ವಿಖ್ಯಾತಿ. ಮೈಸೂರು ದಸರಾ ಮುಗಿದು ಕೆಲವು ದಿನಗಳಾಗಿದೆ. ಮಳೆ ನಿಂತರು ಮರದ ಹನಿ ನಿಂತಿಲ್ಲ ಅನ್ನೋ ನಾಣ್ಣುಡಿಯಂತೆ ದಸರಾ ಮುಗಿದರೂ ಈ ಬಾರಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ಸಿಂಗಾರಗೊಂಡಿದ್ದ ವಿದ್ಯುತ್ ದೀಪಾಲಂಕಾರದ ಸೌಂದರ್ಯವನ್ನು ಕಣ್ತುಂಬಿಕೊಂಡಿದ್ದ ಜನತೆ ಈ ಬಾರಿ ತುಂಬಾ ಚೆನ್ನಾಗಿ ಅಲಂಕಾರ ಮಾಡಿದ್ದಾರೆ ಎನ್ನುವ ಮೆಚ್ಚುಗೆಯ ಮಾತುಗಳನ್ನು ಆಡಿ, ಸಂಭ್ರಮಿಸುತ್ತಿದ್ದಾರೆ. ಸರ್ಕಾರಿ ಕಚೇರಿಗಳು ಸೇರಿದಂತೆ ವಿವಿಧ ಕಟ್ಟಡಗಳಿಗೆ, ಮರಗಳಿಗೆ ಸಿಂಗರಿಸಿದ್ದ ದೀಪಗಳು ತುಂಬಾ ಚೆನ್ನಾಗಿತ್ತು. ವಿಶೇಷವಾಗಿ ಚಾಮರಾಜನಗರ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಅಳವಡಿಸಿದ್ದ ಬುದ್ಧ, ಬಸವ, ಅಂಬೇಡ್ಕರ್ ಭಾವಚಿತ್ರ ಇರುವ ವಿದ್ಯುತ್ ದೀಪಾಲಂಕಾರ ಕಣ್ಮನ ಸೆಳೆಯುತ್ತಿತ್ತು. ಚಾಮರಾಜನಗರ ಮತ್ತು ಮೈಸೂರು ಜಿಲ್ಲೆಯ ಸೆಸ್ಕ್ ಅಧಿಕಾರಿ ವೃಂದಕ್ಕೆ ಜನತೆಯ ಪರವಾಗಿ ಧನ್ಯವಾದಗಳು.

-ದಡದಹಳ್ಳಿ ರಮೇಶ್, ಚಂದಕವಾಡಿ ಹೋಬಳಿ, ಚಾಮರಾಜನಗರ ಜಿಲ್ಲೆ

ದಾಹ !

ಮಾನ್ಯರೆ,

ಸುತ್ತಮುತ್ತ ಕವಿದ ಕತ್ತಲು ! (ಅಸ್ವಸ್ಥ: ಅತ್ಯಾಚಾರಗಳ ಗೊಂಚಲು). ತೊಳೆದು ಕಳೆಯಲು ಬೇಕಿದೆ ಬೆಳಕಿನ ಪ್ರವಾಹ, ನೀರಿನದಲ್ಲ; ಅಂತೆಯೇ ಸಮಾಜ ತಳೆಯ ಬೇಕಿದೆ, ದಿವ್ಯದ ದಾಹ (ಆಹ!). -ಸಿಪಿಕೆ, ಹಿರಿಯ ಸಾಹಿತಿಗಳು, ಮೈಸೂರು.

ಮೈಸೂರಿನ ಬಳಿ ಚಿತ್ರನಗರಿ ಸ್ವಾಗತಾರ್ಹ

ಮಾನ್ಯರೆ,

ಮೈಸೂರು ಜಿಲ್ಲೆ ನಂಜನಗೂಡು ತಾಲೂಕು ಸಮೀಪದ ಇಮ್ಮಾವು ಬಳಿ ಸುಮಾರು 160 ಎಕರೆಯಷ್ಟು ವಿಸ್ತಾರವಾದ ಪ್ರದೇಶದಲ್ಲಿ ಚಿತ್ರನಗರಿಯನ್ನು ಸ್ಥಾಪಿಸಲಾಗುವುದೆಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಇತ್ತೀಚೆಗೆ ಮೈಸೂರಿನಲ್ಲಿ ದಸರಾ ಚಲನ ಚಿತ್ರೋತ್ಸವವನ್ನು ಉದ್ಘಾಟಿಸುವ ಸಂದರ್ಭದಲ್ಲಿ ತಿಳಿಸಿದ್ದಾರೆ. ತಾವು 2013 ರಲ್ಲಿ ಪ್ರಥಮ ಬಾರಿಗೆ ರಾಜ್ಯದ ಮುಖ್ಯಮಂತ್ರಿಯಾದ ಅವಧಿಯಲ್ಲಿ ಇಮ್ಮಾವು ಬಳಿ ಚಿತ್ರನಗರಿಗೆ 110 ಎಕರೆ ಜಾಗವನ್ನು ಮೀಸಲಿಟ್ಟಿದ್ದನ್ನು ಸ್ಮರಿಸಿದ ಮುಖ್ಯಮಂತ್ರಿಗಳು ಈಗ ಹೆಚ್ಚುವರಿಯಾಗಿ 50 ಎಕರೆ ಪ್ರದೇಶವನ್ನು ಇದೇ ಉದ್ದೇಶಕ್ಕೆ ಗುರುತಿಸಲಾಗಿದೆ ಎಂದು ಹೇಳಿದ್ದಾರೆ. ಪಾರಂಪರಿಕ ನಗರ, ಅರಮನೆಗಳ ನಗರ, ಮುಂತಾದ ಹೆಗ್ಗಳಿಕೆಗಳಿಗೆ ಪಾತ್ರವಾಗಿರುವ ಹಾಗೂ ಪ್ರವಾಸಿ ಕಲೆಗಳ ನೆಲೆವೀಡಾಗಿರುವ ಮೈಸೂರಿನಲ್ಲಿ ಚಿತ್ರನಗರಿಯನ್ನು ಸ್ಥಾಪಿಸಬೇಕೆಂಬ ಬೇಡಿಕೆ ಹಲವಾರು ವರ್ಷಗಳಿಂದ ಕೇಳಿ ಬರುತ್ತಿದೆ. ಇನ್ನು ಮೂರು ವರ್ಷಗಳ ಒಳಗಾಗಿ ನೂತನ ಚಿತ್ರನಗರಿ ಅಸ್ತಿತ್ವಕ್ಕೆ ಬರಲಿದೆ ಎಂಬ ಮುಖ್ಯಮಂತ್ರಿಗಳ ಮಾತು ಆಶಾದಾಯಕವಾಗಿದೆ.

-ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ವಿವೇಕಾನಂದ ನಗರ, ಮೈಸೂರು



ರಾಘವೇಂದ್ರ ಸಿ.ಎಸ್.
ಉಪನ್ಯಾಸಕರು
ರಾಮಕೃಷ್ಣ ವಿದ್ಯಾಶಾಲಾ, ಮೈಸೂರು
ಮೊ: 9036389640

ಈ ಜೀವನ

ಹಿರಿಯರ ನಡೆ ಬೆಳಕಿಗೆ ಕೊಡೆ

ಮಾತಿಗಿಂತ ಕೃತಿ ಲೇಸು. ಇದೊಂದು ಅದ್ವಿತೀಯ ಅನುಭಾವದ ನೆಲೆಯಲ್ಲಿ ಮೂಡಿನಿಂತ ನುಡಿಮುತ್ತು. ಈ ಅಮೃತ ನುಡಿಗೆ ಇಂಬುಕೊಡುವಂತೆ ಮಕ್ಕಳು ನಾವು ಹೇಳಿದ್ದನ್ನು ಕೇಳುವುದಿಲ್ಲ. ನಾವು ಮಾಡಿದ್ದನ್ನು ಅನುಸರಿಸುತ್ತಾರೆ. ಸ್ವ-ಕಾರ್ಯದ ನಿಮಿತ್ತ ಪರಮ ಪೂಜ್ಯ ಸ್ವಾಮೀಜಿಯೊಬ್ಬರು ಆಡಿದ ಕಲ್ಲುಸಕ್ಕರೆಯಂತಹ ಸವಿಪಾಕದ ಸಿಹಿತಿರುಳಿನ ನುಡಿಯಿದು. ಒಮ್ಮೆ ಪೂಜ್ಯರಲ್ಲಿಗೆ ಭೇಟಿ ನೀಡಿದಾಗ ಮಗಳು ಸೇರಿದಂತೆ ತಮ್ಮನ ಮಕ್ಕಳು ಪೂಜ್ಯ ಸ್ವಾಮೀಜಿ ಪಾದಗಳನ್ನು ಮುಟ್ಟಿ ನಮಸ್ಕರಿಸಿದಾಗ ಹೇಳಿದ ಈ ನುಡಿಗಳು ಕ್ಷಣ ಕಾಲ ಅನೇಕ ಆಲೋಚನೆಗಳ ಕಡೆಗೆ ಗಮನ ನೀಡುವಂತೆ ಮಾಡಿತು. ಆ ಕ್ಷಣದಿ ಮೂಡಿದ ವಿಚಾರವಂತಿಕೆ ಸಂಗತಿಗಳನ್ನು ತಮ್ಮೊಂದಿಗೆ ಹಂಚಿಕೊಳ್ಳಲಿದ್ದೇನೆ.

ಹಿರಿಯರು-ಬಲ್ಲವರು (ಅನುಭಾವಿಗಳು ಆರದ ದೀಪ) ಹೇಳುವ ಅಸಾಮಾನ್ಯ ಮಾತೆಂದರೆ 'ಕಾಲ ಕೆಟ್ಟೋಯ್ತು ನಮ್ಕಾಲದಲ್ಲಿ ಇಂಗೆಲ್ಲ ಇರ್ಲಿಲ್ಲ, ನಮ್ಕಾಲ ತುಂಬಾ ಚೆನ್ನಾಗಿತ್ತು. ಇವತ್ತಿನ ಯುವಕರಿಗೆ ಏನು ಹೇಳಿದ್ರು ಅದ್ಕೊಂದು ಮಾರ್ನುಡಿ-ಕೊಂಕುಮಾತು ಆಡುತ್ತಿರುತ್ತಾರೆ.

ಬದಲಾವಣೆ ಜಗದ ನಿಯಮ. ಕಾಲಕ್ಕೆ ಬದಲಾದಂತೆ ಮನುಷ್ಯನು ಕೂಡ ಬದಲಾಗುತ್ತಾ ಹೋಗುತ್ತಿದ್ದಾನೆ. ನಿತ್ಯ ನೂತನತೆಯಲ್ಲಿ ಸವೆದು ಹೋಗುವ ಕಾಣುವ ಭಾವಗಳೆಲ್ಲ ಇಂಗುವ ಬದುಕಿಗೆ ಬೆಳಕಿಲ್ಲದ ಸವಾರಿ, ಸೂಚನೆಗಳಿಲ್ಲದ ಹಿಂಡುವ ನೋವು ಅಪ್ಪಳಿಸುವವು. ವಯಸ್ಸಿನ ಮೇಲೇರಿ ಈ ಬಗೆಯ ಕ್ಲಿಷ್ಟತೆಗೆ, ಬದಲಾವಣೆಗೆ ಒತ್ತಡದ ಜೀವನವೇ ಹಾದಿಯಾಗಿದೆ. ಬದಲಾಗುತ್ತಿರುವ ವರ್ತಮಾನಕ್ಕೆ ತಕ್ಕಂತೆ ನಮ್ಮನ್ನು ಬದಲಿಸಿ ಕೊಳ್ಳುವುದು ಅಗತ್ಯ ಮತ್ತು ಅನಿವಾರ್ಯ ಆದರೆ ಕೆಲವೊಮ್ಮೆ ಈ ಬದಲಾವಣೆಗಳು ನಮ್ಮತನವನ್ನು ಕಳೆದುಕೊಳ್ಳುವಂತಾಗಬಾರದು. ಯಾರನ್ನೋ, ಯಾವುದನ್ನೋ ಅನುಕರಣೆ ಮಾಡಬೇಕೆಂದು, ಮತ್ಯಾರನ್ನೋ ಮೆಚ್ಚಿಸಬೇಕೆಂದು ನಮ್ಮ ನೈಜ ವರ್ತನೆಗಳನ್ನು, ಸಹಜ ವ್ಯಕ್ತಿತ್ವವನ್ನು ಮರೆಯಬಾರದು.

ಇಂದಿನ ಯುವಜನಾಂಗಕ್ಕೆ ಅಂಕಗಳಿಗಾಗಿ ಪಾಠ ಬೋಧಿಸುವುದಕ್ಕಿಂತ ಬದುಕಿನ ಬೆಳಕಿಗೆ ನೆರಳಾಗುವ ತಂಪನ್ನು ರೂಪಿಸುವ ಮೌಲ್ಯಗಳ ಧಾರಣೆ ಅತೀ ಅಗತ್ಯವಾಗಿದೆ, ಪ್ರತಿ ಜೀವ ಕೋಶಕ್ಕೂ ಅಗತ್ಯ ಭಾವಕೋಶದ ಬೆಳಕು. ಅದಕ್ಕಾಗಿ ಯುವಜನಕೆ ಮನವೂ ಬೇಕು. ಸಮಾಜದ ಸಂಕುಚಿತ ಯುವಮನಗಳಿಗೆ ನೈಜವಾದ ಮಾರ್ಗದರ್ಶನ ಅನಿವಾರ್ಯ. ಯಾವುದು ತಪ್ಪು, ಸರಿ ಯಾವ ಕೆಲಸವನ್ನು ಮಾಡಬೇಕು, ಯಾವುದನ್ನು ಮಾಡಬಾರದು ಎಂಬುದನ್ನು ಇಂದಿನ ಯುವಜನಾಂಗಕ್ಕೆ ತಿಳಿಯಾಗಿ, ಅವರಿಗೆ ಅರ್ಥವಾಗುವಂತೆ ಹೇಳುವವರು ಬೇಕಾಗಿದ್ದಾರೆ. ಯಾರು ಅದನ್ನು ಕೇಳಿತ್ತಾರೆ ಎಂಬುದೆಲ್ಲ ತೇಲಿಕೆಯ ಉತ್ತರಗಳು. ಮನಸ್ಥಿತಿಯನ್ನು ಅರಿತುಕೊಂಡು ಅರ್ಥವಾಗುವಂತೆ ಹೇಳಿದರೆ ಖಂಡಿತವಾಗಿಯೂ ಕೇಳುವವರು ಎಲ್ಲಾ ಕಾಲದಲ್ಲಿಯೂ ಇರುತ್ತಾರೆ. ಕಿರಿಯರು-ಹಿರಿಯರ ಮಾತುಗಳನ್ನು ಕೇಳುವುದಿಲ್ಲ ಎಂಬುದು ನಿಜವಾಗಿದ್ದ ಪಕ್ಷದಲ್ಲಿ ಪ್ರೇರಣಾತ್ಮಕ ಮಾತುಗಳ ಕೇಳಲು ಯುವಜನಾಂಗ ಹಾತೊರೆಯುವುದೇಕೆ? ಅಭಿಪ್ರೇರಣೆ ನೀಡಬಲ್ಲ ಕಥೆಗಳನ್ನು, ಪುಸ್ತಕಗಳನ್ನು ಮುಗಿಬಿದ್ದು ಖರೀದಿಸುವುದೇಕೆ? ಕೇಳುವವರು ಖಂಡಿತವಾಗಿಯೂ ಕೇಳುತ್ತಾರೆ. ಆದರೆ ಹೇಳುವವರು ಕೇಳುವವರ ಮನಗೆದ್ದು ಹೇಳುವಂತಾಗಬೇಕು

ತಾಳ್ಮೆ, ಸಹನೆಗಳ ಮಹತ್ವವನ್ನು ತಿಳಿಸಿಕೊಡಬೇಕು: ಪ್ರಸ್ತುತ ಯುವಜನತೆಗೆ ಕಡಿಮೆಯಾಗಿರುವ ಅಥವಾ ಇಲ್ಲದಿರುವ, ಇದ್ದರೂ ಮರೆತಂತಿರುವ ಮೊದಲ ಅಂಶ ಸಹನೆ, ತಾಳ್ಮೆ. ಅಂದುಕೊಂಡಿದ್ದೆಲ್ಲ ತಕ್ಷಣವೇ ಆಗಬೇಕು, ಯಾವುದಕ್ಕೂ ಹೆಚ್ಚು ಕಷ್ಟ ಪಡಬಾರದು, ಎಲ್ಲವೂ ಸುಲಭವಾಗಿಯೇ ನಡೆಯಬೇಕೆಂದು ಅಪೇಕ್ಷಿಸುವ ಯುವ ಜನರಿಗೆ ತಾಳ್ಮೆ ಕಲಿಸುವ ಪಾಠವನ್ನು ತಿಳಿ ಹೇಳುವವರು ಬೇಕಾಗಿದ್ದಾರೆ. ಒಂದು ಮರ ಅನೇಕರಿಗೆ ಆಶ್ರಯವನ್ನು ನೀಡಿದೆ, ಹಸಿವನ್ನು ನೀಗಿಸಿದೆ ಎಂದರೆ ಅದು ನಿನ್ನೆ ಹುಟ್ಟಿ ಇಂದು ಪ್ರತಿಫಲವನ್ನು ನೀಡುತ್ತಿಲ್ಲ. ಬೀಜವನ್ನು



ಬಿತ್ತಿ, ಆ ಬೀಜ ಮೊಳಕೆ ಹೊಡೆದು ಸಸಿಯಾಗಿ, ಗಿಡವಾಗಿ-ಮರವಾಗಿ ಬೆಳೆದು ಇಂದು ಹೆಮ್ಮರವಾಗಿ ನಿಂತಿದೆ. ಇದಕ್ಕೆಲ್ಲ ಸಮಯ ಸಾಕಷ್ಟು ಬೇಕಾಗಿದೆ. ಹಾಗೆಯೇ ಬದುಕಿನಲ್ಲಿ ನಾವಂದುಕೊಂಡಿದ್ದೆಲ್ಲ ನಡೆಯಬೇಕಾದರೆ ಅದಕ್ಕೆ ಸ್ವಲ್ಪ ತಾಳ್ಮೆ, ಸಹನೆಯೂ ಬೇಕು. ಬೇವಿನ ಬೀಜವನ್ನು ಬಿತ್ತಿ, ಮಾವಿನ ಫಸಲನ್ನು ನಿರೀಕ್ಷಿಸುವುದು ಎಷ್ಟು ಮೂರ್ಖತನವೋ ಹಾಗೆಯೇ ಬದುಕಿನಲ್ಲಿ ಎಲ್ಲವೂ ಸುಲಭವಾಗಿ ಸಿಗುವುದೆಂಬ ಅನಿಸಿಕೆಯೂ ಅಷ್ಟೇ ಮೂರ್ಖತನದಿಂದ ಕೂಡಿರುತ್ತದೆ. ಕಾಯುವ ತಾಳ್ಮೆ, ಸಹನೆಗಳ ಪಾಠ ಇವುಗಳನ್ನು ಕಲಿಸಿಕೊಡಬಲ್ಲದು. ಇದನ್ನು ಮೊದಲಿಗೆ ನಮ್ಮ ಪ್ರಸ್ತುತ ಯುವಜನರಿಗೆ ಅರ್ಥವಾಗುವ ಹಾಗೆ ತಿಳಿಸಬೇಕು.

ನುಡಿದಂತೆ ನಡೆಯುವವರು ನಾವಾಗಬೇಕು: ನಮ್ಮಲ್ಲಿ ನುಡಿದಂತೆ ನಡೆಯುವವರು ಬೇಕಾಗಿದ್ದಾರೆ. ಉಪದೇಶ ಮಾಡುವುದು ಸುಲಭ, ಆದರೆ ಅದನ್ನು ಜಾರಿಗೆ ತರುವುದು ಕಷ್ಟ, ಸತ್ಯವನ್ನು ನುಡಿಯಬೇಕು ಎಂದು ಹೇಳುವ ನಾವೇ ನಮ್ಮ ಮಕ್ಕಳ ಮುಂದೆ ಸುಳ್ಳನಾಡಿದರೆ, ಮೊಬೈಲ್ ಅನ್ನು ಹೆಚ್ಚು ಬಳಸಬೇಡ ಎಂದು ನಾವೇ ಅತಿಯಾಗಿ ಮೊಬೈಲ್ ಬಳಕೆ ಮಾಡಿದರೆ, ಬೇಡದ ವಿಚಾರಗಳಿಗೆ ಗಮನಕೊಡಬೇಡ ಎಂದು ನಾವೇ ಇಲ್ಲ-ಸಲ್ಲದ ವಿಚಾರಗಳನ್ನು ಮಾತಾಡಿದರೆ ಮಕ್ಕಳು ಕೂಡ ಅದನ್ನೇ ಮಾಡುತ್ತಾರೆ. ಹೇಳುವುದು ಒಂದು, ಮಾಡುವುದು ಮತ್ತೊಂದರಂತೆ ಆಗಬಾರದು. ನಾವು ಮತ್ತೊಬ್ಬರಿಗೆ ಯಾವುದಾದರೂ ವಿಚಾರವನ್ನು ತಿಳಿಹೇಳಬೇಕೆಂದುಕೊಂಡರೆ ಮೊದಲಿಗೆ ನಮ್ಮ ನಡತೆಯಲ್ಲಿ ಅದನ್ನು ರೂಢಿಸಿಕೊಳ್ಳಬೇಕು. ಇದನ್ನು ತಿಳಿಸುವಾಗ ಮಹಾತ್ಮರೊಬ್ಬರ ಬದುಕಿನಲ್ಲಿ ನಡೆದ ನೈಜಘಟನೆ ನೆನಪಾಗುತ್ತದೆ.

ಘಟನೆ: ಮಹಾತ್ಮರ ಆಶ್ರಮಕ್ಕೆ ಹಲವಾರು ಜನ ಬಂದು ತಮ್ಮ ಸಮಸ್ಯೆಗಳಿಗೆ ಪರಿಹಾರವನ್ನು ಒದಗಿಸುವಂತೆ ಕೋರುತ್ತಿರುತ್ತಾರೆ. ಒಮ್ಮೆ ತಾಯಿ ಒಬ್ಬರು ತಮ್ಮ ಎಂಟು ವರ್ಷದ ಮಗನೊಂದಿಗೆ ಮಹಾತ್ಮರ ಆಶ್ರಮಕ್ಕೆ ಬಂದು ಅವರ ಮುಂದೆ ತಮ್ಮ ಮಗ ಒಂದೇ ಸಮನೆ ಬೆಲ್ಲವನ್ನು ತಿನ್ನುತ್ತಿರುತ್ತಾನೆ. ದಯಮಾಡಿ ತಾವು ಬೆಲ್ಲ ತಿನ್ನಬೇಡವೆಂದು ತಿಳಿ ಹೇಳಬೇಕು ಎಂದಾಗ ಮಹಾತ್ಮರು ಆಶ್ಚರ್ಯಚಕಿತರಾಗಿ ಬೆಲ್ಲವನ್ನು ತಿನ್ನುವುದರಿಂದ ಏನು ನಷ್ಟ ಎಂದು ಆ ತಾಯಿಯನ್ನು ಪ್ರಶ್ನಿಸುತ್ತಾರೆ? ಚಿಕ್ಕ ಮಗುವಾಗಿದ್ದರಿಂದ ಬೆಲ್ಲದಲ್ಲಿನ ಸಿಹಿ ಅಂಶ ಮಗುವಿಗೆ ಒಳ್ಳೆಯದಲ್ಲವೆಂದು ಜೊತೆಗೆ ಬೆಲ್ಲವು ಉಷ್ಣವಾಗಿರುವುದರಿಂದ ಹೆಚ್ಚಿಗೆ ತಿನ್ನುವುದು ಸರಿಯಲ್ಲವೆಂದು ಹೇಳುತ್ತಾಳೆ. ಆಗ ಆ ಮಹಾತ್ಮರು ಮುಂದಿನ ವಾರ ಮಗುವನ್ನು ತಮ್ಮ ಆಶ್ರಮಕ್ಕೆ ಕರೆದುಕೊಂಡು ಬರುವಂತೆ ಹೇಳುತ್ತಾರೆ. ಮುಂದಿನ ವಾರ ಬಂದಾಗ ಮತ್ತೊಂದು ವಾರ ನಂತರ ಬರಲು ಹೇಳುತ್ತಾರೆ. ಹೀಗೆ ಎರಡು ಮೂರು ವಾರಗಳ ನಂತರ ಒಂದು ದಿನ ಮಹಾತ್ಮರು ಆ ಮಗುವಿಗೆ ಮಗು ಬೆಲ್ಲವನ್ನು ತಿನ್ನಬೇಡ ಅದು ಒಳ್ಳೆಯದಲ್ಲ ಎನ್ನುತ್ತಾರೆ. ಮಗು ಆಯಿತು ಎಂದು ಕೇಳುತ್ತದೆ ಮಗುವಿನ ತಾಯಿಗೆ ಸಂದೇಹ ಉಂಟಾಗುತ್ತದೆ ಈ ಮಾತನ್ನು

> ಬದಲಾವಣೆ ಜಗದ ನಿಯಮ. ಕಾಲಕ್ಕೆ ಬದಲಾದಂತೆ ಮನುಷ್ಯನು ಕೂಡ ಬದಲಾಗುತ್ತಾ ಹೋಗುತ್ತಿದ್ದಾನೆ. ನಿತ್ಯ ನೂತನತೆಯಲ್ಲಿ ಸವೆದು ಹೋಗುವ ಕಾಣುವ ಭಾವಗಳೆಲ್ಲ ಇಂಗುವ ಬದುಕಿಗೆ ಬೆಳಕಿಲ್ಲದ ಸವಾರಿ, ಸೂಚನೆಗಳಿಲ್ಲದ ಹಿಂಡುವ ನೋವು ಅಪ್ಪಳಿಸುವವು. ವಯಸ್ಸಿನ ಮೇಲೇರಿ ಈ ಬಗೆಯ ಕ್ಲಿಷ್ಟತೆಗೆ, ಬದಲಾವಣೆಗೆ ಒತ್ತಡದ ಜೀವನವೇ ಹಾದಿಯಾಗಿದೆ. ಬದಲಾಗುತ್ತಿರುವ ವರ್ತಮಾನಕ್ಕೆ ತಕ್ಕಂತೆ ನಮ್ಮನ್ನು ಬದಲಿಸಿಕೊಳ್ಳುವುದು ಅಗತ್ಯ ಮತ್ತು ಅನಿವಾರ್ಯ ಆದರೆ ಕೆಲವೊಮ್ಮೆ ಈ ಬದಲಾವಣೆಗಳು ನಮ್ಮತನವನ್ನು ಕಳೆದುಕೊಳ್ಳುವಂತಾಗಬಾರದು. ಯಾರನ್ನೋ, ಯಾವುದನ್ನೋ ಅನುಕರಣೆ ಮಾಡಬೇಕೆಂದು, ಮತ್ಯಾರನ್ನೋ ಮೆಚ್ಚಿಸಬೇಕೆಂದು ನಮ್ಮ ನೈಜ ವರ್ತನೆಗಳನ್ನು, ಸಹಜ ವ್ಯಕ್ತಿತ್ವವನ್ನು ಮರೆಯಬಾರದು.

ಮಹಾತ್ಮರು ನಾನು ಬಂದ ದಿನವೇ ಹೇಳಬಹುದಿತ್ತು. ಅದನ್ನು ಬಿಟ್ಟು ಮೂರು ನಾಲ್ಕು ವಾರಗಳ ನಂತರ ಹೇಳಿದ್ದು ಏಕೆ ಎಂಬ ಅನುಮಾನ ಮೂಡುತ್ತದೆ, ಆ ಅನುಮಾನವನ್ನು ಮಹಾತ್ಮರ ಮುಂದಿಡುತ್ತಾಳೆ. ಆಗ ಮಹಾತ್ಮರು ನಕ್ಕು ತಾಯಿ ನಾನು ಕೂಡ ಬೆಲ್ಲವನ್ನು ತಿನ್ನುತ್ತಿದ್ದೆ ಬೆಲ್ಲದಿಂದ ಆಗುವ ಪರಿಣಾಮ ಏನೆಂದು ನನಗೆ ತಿಳಿದಿರಲಿಲ್ಲ ನೀವು ಹೇಳಿದ ನಂತರ ಅದು ತಿಳಿಯಿತು. ನಾನೇ ಬೆಲ್ಲವನ್ನು ತಿನ್ನುವನಾಗಿ ಮಗುವಿಗೆ ಬೆಲ್ಲವನ್ನು ತಿನ್ನಬೇಡ ಎನ್ನುವುದು ಎಷ್ಟರ ಮಟ್ಟಿಗೆ ಸರಿ ಎಂಬ ಪ್ರಶ್ನೆ ನನ್ನನ್ನು ಕಾಡಿತು. ಆದ್ದರಿಂದ ವಾರದ ನಂತರ ಬರಲು ಹೇಳಿದೆ. ಆ ಸಮಯದಲ್ಲಿ ಬೆಲ್ಲವನ್ನು ತಿನ್ನದೇ ಇರಲು ಸಾಧ್ಯವೇ ಎಂಬ ಪ್ರಯೋಗವನ್ನು ನಾನು ಮಾಡಿದ್ದೆ. ಬೆಲ್ಲವನ್ನು ತಿನ್ನದೆ ನಿಶ್ಚಿಂತೆಯಾಗಿರಬಹುದು ಎಂಬ ಅಂಶ ಈ ಎರಡು-ಮೂರು ವಾರಗಳಲ್ಲಿ ನನಗೆ ತಿಳಿಯಿತು. ಆದ್ದರಿಂದ ಇಂದು ಧೈರ್ಯವಾಗಿ ಆ ಮಗುವಿಗೆ ಬೆಲ್ಲ ತಿನ್ನಬೇಡ ಎಂದು ತಿಳಿ ಹೇಳಿದೆ ಎನ್ನುತ್ತಾರೆ. ಆ ತಾಯಿಗೆ ಮಹಾತ್ಮರ ಬಗ್ಗೆ ಇದ್ದ ಗೌರವ ಮತ್ತಷ್ಟು ಮಗದಷ್ಟು ಈ ಘಟನೆಯಿಂದ ಹೆಚ್ಚಾಗುತ್ತದೆ.

ನನಗೆ ಆ ವ್ಯಕ್ತಿ ಯಾರು ಎಂಬುದಾಗಲಿ ಅಥವಾ ಆ ಘಟನೆ ನಡೆದಿತ್ತೇ ಎಂಬುದಾಗಲಿ ಮುಖ್ಯ ಎಂದೆನಿಸುವುದಿಲ್ಲ. ಘಟನೆಯಲ್ಲಿ ಗಮನಿಸುವ ಅಂಶ ಮುಖ್ಯ ಎನಿಸುತ್ತದೆ. ಬುದ್ಧಿವಾದವನ್ನು ಹೇಳುವ ನಾನೇ ತಪ್ಪನ್ನು ಮಾಡುವಂತವನಾದರೆ ಅದು ಎಷ್ಟರಮಟ್ಟಿಗೆ ಸರಿ ಎಂಬ ಪ್ರಶ್ನೆ ಆ ಮಹಾತ್ಮರಿಗೆ ಮೂಡಿರಬೇಕು ಅದಕ್ಕಾಗಿಯೇ ಅವರು ಪ್ರಯೋಗ ವನ್ನು ಮಾಡಿ ನಂತರ ಆ ಮಗುವಿಗೆ ಬುದ್ಧಿವಾದ ವನ್ನು ಹೇಳಿದರು. ಇದು ನಮ್ಮ ಹಿರಿಯರು ಮಾಡ ಬೇಕಾದ ಮೊದಲ ಕೆಲಸ. ಬುದ್ಧಿವಾದವನ್ನು ಹೇಳುವ ನಾವೇ ಅದನ್ನು ಉಲ್ಲಂಘಿಸಿದರೆ ಕಿರಿಯರಿಗೆ ಅಥವಾ ಮಕ್ಕಳಿಗೆ ಗೊಂದಲಗಳು ಉಂಟಾಗುತ್ತವೆ ಆದ್ದರಿಂದ ಮೊದಲು ನಾವು ನುಡಿದಂತೆ ನಡೆ ಯುವ, ನಡೆದಂತೆ ನುಡಿಯುವರಾಗಬೇಕು.

ಹಿರಿಯರು ನೈಜ ಮಾರ್ಗದರ್ಶನ ನೀಡಬೇಕು: ಹಳೇಬೇರು ಹೊಸ ಚಿಗುರು ಕೂಡಿರಲು ಮರ ಸೊಬಗು ಎಂಬ ಡಿವಿಜಿಯವರ ಮಾತಿನಂತೆ ಹಿರಿಯರು ತಮ್ಮ ಅನುಭವದ ನುಡಿಗಳನ್ನು ಕಿರಿಯರಿಗೆ ತಿಳಿಸಬೇಕು. ಪ್ರತಿಯೊಬ್ಬರಿಗೂ ಎಲ್ಲಾ ತಪ್ಪುಗಳನ್ನು ಅವರೇ ಮಾಡಲು ಜೊತೆಗೆ ಆ ತಪ್ಪುಗಳನ್ನು ತಿದ್ದಿಕೊಂಡು ಬಾಳಲು ಸಮಯವಾಗಲೀ ಸಂದರ್ಭವಾಗಲೀ ಇರುವುದಿಲ್ಲ. ಮತ್ತೊಬ್ಬರ ಬದುಕು, ಅವರ ಜೀವನದಲ್ಲಿ ಜರುಗಿದ ತಪ್ಪುಗಳು ನಮ್ಮ ಜೀವನದಲ್ಲಿ ನಡೆಯದಂತೆ ತಿದ್ದಿಕೊಂಡು ಬಾಳವಂತಾಗಬೇಕು. ಇದಕ್ಕೆ ಖಂಡಿತವಾಗಿಯೂ ಅನುಭವವುಳ್ಳ ಹಿರಿಯರ ಜೀವನ ದರ್ಶನ, ನೈಜವಾದ ಮಾರ್ಗದರ್ಶನವನ್ನು ನೀಡುವಂತಾಗಬೇಕು. ಸಾಮಾನ್ಯವಾಗಿ ಹಿರಿಯರು ಮಾಡುವ ತಪ್ಪು ಎಂದರೆ ನಾವು ಹೇಳಿದಂತೆ ಕಿರಿಯರು ಕೇಳಬೇಕು, ಹಿಂತಿರುಗಿ ಮಾತನಾಡಬಾರದು. ನಾವು ಹಾಕಿದ ಗೆರೆಯನ್ನು ದಾಟಬಾರದು, ಎಲ್ಲವೂ ನಮ್ಮ ಹಿಡಿತದಲ್ಲಿಯೇ ಇರಬೇಕು ಎಂದು ಅಪೇಕ್ಷಿಸುತ್ತಾರೆ. ಇದು ತಪ್ಪಲ್ಲ. ಆದರೆ ಕಿರಿಯರಿಗೆ ಅವರ ವೈಯಕ್ತಿಕ ಆಸೆಗಳಿಗೂ ಮನ್ನಣೆ ನೀಡಬೇಕು. ಕಿರಿಯರಿಗೆ ಅಥವಾ ಮಕ್ಕಳಿಗೆ ಉತ್ಸಾಹ, ಆವೇಶ, ದುಡುಕು ಸ್ವಭಾವಗಳು ಹೆಚ್ಚು ಜೊತೆಗೆ ಹಿರಿಯರ ಮಾತನ್ನು ಯಾಕೆ ಕೇಳಬೇಕು ಎಂಬ ಮನೋ ಧರ್ಮವು ಕೆಲವರಲ್ಲಿ ಇರುತ್ತದೆ ಆದ್ದರಿಂದ ಮಕ್ಕಳ ಮನಸ್ಸನ್ನು ಮೊದಲಿಗೆ ಗೆದ್ದು ಹೇಳುವುದನ್ನೇ ತಿಳಿಯಾಗಿ ಅವರ ಮನಮುಟ್ಟುವಂತೆ ಹೇಳಬೇಕಾದದ್ದು ಹಿರಿಯರ ಕರ್ತವ್ಯ. ಮಾತ್ರೆಯನ್ನು ಸಿಹಿಯೊಂದಿಗೆ ಬೆರೆಸಿಕೊಡುವಂತೆ ಪ್ರೀತಿಯ ಮಾತುಗಳಿಂದ ಕಿರಿಯರನ್ನು ಒಲಿಸಿಕೊಳ್ಳಬಹುದು. ಹಾಗಾಗಿ ಹಿರಿಯರು ತಮ್ಮ ಅನುಭವದ ನೈಜ ಮಾರ್ಗದರ್ಶನವನ್ನು ಕಿರಿಯರಿಗೆ ನೀಡಬೇಕು.

ಕೋಪವನ್ನು ಮಾಡಿಕೊಳ್ಳಬೇಡ ಎಂದು ಹೇಳುವ ಹಿರಿಯರೇ ಮಕ್ಕಳ ಮುಂದೆ ಕೂಗಾಡಿದರೆ, ಹಿರಿಯರಿಗೆ ಗೌರವವನ್ನು ನೀಡಬೇಕೆಂದು ತಿಳಿ ಹೇಳುವ ದೊಡ್ಡ ಮನುಷ್ಯರೇ ಹಿರಿಯರನ್ನು ಹೀಯ್ಯಾಳಿಸಿ ಮಾತನಾಡಿ ಅಗೌರವದಿಂದ ನಡೆದುಕೊಂಡರೆ, ಸತ್ಯವನ್ನು ನುಡಿಯಬೇಕೆಂದು ಹೇಳಿದವರೇ ಮಕ್ಕಳಿಗೆ ಸುಳ್ಳನ್ನು ಹೇಳುವಂತೆ ಪ್ರಲೋಭಿಸಿದರೆ, ಬೇಲಿಯೇ ಎದ್ದು ಹೊಲವನ್ನು ಮೇಯುವಂತಾಗುತ್ತದೆ ಪರಿಸ್ಥಿತಿ. ಈ ಪರಿಸ್ಥಿತಿಗಳು ನಡೆಯಬಾರದು ಎಂದಾದರೆ ನಮ್ಮ ನಡವಳಿಕೆಯಲ್ಲಿ ಬದಲಾವಣೆಗಳಾಗಬೇಕು. ಹಾಗೆ ಆಗಿದ್ದಲ್ಲಿ ನಮ್ಮನ್ನು ನೋಡಿ ನಮ್ಮ ಮಕ್ಕಳು, ಕಿರಿಯರು ಅದನ್ನೇ ಅನುಸರಿಸುತ್ತಾರೆ. ಇದನ್ನು ಹೇಳುವಾಗ ಸಾಮಾಜಿಕ ಜಾಲತಾಣದಲ್ಲಿ ನೋಡಿದ ಒಂದು ಚಿತ್ರ ನೆನಪಿಗೆ ಬರುತ್ತದೆ. ಬಸ್ಸಿನಲ್ಲಿ ತಾಯಿಯೊಂದಿಗೆ ಕುಳಿತ ಮಗು ತಾಯಿಯಂತೆ ಪುಸ್ತಕವನ್ನು ತೆರೆದು ಓದುತ್ತಿರುತ್ತದೆ. ಇದನ್ನು ನೋಡಿ ಆಶ್ಚರ್ಯಪಟ್ಟ ಹಿರಿಯ ನಾಗರಿಕರು ಆ ತಾಯಿಯನ್ನು ಪ್ರಶಂಸಿಸುತ್ತಾರೆ. ಮೊಬೈಲ್ ಅನ್ನು ಹಿಡಿದುಕೊಳ್ಳುವ ಇಂದಿನ ಕಾಲದಲ್ಲಿ ನಿಮ್ಮ ಮಗು ಪುಸ್ತಕವನ್ನು ಹಿಡಿದುಕೊಂಡಿದೆ ನಿಜಕ್ಕೂ ನೀವು ಅದೃಷ್ಟಶಾಲಿಗಳು ಎಂದಾಗ ಆ ತಾಯಿ ಹೇಳುವ ಮಾತು ಇಲ್ಲಿ ಉಲ್ಲೇಖಾರ್ಹ!

'ಮಕ್ಕಳು ನಾವು ಹೇಳಿದ್ದನ್ನು ಕೇಳುವುದಿಲ್ಲ. ನಾವು ಮಾಡಿದ್ದನ್ನೇ ನೋಡುತ್ತಾರೆ, ಅದನ್ನೇ ಮಾಡುತ್ತಾರೆ ಮತ್ತು ಅದನ್ನೇ ಅನುಸರಿಸುತ್ತಾರೆ.'

ಯಾರೇ ಆದರೂ ಹೇಳಿದಂತೆ ಕೇಳುವುದಿಲ್ಲ ಮಾಡಿದಂತೆ ನಡೆಯುವವರು ಎಂಬ ಮಾತಿಗೆ ಇಂಬು ಕೊಡುವ ಈ ಮಾತುಗಳು ನಿಜಕ್ಕೂ ಅಕ್ಷರಶಃ ಸತ್ಯವಾದುದು. ತಪ್ಪುಗಳನ್ನು ನಾವು ಮಾಡಿ ಮಕ್ಕಳಿಗೆ ಮಾಡಬೇಡ ಎಂದರೆ ಅದು ಎಷ್ಟರಮಟ್ಟಿಗೆ ಸರಿ? ನಾವೇ ಮಕ್ಕಳ ಮುಂದೆ ತಂದೆ- ತಾಯಂದಿರಿಗೆ, ಹಿರಿಯರಿಗೆ, ಶಿಕ್ಷಕರಿಗೆ ಗೌರವವನ್ನು ಕೊಡದೆ ಏಕವಚನದಲ್ಲಿ ಮಾತನಾಡಿದರೆ ಮಕ್ಕಳು ಕೂಡ ಮುಂದೊಂದು ದಿನ ಅದನ್ನೇ ಮಾಡುತ್ತಾರೆ. ಪರಸ್ಪರ ಗೌರವವನ್ನು ಕೊಡುವ, ನೀಡುವ ಮೂಲಕ ಸಚ್ಚಾರಿತ್ರ್ಯವನ್ನು ತುಂಬುವ ಹೊಣೆಗಾರಿಕೆ ನಮ್ಮೆಲ್ಲರ ಮೇಲಿದೆ. ಕಾಲ ಸರಿ ಇಲ್ಲ ಎಂಬ ಸಾರ್ವಕಾಲಿಕ ಸಂಭಾಷಣೆಯನ್ನೇ ಮುಂದುವರಿಸದೆ ನಮ್ಮ ನಡವಳಿಕೆಯನ್ನು ಬದಲಿಸಿಕೊಂಡಿದ್ದೆ ಆದ್ದಲ್ಲಿ ನಿಜಕ್ಕೂ ಕಾಲವು ಸರಿ ಇದೆ, ಜನಾಂಗವು ಸರಿ ಇದೆ ಎಂಬ ಸಂಭಾಷಣೆಯನ್ನು ಇನ್ನೂ ಮುಂದಾದರು ಕೇಳಬಹುದು. ಕಾಲ ಕೆಟ್ಟು ಹೋಯಿತು ಎಂದು ಹೇಳುವವರು ಯಾವ ಕಾಲದಲ್ಲಿ ಬದುಕುತ್ತಿದ್ದಾರೆ ಎಂಬ ಪ್ರಶ್ನೆಗೆ ತಮ್ಮನ್ನು ಒಳಗು ಮಾಡಿಕೊಂಡು ಆತ್ಮಾವಲೋಕನಕ್ಕೆ ದಾರಿ ಮಾಡಿಕೊಂಡು, ಬೋಧಿಸುವುದನ್ನು ನಿಲ್ಲಿಸಬಾರದು. ಬೋಧಿಸುತ್ತಲೇ ಕಲಿಯುವ, ಕಲಿಯುತ್ತಲೇ ಎಲ್ಲರನ್ನು ಬೆಳೆಸುವ ಅತ್ಯಂತ ಹಾಗೂ ಅನನ್ಯವಾದ ಬೆಳಕಿನ ಹೊಣೆಗಾರಿಕೆ ನಮ್ಮ ಬಲ್ಲವರ ಹೆಗಲ ಮೇಲಿದೆ.

ಮೊಬೈಲ್ ಫೋನ್‌ಗಳಲ್ಲಿ ಇಂಟರ್ನೆಟ್ ಇಲ್ಲದೆ ಟಿವಿ ಚಾನೆಲ್‌ಗಳ ನೇರ ಪ್ರಸಾರ; ಪ್ರಸಾರ ಭಾರತಿ ಯೋಜನೆ

ನವದೆಹಲಿ: ಡೈರೆಕ್ಟ್-ಟು-ಮೊಬೈಲ್ (D2M) ತಂತ್ರಜ್ಞಾನದ ಕಾರ್ಯಸಾಧ್ಯತೆಯನ್ನು ಪರಿಶೀಲಿಸುವ ಪ್ರಯೋಗಗಳು ಪ್ರಾರಂಭವಾಗುತ್ತಿದ್ದಂತೆ ಸಾರ್ವಜನಿಕ ಪ್ರಸಾರಕ ಪ್ರಸಾರ ಭಾರತಿ ಇಂಟರ್ನೆಟ್ ಸಂಪರ್ಕವಿಲ್ಲದೆ ಸ್ಮಾರ್ಟ್‌ಫೋನ್‌ಗಳಲ್ಲಿ ಲೈವ್ ಟಿವಿ ಚಾನೆಲ್‌ಗಳ ಪ್ರಸಾರವನ್ನು ಸುಲಭಗೊಳಿಸಲು ಕ್ರಾಂತಿಕಾರಿ ಹೆಜ್ಜೆಯಿಟ್ಟಿದೆ.

ಐಐಟಿ ಕಾನ್ಪುರ ಮತ್ತು ಸಾಂಖ್ಯ ಲ್ಯಾಬ್‌ಗಳ ಸಹಯೋಗದೊಂದಿಗೆ ದೆಹಲಿ ಸೇರಿದಂತೆ ವಿವಿಧ ನಗರಗಳಲ್ಲಿ ಹೆಚ್ಚಿನ ಶಕ್ತಿ ಮತ್ತು ಕಡಿಮೆ ಶಕ್ತಿಯ ಟ್ರಾನ್ಸ್‌ಮಿಟರ್‌ಗಳನ್ನು ಬಳಸಿಕೊಂಡು ಪ್ರಸಾರಕರು ಪ್ರಯೋಗಗಳನ್ನು ನಡೆಸುತ್ತಿದ್ದಾರೆ ಎಂದು ವಾರ್ತಾ ಮತ್ತು ಪ್ರಸಾರ ಸಚಿವಾಲಯದ (MI&B) ಅಧಿಕಾರಿಗಳು ದೃಢಪಡಿಸಿದ್ದಾರೆ.

ಐಐಟಿ ಕಾನ್ಪುರದೊಂದಿಗೆ D2M ಗಾಗಿ ಪ್ರಯೋಗಗಳು ಯಶಸ್ವಿಯಾಗಿದೆ. ಅದನ್ನು ಮತ್ತಷ್ಟು ತಂತ್ರಜ್ಞಾನ ಮಟ್ಟದಲ್ಲಿ ಮುಂದಕ್ಕೆ ಕೊಂಡೊಯ್ಯಲು ಸೆಲ್ಯುಲಾರ್ ಟವರ್‌ಗಳಲ್ಲಿ ಟ್ರಾನ್ಸ್‌ಮಿಟರ್‌ಗಳು ಮತ್ತು ಮೊಬೈಲ್ ಫೋನ್‌ಗಳಲ್ಲಿ ಚಿಪ್‌ಗಳ ಅಗತ್ಯವಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.


ಟಿವಿ ಮತ್ತು ರೇಡಿಯೋದಂತಹ ಬ್ರಾಡ್ ಕಾಸ್ಟ್ ಸಿಗ್ನಲ್‌ಗಳನ್ನು ಬಳಸಿಕೊಂಡು ಮೊಬೈಲ್ ಸಾಧನಗಳಿಗೆ ನೇರವಾಗಿ ನೇರ ಪ್ರಸಾರವನ್ನು ಮಾಡಲಾಗುತ್ತದೆ. ಬ್ರಾಡ್ ಕಾಸ್ಟ್ ಸಿಗ್ನಲ್‌ಗಳನ್ನು ಸ್ವೀಕರಿಸಲು ಮತ್ತು ಡೀಕೋಡ್ ಮಾಡಲು ಫೋನ್‌ಗಳು ಅಥವಾ ಸಾಧನಗಳಿಗೆ ನಿರ್ದಿಷ್ಟ ಹಾರ್ಡ್‌ವೇರ್ ಅಗತ್ಯವಿರುತ್ತದೆ ಎಂದು ಅಧಿಕಾರಿಯೊಬ್ಬರು ಹೇಳಿದರು. ತಂತ್ರಜ್ಞಾನವು ಉತ್ತಮ ಗುಣಮಟ್ಟದ ವೀಡಿಯೊ ಮತ್ತು ಆಡಿಯೊ ಸ್ಟ್ರೀಮಿಂಗ್‌ನ್ನು ಸಕ್ರಿಯಗೊಳಿಸಬಹುದು. ಏಕೆಂದರೆ ಇದು ಇಂಟರ್ನೆಟ್ ಸಂಪರ್ಕದ ವೇರಿಯಬಲ್ ವೇಗ ಮತ್ತು ಸ್ಥಿರತೆಯನ್ನು ಅವಲಂಬಿಸಿಲ್ಲಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನೇರ-ಮೊಬೈಲ್ ಪ್ರಸಾರ, 5G, ಗ್ರಾಮೀಣ ಬ್ರಾಡ್‌ಬ್ಯಾಂಡ್ ಮತ್ತು ಮುಂದಿನ ಪೀಳಿಗೆಯ ಪ್ರಸಾರ ಮಾನದಂಡಗಳು ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಂಶೋಧನಾ ಸಹಯೋಗಕ್ಕಾಗಿ ಸಚಿವಾಲಯವು ಜುಲೈ 2019 ರಲ್ಲಿ ಒಡಂಬಡಿಕೆ ಪತ್ರಕ್ಕೆ ಸಹಿ ಹಾಕಿದೆ. ಸಾಂಖ್ಯ ಲ್ಯಾಬ್ಸ್, ತೇಜಸ್ ನೆಟ್‌ವರ್ಕ್ಸ್‌ನ ಅಂಗಸಂಸ್ಥೆ, ಕರ್ನಾಟಕ ಮೂಲದ ಪ್ರಮುಖ ವೈರ್‌ಲೆಸ್ ಸಂವಹನ ಪರಿಹಾರ ಪೂರೈಕೆದಾರವಾಗಿದೆ.

ಸೆಕ್ಸ್ ವಿಡಿಯೋ ಹಗರಣ

ಮೂರು ಪ್ರಕರಣಗಳಲ್ಲಿ ಪ್ರಜ್ವಲ್ ರೇವಣ್ಣ ಜಾಮೀನು ಅರ್ಜಿ ವಜಾ

ಬೆಂಗಳೂರು: ಸೆಕ್ಸ್ ವಿಡಿಯೋ ಪ್ರಕರಣ ಸಂಬಂಧ ಜೈಲು ಪಾಲಾಗಿರುವ ಜೆಡಿಎಸ್ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರಿಗೆ ಕರ್ನಾಟಕ ಹೈಕೋರ್ಟ್ ಸೋಮವಾರ ಬಿಗ್ ಶಾಕ್ ನೀಡಿದ್ದು, ಜೆಡಿಎಸ್ ನಾಯಕ ಸಲ್ಲಿಸಿದ್ದ ಮೂರು ಜಾಮೀನು ಅರ್ಜಿಗಳನ್ನು ವಜಾಗೊಳಿಸಿದೆ.



ಮೂರು ಪ್ರಕರಣಗಳಲ್ಲಿ ಜಾಮೀನು ಕೋರಿ ಪ್ರಜ್ವಲ್ ರೇವಣ್ಣ ಸಲ್ಲಿಸಿದ್ದ ಜಾಮೀನು ಅರ್ಜಿಯ ವಿಚಾರಣೆ ನಡೆಸಿದ ಹೈಕೋರ್ಟ್ ಏಕಸದಸ್ಯ ಪೀಠ, ಮೂರೂ ಪ್ರಕರಣಗಳಲ್ಲೂ ಜಾಮೀನು ತಿರಸ್ಕರಿಸಿದೆ.

ಎರಡು ಅತ್ಯಾಚಾರ ಪ್ರಕರಣ ಮತ್ತು ಒಂದು ಮಹಿಳೆ ಅಶ್ಲೀಲ ದೃಶ್ಯ ಸೆರೆಹಿಡಿದ ಪ್ರಕರಣಕ್ಕೆ ಸಂಬಂಧಿಸಿದ ಜಾಮೀನು ಅರ್ಜಿಗಳನ್ನು ಹೈಕೋರ್ಟ್ ವಜಾಗೊಳಿಸಿದೆ. ಇನ್ನೊಂದು ಅತ್ಯಾಚಾರ ಪ್ರಕರಣದ ಆದೇಶ ಪ್ರಕಟಿಸುವುದು ಬಾಕಿಯಿದೆ.

ಮಾಜಿ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧ ಮೂರು ಅತ್ಯಾಚಾರ ಮತ್ತು ಒಂದು ಲೈಂಗಿಕ ದೌರ್ಜನ್ಯ, ಮಹಿಳೆಯ ಘನತೆಗೆ ಧಕ್ಕೆ ಉಂಟು ಮಾಡಿದ ಆರೋಪ ಸಂಬಂಧ ಪ್ರತ್ಯೇಕವಾಗಿ ನಾಲ್ಕು ಎಫ್‌ಐಆರ್‌ಗಳು ದಾಖಲಾಗಿವೆ.

ಈ ಪೈಕಿ ಮೂರು ಪ್ರಕರಣಗಳಲ್ಲಿ ಪ್ರಜ್ವಲ್ ಜಾಮೀನು ಕೋರಿ ಸಲ್ಲಿಸಿದ್ದ ಅರ್ಜಿಗಳನ್ನು, ನ್ಯಾಯಮೂರ್ತಿ ಎಂ ನಾಗಪ್ರಸನ್ನ ಅವರ ಏಕಸದಸ್ಯ ಪೀಠ ಇಂದು ವಜಾ ಮಾಡಿದೆ.

ಇನ್ನು ಪ್ರಜ್ವಲ್ ರೇವಣ್ಣ ಪರವಾಗಿ ವಕೀಲ ಜಿ ಅರುಣ್ ವಾದ ಮಂಡಿಸಿದ್ದು, ರಾಜ್ಯ ಸರ್ಕಾರದ ವಿಶೇಷ ತನಿಖಾ ಸಂಸ್ಥೆಯ ಪರವಾಗಿ ವಿಶೇಷ ಸರ್ಕಾರಿ ಅಭಿಯೋಜಕ ಪ್ರೊ. ರವಿವರ್ಮ ಕುಮಾರ್ ಪ್ರತಿವಾದ ಮಂಡಿಸಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581/1980 E-mail address: mysoorumithra@gmail.com For advertisements: mysoorumithra@gmail.com

ಮೈಸೂರು ಮಿತ್ರ

ರಾಕೇಶ್ ಸಿದ್ದರಾಮಯ್ಯ ಸಾವಿಗೆ ಭೈರತಿ ಸುರೇಶ್ ಕಾರಣ!

ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಆರೋಪ; ಸೇರಿಗೆ ಸವ್ವಾ ಸೇರು!



ನವದೆಹಲಿ, ಅ.21– ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಅವರೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹಿರಿಯ ಪುತ್ರ ರಾಕೇಶ್ ಸಿದ್ದರಾಮಯ್ಯ ಸಾವಿಗೆ ಕಾರಣವೆಂದು ಜನ ಮಾತನಾಡುತ್ತಿದ್ದಾರೆ. ಸಿದ್ದರಾಮಯ್ಯ ಅವರ ಆಸ್ತಿ ಹೊಡೆಯೋಕೆ ರಾಕೇಶ್ ನನ್ನು ಸಾಯಿಸಿದ್ದಾರೆ ಎಂದು ಜನ ಮಾತನಾಡುತ್ತಿದ್ದಾರೆ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಆರೋಪಿಸಿದ್ದಾರೆ.

ನವದೆಹಲಿಯಲ್ಲಿ ಸೋಮವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಕಾಂಗ್ರೆಸ್ ಮನೆಯಲ್ಲಿ ಬೆಂಕಿ ಹತ್ತಿಕೊಂಡಿದೆ. ಭೈರತಿ ಸುರೇಶ್ ಆರೋಪ ಇದಕ್ಕೆ ಒಂದು ಉದಾಹರಣೆ ಆಗಿದೆ. ದರೋಡೆಕೋರರು ಪೊಲೀಸರಿಂದ ತಪ್ಪಿಸಿಕೊಳ್ಳುವಾಗ ಗುಂಡು ಹಾರಿಸ್ತಾರೆ. ಭೈರತಿ ಸುರೇಶ್ ಕೂಡ ಅದೇ ಕೆಲಸ ಮಾಡುತ್ತಾರೆ. ದರೋಡೆಕೋರ, ಭಯೋತ್ಪಾದಕ ಕೆಲಸವನ್ನು ಸುರೇಶ್ ಮಾಡಿದ್ದಾರೆ. ಸಿದ್ದರಾಮಯ್ಯ ಇಂತಹವರನ್ನು ಯಾಕೆ ಇಟ್ಟುಕೊಂಡಿದ್ದಾರೆ. ಕೌರವರ ಜೊತೆ ಶಕುನಿ ಯಾಕೆ ಇದ್ದ, ಅದೇ ರೀತಿ ಸಿದ್ದರಾಮಯ್ಯ ಅವರನ್ನು ಮುಗಿಸಲೆಂದೆ ಸುರೇಶ್ ಇದ್ದಾರೆ. ಸುರೇಶ್ ಭಯದಿಂದ ಇಂತಹ ಆರೋಪ ಮಾಡಿದ್ದಾರೆ ಎಂದು ಕಿಡಿಕಾರಿದರು.

ನಿಮ್ಮನ್ನು (ಭೈರತಿ ಸುರೇಶ್) ಹೆಬ್ಬಾಳದಿಂದ ಓಡಿಸುವ ಕೆಲಸ ಮಾಡುತ್ತೇನೆ. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ಕಡತಗಳನ್ನು ಸುಟ್ಟಾಕಿದ್ದನ್ನು ಹೇಳೋಕೆ ಬಂದರೆ ನೀವು ನನ್ನ ಮೇಲೆ ಹೀಗೆ ಆರೋಪ ಮಾಡ್ತಿರಾ? ಶೋಭಾ ಕರಂದ್ಲಾಜೆ ಎಂದಿಗೂ ಆರೋಪಕ್ಕೆ ಹೆದರಿ ಓಡಿ ಹೋಗುವವಳಲ್ಲ. ನಾಲಿಗೆ ಬಿಗಿಹಿಡಿದು ಮಾತನಾಡಿ. ಸಿದ್ದರಾಮಯ್ಯ ಕುಟುಂಬಕ್ಕೆ ಕಳಂಕ ತಂದವರು ಇವರೇ. ಚೀಪ್ ರಾಜಕಾರಣ ಮಾಡುವುದನ್ನು ಬಿಡಿ ಎಂದು ಆಕ್ರೋಶ ಹೊರಹಾಕಿದರು.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಹಗರಣದ ಕಡತಗಳನ್ನು ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಹೊತ್ತೊಯ್ದಿದ್ದಾರೆ ಎಂದು ಶೋಭಾ ಕರಂದ್ಲಾಜೆ ಹೇಳಿದ್ದರು. ಈ ಮಾತಿಗೆ ಕೋಪಗೊಂಡಿದ್ದ ಭೈರತಿ ಸುರೇಶ್ ಅವರು, ಶೋಭಾ ಕರಂದ್ಲಾಜೆ ಅವರೇ, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಪತ್ನಿ ಮೈತ್ರಾದೇವಿ ಅವರ ಸಾವಿಗೆ ಕಾರಣ ಎಂದು ಆರೋಪ ಮಾಡಿದ್ದರು. ಮುಂದುವರೆದು ಮೈತ್ರಾದೇವಿ ಅವರ ಸಾವಿನ ಕುರಿತಂತೆ ತನಿಖೆ ನಡೆಸಬೇಕು, ಈ ಕೇಸಿನಲ್ಲಿ ಶೋಭಾ ಕರಂದ್ಲಾಜೆ ಅವರನ್ನು ಬಂಧಿಸಬೇಕು ಎಂದು ಹೇಳಿದ್ದರು. ಇದರ ಬೆನ್ನಲ್ಲಿಯೇ ಇಂದು ಸುದ್ದಿಗೋಷ್ಠಿ ಕರೆದ ಶೋಭಾ ಕರಂದ್ಲಾಜೆ ದೊಡ್ಡ ಆರೋಪವನ್ನು ಮಾಡಿದ್ದಾರೆ.

ಯೂನಿಯನ್ ಬ್ಯಾಂಕ್‌ನ ಎಸ್‌ಸಿ, ಎಸ್‌ಟಿ ಎಂಪ್ಲಾಯಿಸ್ ವೆಲ್ಫೇರ್ ಅಸೋಸಿಯೇಷನ್ ಕಚೇರಿ ಉದ್ಘಾಟನೆ



ಮೈಸೂರಿನ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಎಸ್‌ಸಿ, ಎಸ್ಟಿ ಎಂಪ್ಲಾಯಿಸ್ ವೇಲ್ಫೇರ್ ಅಸೋಸಿಯೇಷನ್‌ನ ಕಚೇರಿಯನ್ನು ಉದ್ಘಾಟಿಸಲಾಯಿತು.

ಮೈಸೂರು, ಅ.21(ಜಿಎ)–ಮೈಸೂರಿನ ಸರಸ್ವತಿಪುರಂನಲ್ಲಿ ಸ್ಥಾಪಿಸಿರುವ ರಾಜ್ಯ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಎಸ್‌ಸಿ, ಎಸ್ಟಿ ಎಂಪ್ಲಾಯಿಸ್ ವೆಲ್ಫೇರ್ ಅಸೋಸಿಯೇಷನ್‌ನ ಕಚೇರಿಯನ್ನು ಭಾರತೀಯ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಸಹಾಯಕ ಪ್ರಧಾನ ವ್ಯವಸ್ಥಾಪಕ ಸುನೀಲ್ ವಿ.ಪಾಟೀಲ್ ಉದ್ಘಾಟಿಸಿದರು.

ಈ ವೇಳೆ ಎಸ್‌ಸಿ, ಎಸ್ಟಿ ಎಂಪ್ಲಾಯಿಸ್ ವೆಲ್ಫೇರ್ ಅಸೋಸಿಯೇಷನ್ ಅಧ್ಯಕ್ಷ ಡಾ.ಚಂದ್ರಶೇಖರಯ್ಯ ಮಾತನಾಡಿ, ಪ್ರಸ್ತುತ ಕಾರ್ಮಿಕರು ಒಗ್ಗಟಾಗಿ ತಮ್ಮ ಹಕ್ಕುಗಳನ್ನು ಪಡೆಯಲು ಸಂಘಟನೆ ಮುಖ್ಯವಾಗಿದೆ. ಸಂವಿಧಾನಾತ್ಮಕ ವಿಷಯದಲ್ಲಿ ನಾವು ಕಾನೂನಿನ ಹೋರಾಟಕ್ಕೆ ಹೋಗುವ ಸ್ಥಿತಿ ನಿರ್ಮಾಣವಾಗುತ್ತಿದೆ. ಇಂತಹ ಸಂದರ್ಭದಲ್ಲಿ ಈ ರೀತಿ ಕಚೇರಿ ಸ್ಥಾಪಿಸಿರುವುದು ಸಾಕಷ್ಟು ಅನುಕೂಲವಾಗಲಿದೆ ಎಂದರು.

ಮೊದಲು ಕಚೇರಿ ಇಲ್ಲದೇ ಪಾರ್ಕ್‌ಗಳಲ್ಲಿ ಕುಳಿತು ಸಮಸ್ಯೆಗಳ ಬಗ್ಗೆ ಚರ್ಚಿಸುತ್ತಿದ್ದೇವು. ಆದರೆ, ಈಗ ಕಚೇರಿ ಇರುವುದರಿಂದ ಕೇವಲ ಯೂನಿಯನ್ ಬ್ಯಾಂಕ್ ಮಾತ್ರವಲ್ಲದೇ ಎಲ್ಲಾ ರೀತಿಯ ಎಸ್‌ಸಿ, ಎಸ್‌ಟಿ ನೌಕರರು ತಮ್ಮ ಸಮಸ್ಯೆಗಳನ್ನು ಚರ್ಚಿಸಿ, ನಂತರ ಸಂವಿಧಾನಾತ್ಮಕ ಹಕ್ಕುಗಳನ್ನು ಪಡೆದುಕೊಳ್ಳಲು ಸಹಕಾರಿಯಾಗಲಿದೆ ಎಂದು ಹೇಳಿದರು.

ಶ್ರೀರಾಂಪುರದಲ್ಲಿ ವೃದ್ಧೆಯ ಸರ ಅಪಹರಣ



ಮೈಸೂರು, ಅ.21(ಎಸ್‌ಬಿಡಿ)– ಹಿಟ್ಟಿನ ಗಿರಣಿಯಿಂದ ಮನೆಗೆ ವಾಪಸ್ಸಾಗುತ್ತಿದ್ದ ಮಹಿಳೆಯ ಚಿನ್ನದ ಸರವನ್ನು ಖದೀಮ ಕಿತ್ತುಕೊಂಡು ಪರಾರಿಯಾಗಿರುವ ಘಟನೆ ಮೈಸೂರಿನ ಶ್ರೀರಾಂಪುರದಲ್ಲಿ ನಡೆದಿದೆ. ಇಲ್ಲಿನ 2ನೇ ಹಂತ, ಮಧುವನ ಲೇಔಟ್ ನಿವಾಸಿ ಕಮಲಾ(62) ಅವರ ಸುಮಾರು ಎರಡು ಲಕ್ಷ ರೂ. ಮೌಲ್ಯದ 30 ಗ್ರಾಂ ಚಿನ್ನದ ಸರ ಕಳ್ಳರ ಪಾಲಾಗಿದೆ. ಕಮಲಾ ಅವರು ಅ.18ರಂದು ಸಂಜೆ 4 ಗಂಟೆ ವೇಳೆಯಲ್ಲಿ ಮನೆಯ ಹತ್ತಿರದಲ್ಲಿರುವ ಗಿರಣಿಗೆ ಹೋಗಿ ಅಕ್ಕಿ ಮತ್ತು ಗೋಧಿ ಹಿಟ್ಟು ಮಾಡಿಸಿಕೊಂಡು ವಾಪಸ್ಸಾಗುತ್ತಿದ್ದರು. ಅವರು ಅಡ್ಡ ರಸ್ತೆಯಲ್ಲಿ ಸಾಗುವಾಗ ಹಿಂಬಾಲಿಸಿದ ಖದೀಮ, ಏಕಾಏಕಿ ಚಿನ್ನದ ಸರ ಕಿತ್ತುಕೊಂಡು ರಸ್ತೆ ಬದಿ ನಿಲ್ಲಿಸಿದ್ದ ತನ್ನ ಸ್ಕೂಟರ್‌ನಲ್ಲಿ ಪರಾರಿಯಾಗಿದ್ದಾನೆ. ಈ ಸಂಬಂಧ ಕುವೆಂಪುನಗರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಕಳ್ಳನ ಪತ್ತೆಗೆ ಶೋಧ ನಡೆಸಿದ್ದಾರೆ.

ಯಕ್ಷಗಾನ ಹಾಸ್ಯ ಕಲಾವಿದ ಬಂಟ್ವಾಳ ಜಯರಾಮ ಆಚಾರ್ಯ ನಿಧನ



ಬೆಂಗಳೂರು: ಯಕ್ಷಗಾನದ ಹಾಸ್ಯರಾಜ ಎಂದೇ ಹೆಸರಾಗಿದ್ದ, ಶುದ್ಧ ಹಾಸ್ಯ ನೀಡುವ ಮೂಲಕ ಯಕ್ಷಗಾನ ಪ್ರಿಯ ಪ್ರೇಕ್ಷಕರ ಮನರಂಜಿಸುತ್ತಿದ್ದ ತೆಂಕುತಿಟ್ಟು ಯಕ್ಷಗಾನದ ಹಾಸ್ಯ ಕಲಾವಿದ ಬಂಟ್ವಾಳ ಜಯರಾಮ ಆಚಾರ್ಯ ಬೆಂಗಳೂರಿನಲ್ಲಿ ಇಂದು (ಸೋಮವಾರ) ಬೆಳಗ್ಗೆ ನಿಧನ ಹೊಂದಿದ್ದಾರೆ. ಅವರಿಗೆ 67 ವರ್ಷ ವಯಸ್ಸಾಗಿತ್ತು.

ಯಕ್ಷಗಾನ ಕಲಾವಿದ ಚಂದ್ರಶೇಖರ ಧರ್ಮಸ್ಥಳ ಅವರ ನೇತೃತ್ವದ ತಂಡವು ಇಂದಿನಿಂದ ಬೆಂಗಳೂರಿನಲ್ಲಿ ನಡೆಸಿಕೊಡಬೇಕಿದ್ದ ಕಾರ್ಯಕ್ರಮದಲ್ಲಿ ಭಾಗವಹಿಸಲು ಜಯರಾಮ ಆಚಾರ್ಯರು ಆಗಮಿಸಿದ್ದರು. ಇಂದು ನಸುಕಿನ ಜಾವ 4 ಗಂಟೆ ಸುಮಾರಿಗೆ ತೀವ್ರತರವಾದ ಹೃದಯನೋವು ಕಾಣಿಸಿಕೊಂಡಿದೆ. ಅವರೊಂದಿಗಿದ್ದ ಇತರ ಕಲಾವಿದರು ತಕ್ಷಣ ಆಸ್ಪತ್ರೆಗೆ ಸೇರಿಸಿದರೂ, ಚಿಕಿತ್ಸೆಗೆ ಸ್ಪಂದಿಸದೇ ನಿಧನರಾಗಿದ್ದಾರೆ.

ಬಂಟ್ವಾಳ ಜಯರಾಮ ಆಚಾರ್ಯರ ಪಾರ್ಥಿವ ಶರೀರವನ್ನು ಆಂಬುಲೆನ್ಸ್ ಮೂಲಕ ಊರಿಗೆ ಕರೆತರುವ ವ್ಯವಸ್ಥೆ ಮಾಡಲಾಗಿದ್ದು, ಮಧ್ಯಾಹ್ನ 2.30 ಗಂಟೆ ಸುಮಾರಿಗೆ ಬಂಟ್ವಾಳ ಬೈಪಾಸ್‌ನಲ್ಲಿರುವ ಮನೆಯಲ್ಲಿ ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ಇರಿಸಲಾಗುವುದು. ಬಳಿಕ ಅಂತ್ಯಕ್ರಿಯೆ ನಡೆಯಲಿದೆ. ಮೃತರು ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಸೇರಿದಂತೆ ಅಪಾರ ಅಭಿಮಾನಿಗಳನ್ನು ಅಗಲಿದ್ದಾರೆ.

ಸಿ.ಎಸ್.ಲೋಕೇಶ್



ಗೌಡ್ರು ಸೋಮಣ್ಣನವರ ಮಗ ಹಾಗೂ ಗುತ್ತಿಗೆದಾರರೂ ಆದ ಮೈಸೂರಿನ ಬೋಗಾದಿ ಬಡಾವಣೆ ನಿವಾಸಿ ಸಿ.ಎಸ್. ಲೋಕೇಶ್ (48) ಅವರು ಸೋಮವಾರ ನಿಧನರಾದರು.

ಮೃತರು ತಂದೆ, ಪತ್ನಿ, ಇಬ್ಬರು ಮಕ್ಕಳು ಸೇರಿದಂತೆ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಸ್ವಗ್ರಾಮ ಚಿಕ್ಕಾಡನಹಳ್ಳಿ ನಾಳೆ (ಅಕ್ಟೋಬರ್ 22) ಬೆಳಗ್ಗೆ 11 ಗಂಟೆಗೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶ್ರೀಮತಿ ಜಯಮ್ಮ



ಶ್ರೀರಂಗಪಟ್ಟಣದ ಹೊನ್ನಪ್ಪ ಬೀದಿಯ ನಿವಾಸಿ ಕೆ. ರಾಮಚಂದ್ರಯ್ಯ ಅವರ ಪತ್ನಿ ಶ್ರೀಮತಿ ಜಯಮ್ಮ (73) ಸೋಮವಾರ ನಿಧನರಾದರು. ಮೃತರು ಇಬ್ಬರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಶ್ರೀರಂಗಪಟ್ಟಣದಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಿದ್ದರಾಮಯ್ಯ ಸರ್ಕಾರ ಅಸ್ಥಿರಗೊಳಿಸುವ ಹುನ್ನಾರ ಖಂಡಿಸಿ ದೆಹಲಿ ಚಲೋ

● ಅಹಿಂದ ಮುಖಂಡ ಕೆ.ಎಸ್.ಶಿವರಾಂ ಹೇಳಿಕೆ ● ಪ್ರತಿಭಟನೆ ನಂತರ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಲು ನಿರ್ಧಾರ



ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಂ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು,ಅ.21(ಎಂಟಿವೈ)–ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಇಡಿ, ಸಿಬಿಐ ಸೇರಿದಂತೆ ವಿವಿಧ ಸಂಸ್ಥೆಗಳ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಚುನಾಯಿತ ಸರ್ಕಾರವನ್ನು ವಾಮಮಾರ್ಗದಲ್ಲಿ ಅಸ್ಥಿರಗೊಳಿಸಲು ಸಂಚು ನಡೆಸುತ್ತಿದೆ ಎಂದು ಆರೋಪಿಸಿ, ಅಹಿಂದ ಸಂಘಟನೆಗಳೊಂದಿಗೆ ದೆಹಲಿ ಚಲೋ ನಡೆಸಲು ನಿರ್ಧರಿಸಿರುವುದಾಗಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಹಿಂದ ವರ್ಗಗಳ ಅಸ್ಮಿತೆಯೂ, ಶಕ್ತಿಯೂ ಆಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕುಗ್ಗಿಸಲು ಬಿಜೆಪಿ ಸಂಚು ನಡೆಸುತ್ತಿದೆ. ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಸಚಿವ ಅಮಿತ್ ಷಾ ಅವರೊಂದಿಗೆ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಶಾಮೀಲಾಗಿದ್ದಾರೆ. ಅದಕ್ಕೆ ಪೂರಕವಾಗಿ ಇತ್ತೀಚೆಗೆ ನಾನೇ ಸಿಎಂ ಆಗುತ್ತೇನೆ ಎಂಬ ಕುಮಾರಸ್ವಾಮಿ ಹೇಳಿಕೆ ಪುಷ್ಟಿ ನೀಡಿದೆ. ರಾಜ್ಯದಲ್ಲಿ ಸಿದ್ದರಾಮಯ್ಯ ಅವರು ಸಿಎಂ ಆಗಿ ಮುಂದುವರೆದರೆ ಬಿಜೆಪಿ ಹಾಗೂ ಜೆಡಿಎಸ್ ಅಧಿಕಾರದಿಂದ ಶಾಶ್ವತವಾಗಿ ಉಳಿಯುವುದನ್ನು ಖಚಿತಪಡಿಸಿಕೊಂಡು ಸಂಚು ನಡೆಸಿ ಸಿಎಂ ವಿರುದ್ಧ ಪಿತೂರಿ ನಡೆಸುತ್ತಿದ್ದಾರೆ ಎಂದು ಕಿಡಿಕಾರಿದರು.

ಪ್ರಧಾನಿ ಮೋದಿ ಪ್ರಜಾಪ್ರಭುತ್ವ ವ್ಯವಸ್ಥೆಕಗ್ಗೊಲೆ ಮಾಡುತ್ತಿದ್ದಾರೆ. ಇಡಿ, ಸಿಬಿಐ, ಐಟಿ ಸೇರಿದಂತೆ ವಿವಿಧ ಸಂಸ್ಥೆಗಳನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ. ಆ ಸಂಸ್ಥೆಗಳ ಮೂಲಕ ರಾಜ್ಯದ ಚುನಾಯಿತ ಸರ್ಕಾರವನ್ನು ಅಸ್ಥಿರಗೊಳಿಸಲು ಮುಂದಾಗಿದ್ದಾರೆ. ಹಿಂದುಳಿದ ವರ್ಗಗಳ ನಾಯಕನ ವಿರುದ್ಧ ನಡೆಯುತ್ತಿರುವ ಸಂಚು ನಿಲ್ಲಿಸದಿದ್ದರೆ, ಇಡೀ ಅಹಿಂದ ಸಮುದಾಯ ತಿರುಗಿ ಬೀಳಲಿದೆ ಎಂದು ಎಚ್ಚರಿಸಿದರು.

ಅ.24ರಂದು ಪೂರ್ವಾಭಾವಿ ಸಭೆ: ಸಿಎಂ ಸಿದ್ದರಾಮಯ್ಯ ಸರ್ಕಾರದ ವಿರುದ್ಧ ಕೇಂದ್ರ ಸರ್ಕಾರ ಮಾಡುತ್ತಿರುವ ಸಂಚು ಖಂಡಿಸಿ ಅಹಿಂದ ಸಂಘಟನೆಗಳ ಬೆಂಬಲದೊಂದಿಗೆ ದೆಹಲಿ ಚಲೋ ಕೈಗೊಳ್ಳಲು ಉದ್ದೇಶಿಸಲಾಗಿದೆ. ಅಲ್ಲದೆ, ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಲು ನಿರ್ಧರಿಸಲಾಗಿದೆ. ಈ ದೆಹಲಿ ಚಲೋದಲ್ಲಿ ಸಾಹಿತಿಗಳು, ಪ್ರಗತಿಪರರು, ವಿಮರ್ಶಕರು, ವಿವಿಧ ಅಹಿಂದ ಸಂಘಟನೆಗಳ ಮುಖಂಡರು ಪಾಲ್ಗೊಳ್ಳಲಿದ್ದಾರೆ. ಈ ಸಂಬಂಧ ಅ.24ರಂದು ಬೆಳಗ್ಗೆ 11 ಗಂಟೆಗೆ ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ದುಂಡು ಮೇಜಿನ ಸಭೆ ಕರೆಯಲಾಗಿದ್ದು, ಅಲ್ಲಿ ದೆಹಲಿ ಚಲೋ ರೂಪುರೇಷೆಗಳ ಬಗ್ಗೆ ಚರ್ಚಿಸಲಾಗುತ್ತದೆ ಎಂದರು.

ಮುಡಾ ಪ್ರಕರಣ ಒಂದು ವ್ಯಾಜ್ಯ: ಮುಡಾ ಪ್ರಕರಣ ಒಂದು ವ್ಯಾಜ್ಯವಷ್ಟೇ. ಇದನ್ನು ಇಡಿ ತೀರ್ಮಾನ ಮಾಡಲು ಸಾಧ್ಯವೇ?. ಇಡಿ ತನ್ನ ವ್ಯಾಪ್ತಿ ಮೀರಿ ವರ್ತಿಸುತ್ತಿದೆ. ಬೆಂಗಳೂರಿನಲ್ಲಿ ಕೆರೆ–ಕಟ್ಟೆ ಜಾಗದಲ್ಲಿ ಸಾವಿರಾರು ಕೋಟಿ ರೂ. ವೆಚ್ಚದಲ್ಲಿ ಬಂಗಲೆ ಕಟ್ಟಿದ್ದಾರೆ. ಅದರ ಬಗ್ಗೆ ಇಡಿ ಯಾಕೆ ತನಿಖೆ ಮಾಡುತ್ತಿಲ್ಲ. ಸಿಬಿಐ, ಇಡಿ ಪ್ರಧಾನಿ ಮೋದಿ ಸೇವಕರಂತೆ ಕೆಲಸ ಮಾಡುತ್ತಿವೆ. ಮುಡಾದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹಾಗೂ ಪಟಾಲಂ ಮಾಡಿರುವ ಅಕ್ರಮದ ಬಗ್ಗೆ ಈಗಾಗಲೇ ದಾಖಲೆ ಬಿಡುಗಡೆ ಮಾಡಿದ್ದೇನೆ. ಇದರ ಬಗ್ಗೆ ಯಾಕೆ ಕ್ರಮ ಕೈಗೊಂಡಿಲ್ಲ. ಮುಡಾದಲ್ಲಿ ಬಿಜೆಪಿ, ಜೆಡಿಎಸ್ ನಾಯಕರು ಅಕ್ರಮವಾಗಿ ನಿವೇಶನ ಪಡೆದಿದ್ದಾರೆ. ಅವುಗಳ ಬಗ್ಗೆ ಇಡಿ ತನಿಖೆ ಮಾಡುತ್ತದಾ ಎಂದು ಪ್ರಶ್ನಿಸಿದರು. ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ರವಿನಂದನ್, ಯೋಗೇಶ್ ಉಪ್ಪಾರ, ತಾ.ಪಂ. ಮಾಜಿ ಅಧ್ಯಕ್ಷೆ ಮಂಜುಳಾ ಮಂಜುನಾಥ್, ಲೋಕೇಶ್ ಕುಮಾರ್ ಮಾದಾಪುರ, ಕಾಂಗ್ರೆಸ್ ವಕ್ತಾರ ರಾಜೇಶ್ , ಚಂದ್ರು ವಿಶ್ವಕರ್ಮ ಇದ್ದರು.

ಆಸ್ತಿ ಕಬಳಿಸಲು ಸ್ವಂತ ಅಣ್ಣನಿಗೆ ವಿಷವುಣಿಸಿರುವ ಆರ್‌ಟಿಐ ಕಾರ್ಯಕರ್ತ ಗಂಗರಾಜು: ಆರೋಪ

ದಿನ ಬೆಳಗಾದರೆ ಕೆಲ ಆರ್‌ಟಿಐ ಕಾರ್ಯಕರ್ತರು ಹಾಗೂ ಬಿಜೆಪಿ ಮುಖಂಡರು ಸಿಎಂ ಸಿದ್ದರಾಮಯ್ಯ ವಿರುದ್ಧ ಆರೋಪ ಮಾಡುವುದರಲ್ಲಿ ಮಗ್ನರಾಗಿದ್ದಾರೆ. ಆರ್‌ಟಿಐ ಕಾರ್ಯಕರ್ತ ಗಂಗರಾಜು ಆಸ್ತಿ ಕಬಳಿಸಲು ತನ್ನ ಸ್ವಂತ ಅಣ್ಣನಿಗೆ ಪಾನೀಯದಲ್ಲಿ ವಿಷ ಹಾಕಿ ಕೊಲ್ಲಲು ಸಂಚು ನಡೆಸಿದ್ದರು ಎಂದು ಕೆ.ಎಸ್.ಶಿವರಾಮ್ ಆರೋಪಿಸಿದ್ದಾರೆ.

ತುಮಕೂರು ಜಿಲ್ಲೆಯ ತುರುವೆಕೆರೆ ಪೊಲೀಸ್ ಠಾಣೆಯಲ್ಲಿ ನ್ಯಾಯಾಲಯದ ಆದೇಶದ ಮೇರೆಗೆ ಆರ್‌ಟಿಐ ಕಾರ್ಯಕರ್ತ ಗಂಗರಾಜು, ಅವರ ಪತ್ನಿ ಗಾಯತ್ರಿ ಅವರನ್ನು ಎ–1, ಎ–2 ಪ್ರಕರಣ ದಾಖಲಾಗಿದೆ. ಆಸ್ತಿ ಲಪಟಾಯಿಸಲು ಸ್ವಂತ ಅಣ್ಣ ಎನ್.ಶಿವಲಿಂಗೇಗೌಡ ಎಂಬುವರಿಗೆ ವಿಷ ಉಣಿಸಿದ್ದಾರೆ. 2024ರ ಫೆಬ್ರವರಿ 4 ಮತ್ತು 5ರಂದು ಎರಡು ದಿನ ವಿಷ ಬೆರೆಸಿದ ಪಾನೀಯವನ್ನು ಕುಡಿಸಿದ್ದಾರೆ. ಫೆಬ್ರವರಿ 6ರಂದು ನಿತ್ರಾಣಗೊಂಡ ಶಿವಲಿಂಗೇಗೌಡರನ್ನು ಖಾಸಗಿ ಆಸ್ಪತ್ರೆಯ ತುರ್ತು ನಿಗಾ ಘಟಕದಲ್ಲಿ ಚಿಕಿತ್ಸೆ ಕೊಡಿಸಲಾಗಿತ್ತು. ರಕ್ತ ಪರೀಕ್ಷೆ ನಡೆಸಿದಾಗ ವಿಷವುಣಿಸಿರುವುದು ಖಚಿತವಾಗಿತ್ತು. ಈ ಹಿನ್ನೆಲೆಯಲ್ಲಿ ಅವರ ಸಹೋದರ ಹಾಗೂ ಕುಟುಂಬದ ಸದಸ್ಯರು ದೂರು ದಾಖಲಿಸಿದ್ದಾರೆ. ಇಂತಹ ವ್ಯಕ್ತಿ ಬೇರೊಬ್ಬರ ವಿರುದ್ಧ ಭೂ ಕಬಳಿಕೆ ಆರೋಪ ಮಾಡುತ್ತಾರೆ ಎಂದು ಅಹಿಂದ ಮುಖಂಡ ಕೆ.ಎಸ್.ಶಿವರಾಮ್ ಕಿಡಿಕಾರಿದರು.

27 ವಿವಿಧ ರೋಗಗಳ ಕುರಿತಾಗಿ ವಿದ್ಯಾರ್ಥಿಗಳಿಂದಲೇ ರಚಿತ ಕೃತಿ ಲೋಕಾರ್ಪಣೆ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ 'ಗ್ಲೋಬಲ್ ಎಮರ್ಜಿಂಗ್ ಆ್ಯಂಡ್ ನೆಗ್ಲೆಕ್ಟೆಡ್ ಟ್ರಾಫಿಕಲ್ ಡಿಸೀಸಸ್' ಕೃತಿಯನ್ನು ಫಾರೂಖಿಯಾ ಕಾಲೇಜು ಅಧ್ಯಾಪಕ ಡಾ.ಬಿ.ಜೆ.ಮಹೇಂದ್ರಕುಮಾರ್ ಬಿಡುಗಡೆ ಮಾಡಿದರು.

ಮೈಸೂರು,ಅ.21(ಎಂಟಿವೈ)– ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬಿ.ಫಾರ್ಮ, ಡಿ.ಫಾರ್ಮ ವಿದ್ಯಾರ್ಥಿಗಳು ರಚಿಸಿರುವ 'ಗ್ಲೋಬಲ್ ಎಮರ್ಜಿಂಗ್ ಆ್ಯಂಡ್ ನೆಗ್ಲೆಕ್ಟೆಡ್ ಟ್ರಾಫಿಕಲ್ ಡಿಸೀಸಸ್' ಕೃತಿಯನ್ನು ಫಾರೂಖಿಯಾ ಕಾಲೇಜು ಅಧ್ಯಾಪಕ ಡಾ.ಬಿ.ಜೆ.ಮಹೇಂದ್ರ ಕುಮಾರ್ ಬಿಡುಗಡೆ ಮಾಡಿದರು.

ಮೈಸೂರಿನ ಸ್ಪೈನ್ ಅಟ್ಲಾಸ್ ಪ್ರಕಾಶನ ಸಂಸ್ಥೆ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಬಿ.ಫಾರ್ಮ, ಡಿ.ಫಾರ್ಮ ವಿದ್ಯಾರ್ಥಿಗಳಾದ ಮೊಹಮ್ಮದ್ ಶೈಖ್ ಫಹದ್, ಸೈಯದ್ ಮುಹಮ್ಮದ್, ಮಲ್ಲಿಕ್ ರೆಹಾನ್ ಹಾಗೂ ಮೊಹಮ್ಮದ್ ಹುಜೈಫಾ ಅವರು ಗ್ಲೋಬಲ್ ಎಮರ್ಜಿಂಗ್ ಆ್ಯಂಡ್ ನೆಗ್ಲೆಕ್ಟೆಡ್ ಟ್ರಾಫಿಕಲ್ ಡಿಸೀಸಸ್' ಕೃತಿಯನ್ನು ರಚಿಸಿದ್ದು, ವೈದ್ಯಕೀಯ ಕ್ಷೇತ್ರದಲ್ಲಿ 27 ರೋಗಗಳ ಬಗ್ಗೆ ಮಾಹಿತಿಯುಳ್ಳ ಈ ಕೃತಿ ಮಹತ್ವದ ಪಾತ್ರ ವಹಿಸಲಿದೆ.

ಪುಸ್ತಕ ಬಿಡುಗಡೆ ಮಾಡಿದ ನಂತರ ಫಾರೂಖಿಯಾ ಕಾಲೇಜು ಅಧ್ಯಾಪಕ ಡಾ.ಬಿ.ಜೆ.ಮಹೇಂದ್ರಕುಮಾರ್ ಮಾತನಾಡಿ, ಅತಿವೃಷ್ಟಿಯಿಂದ ಉಂಟಾಗುವ ಪ್ರವಾಹ, ತೀವ್ರ ತಾಪಮಾನ ಮತ್ತು ಅರಣ್ಯ ನಾಶದಿಂದಾಗಿ ಪರಿಸರ ಚಕ್ರದ ಮೇಲೆ ತೀವ್ರ ಪರಿಣಾಮವುಂಟಾಗುತ್ತಿದೆ. ಮಾನವ ಹಸ್ತಕ್ಷೇಪ ಇದಕ್ಕೆ ಮುಖ್ಯ ಕಾರಣ. ಇದರಿಂದ ಹಲವಾರು ಹೊಸ ರೋಗಗಳು ಸಾಂಕ್ರಾಮಿಕವಾಗಿ ಪರಿವರ್ತಿತವಾಗುತ್ತದೆ. ಆದ್ದರಿಂದ ಜಾಗತಿಕ ಕಳವಳಕ್ಕೆ ಒಳಗಾಗುವ ಪ್ರಮುಖ ನಿರ್ಲಕ್ಷಿತ ರೋಗಗಳ ಮುನ್ಸೂಚನೆ ನೀಡುವ ಬಗ್ಗೆ ಈ ಕೃತಿ ಬೆಳಕು ಚೆಲ್ಲುತ್ತದೆ. ಉಷ್ಣವಲಯದ ರೋಗಗಳು, ಚಿಕಿತ್ಸೆ, ಲಕ್ಷಣ ಮತ್ತು ರೋಗ ಲಕ್ಷಣಗಳ ಮಾಹಿತಿ ಈ ಪುಸ್ತಕ ಒಳಗೊಂಡಿದೆ ಎಂದು ತಿಳಿಸಿದರು.

ಕೃತಿ ಕರ್ತೃಗಳಾದ ಮೊಹಮ್ಮದ್ ಶೈಖ್ ಫಹದ್, ಸೈಯದ್ ಮುಹಮ್ಮದ್, ಮಲ್ಲಿಕ್ ರೆಹಾನ್, ಮಹಮ್ಮದ್ ಹುಜೈಫಾ, ಪ್ರಕಾಶನ ಸಂಸ್ಥೆಯ ಯಶಸ್ ರಮೇಶ್ ಹಾಗೂ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಎಸ್‌ಡಿಎಂ–ಡಿಎಂಡಿ ಸಂಸ್ಥೆಯಲ್ಲಿ 12ನೇ ಅಂತರರಾಷ್ಟ್ರೀಯ ಆರ್ಥಿಕ ಸಮ್ಮೇಳನ

ಮೈಸೂರು, ಅ. 21– ಕಾರ್ಪೊರೇಟ್ ಹಣಕಾಸು ಮತ್ತು ಹಣಕಾಸು ಮಾರ್ಕೆಟ್‌ಗಳಲ್ಲಿನ ಉದಯೋನ್ಮುಖ ಪ್ರವೃತ್ತಿಗಳು– ವಿಷಯ ಕುರಿತು ಹನ್ನೆರಡನೆಯ ಅಂತರರಾಷ್ಟ್ರೀಯ ಆರ್ಥಿಕ ಸಮ್ಮೇಳನವನ್ನು ಎಸ್‌ಡಿಎಂ–ಡಿಎಂಡಿ ಸಂಸ್ಥೆಯವರು ಅ.24 ಮತ್ತು 25ರಂದು ಆಯೋಜಿಸಿದ್ದಾರೆ.


ಅ.24ರಂದು ಸಮ್ಮೇಳನವನ್ನು ಗ್ಲೋಬಲ್ ಟ್ಯಾಕ್ಸ್ ಮುಖ್ಯಸ್ಥರು, ವಿಪ್ರೋ ಲಿಮಿಟೆಡ್ ಶ್ರೀರಾಂ ರಂಗನಾಥನ್ ಉದ್ಘಾಟಿಸಿ, ಪ್ರಮುಖ ಭಾಷಣ ಮಾಡಲಿದ್ದಾರೆ. ಎಸ್‌ಡಿಎಂ–ಡಿಎಂಡಿ ಸಂಸ್ಥೆಯ ನಿರ್ದೇಶಕರಾದ (ಲೆಫ್ಟಿನೆಂಟ್ ಕರ್ನಲ್) ಡಾ.ಎಸ್.ಎನ್.ಪ್ರಸಾದ್ ಸಮ್ಮೇಳನದ ಅಧ್ಯಕ್ಷತೆ ವಹಿಸಲಿದ್ದಾರೆ.

ಎರಡು ದಿನಗಳ ಈ ಸಮ್ಮೇಳನದಲ್ಲಿ ಉದ್ಯಮ ಹಾಗೂ ಶಿಕ್ಷಣ ಕ್ಷೇತ್ರದ ತಜ್ಞರಿಂದ 'ಜಾಗತಿಕ ಸವಾಲುಗಳ ನಡುವೆ ಹಣಕಾಸು ಮಾರುಕಟ್ಟೆಯ ಧನಾತ್ಮಕ ಬೆಳವಣಿಗೆ' ಈ ಮುಖ್ಯ ವಿಷಯದ ಬಗ್ಗೆ ಲೇಖನಗಳ ಪ್ರಸ್ತುತಿ ನಡೆಯಲಿದೆ.

ತಾಂತ್ರಿಕ ಅವಧಿಯಲ್ಲಿ ಅರುಣ್ ಮೊಹಾಂತಿ, ಮುಖ್ಯಸ್ಥರು–ಅದಿತ್ಯ ಬಿರ್ಲಾ ಎಎಂಸಿ ಲಿಮಿಟೆಡ್, ದಕ್ಷಿಣ ವಲಯ ಮುಖ್ಯಸ್ಥ ಅರುಣ್ ಮೊಹಾಂತಿ, ಲೊಕ್ಪೂರ್ ಫಿನ್ವೆಸ್ಟ್ ಪ್ರೈವೇಟ್ ಲಿಮಿಟೆಡ್ ನಿರ್ದೇಶಕ ಬೆಂಗಳೂರು ಶ್ರೀ ಭರತ್ ರಾವ್ ಲೊಕ್ಪೂರ್ ಭಾಷಣ ಮಾಡಲಿದ್ದಾರೆ. ಹೂಡಿಕೆಗಾಗಿ ಹಣಕಾಸು ಮಾರ್ಕೆಟ್‌ಗಳು ಮತ್ತು ಉತ್ಪನ್ನಗಳು – ಇವುಗಳನ್ನು ಕುರಿತು ತಾಂತ್ರಿಕ ಭಾಷಣಗಳು ಇರಲಿವೆ. ದೇಶದ ನಾನಾ ಸ್ಥಳಗಳಿಂದ ಸಮ್ಮೇಳನದಲ್ಲಿ ಭಾಗವಹಿಸಿ, ಲೇಖನಗಳನ್ನು ಪ್ರಸ್ತುತಪಡಿಸಲು ಅನೇಕ ತಜ್ಞರುಗಳು ಆಗಮಿಸುವ ನಿರೀಕ್ಷೆಯಿದೆ.

ಅ.25ರಂದು ನಡೆಯುವ ಸಮ್ಮೇಳನದ ಸಮಾರೋಪ ಸಮಾರಂಭಕ್ಕೆ ನಿರ್ದೇಶಕರು, ಎಸ್3ವಿ ವ್ಯಾಸ್ಕುಲರ್ ಟೆಕ್ನಾಲಜೀಸ್ ಲಿಮಿಟೆಡ್ ನಿರ್ದೇಶಕ ಬದ್ರಿ ನಾರಾಯಣನ್ ಆಗಮಿಸುವ ನಿರೀಕ್ಷೆ ಇದೆ. ಸಮ್ಮೇಳನದಲ್ಲಿ ಭಾಗವಹಿಸಲು ಮತ್ತು ಲೇಖನ ಪ್ರಸ್ತುತಪಡಿಸಲು ಇಚ್ಛಿಸುವವರು ಡಾ.ಎಮ್. ಶ್ರೀರಾಂ, ಅಸೋಸಿಯೇಟ್ ಪ್ರೊಫೆಸರ್ –ಆರ್ಥಿಕ ವಿಷಯ ಹಾಗೂ ಸಮ್ಮೇಳನದ ಮುಖ್ಯಸ್ಥರು ಅವರನ್ನು–ಮೊಬೈಲ್ ಸಂಖ್ಯೆ +91–9036096366 ಅಥವಾ ರೇಖಾ ಅವರನ್ನು ಮೊಬೈಲ್ ಸಂಖ್ಯೆ –9742722906 ಸಂಪರ್ಕಿಸಬಹುದು.

64 ವರ್ಷಗಳ ಬಳಿಕ ಪಾಕಿಸ್ತಾನದಲ್ಲಿ ಹಿಂದೂ ದೇವಾಲಯದ ಮರುನಿರ್ಮಾಣ!



ಪಂಜಾಬ್: ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದಲ್ಲಿ ಹಿಂದೂ ದೇವಾಲಯದ ಮರುನಿರ್ಮಾಣಕ್ಕೆ 10 ಮಿಲಿಯನ್ ಪಾಕಿಸ್ತಾನಿ ರೂಪಾಯಿಗಳನ್ನು ನೀಡಲಾಗಿದೆ.

64 ವರ್ಷಗಳ ನಂತರ ಮೊದಲ ಹಂತದ ಮರು ನಿರ್ಮಾಣ ಕಾಮಗಾರಿ ಇದಾಗಿರಲಿದೆ ಎಂದು ಮಾಧ್ಯಮಗಳು ವರದಿ ಮಾಡಿವೆ. ಇವಾಕ್ಯೂ ಟ್ರಸ್ಟ್ ಪ್ರಾಪರ್ಟಿ ಬೋರ್ಡ್ (ಇಟಿಪಿಬಿ), ಪಾಕಿಸ್ತಾನದಲ್ಲಿ ಅಲ್ಪಸಂಖ್ಯಾತರ ಆರಾಧನಾ ಸ್ಥಳಗಳನ್ನು ನೋಡಿಕೊಳ್ಳುವ ಫೆಡರಲ್ ಸಂಸ್ಥೆಯಾಗಿದ್ದು ಪಂಜಾಬ್‌ನ ರಾವಿ ನದಿಯ ಪಶ್ಚಿಮ ದಂಡೆಯ ನಗರವಾದ ನರೋವಾಲ್‌ನ ಜಫರ್ವಾಲ್ ಪಟ್ಟಣದಲ್ಲಿ ಬಾವೊಲಿ ಸಾಹಿಬ್ ದೇವಾಲಯದ ನಿರ್ಮಾಣವನ್ನು ಪ್ರಾರಂಭಿಸಿದೆ. 1960ರಲ್ಲಿ ಇಲ್ಲಿ ಆರಾಧನೆಯನ್ನು ನಿಷ್ಕ್ರಿಯಗೊಳಿಸಲಾಗಿತ್ತು ಎಂದು ಡಾನ್ ನ್ಯೂಸ್ ವರದಿ ಮಾಡಿದೆ.

ಪ್ರಸ್ತುತ, ನರೋವಾಲ್ ಜಿಲ್ಲೆಯಲ್ಲಿ ಯಾವುದೇ ಹಿಂದೂ ದೇವಾಲಯವಿಲ್ಲ, ಹಿಂದೂ ಸಮುದಾಯವು ತಮ್ಮ ಧಾರ್ಮಿಕ ಆಚರಣೆಗಳನ್ನು ಮನೆಯಲ್ಲಿಯೇ ಮಾಡಲು ಅಥವಾ ಧಾರ್ಮಿಕ ಆಚರಣೆಗಳಿಗಾಗಿ ಸಿಯಾಲ್‌ಕೋಟ್ ಮತ್ತು ಲಾಹೋರ್‌ನಲ್ಲಿರುವ ದೇವಾಲಯಗಳಿಗೆ ಪ್ರಯಾಣಿಸಬೇಕಾಗುತ್ತದೆ.

ಪಾಕ್ ಧರ್ಮಸ್ಥಾನ ಸಮಿತಿ ಮಾಜಿ ಅಧ್ಯಕ್ಷ ರತನ್ ಲಾಲ್ ಆರ್ಯ ಮಾತನಾಡಿ, ಬಾವೊಲಿ ಸಾಹಿಬ್ ದೇವಾಲಯದ ಮೇಲೆ ETPB ಯ ನಿಯಂತ್ರಣ ದೇವಾಲಯದಲ್ಲಿನ ಆರಾಧನೆಯನ್ನು ನಿಷ್ಕ್ರಿಯಗೊಳಿಸಿತ್ತು. ನರೋವಾಲ್‌ನಲ್ಲಿ 1,453 ಕ್ಕಿಂತ ಹೆಚ್ಚು ಸಂಖ್ಯೆಯ ಹಿಂದೂ ಸಮುದಾಯಕ್ಕೆ ಪೂಜೆಗೆ ಮೀಸಲಾದ ಸ್ಥಳದ ಕೊರತೆಯಿದೆ ಎಂದು ಹೇಳಿದ್ದಾರೆ. ಪಾಕಿಸ್ತಾನದ ಸ್ಥಾಪನೆಯ ನಂತರ, ನರೋವಾಲ್ ಜಿಲ್ಲೆಯಲ್ಲಿ 45 ಹಿಂದೂ ದೇವಾಲಯಗಳು ಇದ್ದವು ಆದರೆ ಅವೆಲ್ಲವೂ ಕಾಲಾನಂತರದಲ್ಲಿ ಶಿಥಿಲಗೊಂಡಿವೆ. ಕಳೆದ 20 ವರ್ಷಗಳಿಂದ, ಪಾಕ್ ಧರ್ಮಸ್ಥಾನ ಸಮಿತಿ ಬಾವೊಲಿ ಸಾಹಿಬ್ ದೇವಾಲಯದ ಜೀರ್ಣೋದ್ಧಾರಕ್ಕಾಗಿ ಪ್ರತಿಪಾದಿಸುತ್ತಿದೆ. ಹಿಂದೂ ಸಮುದಾಯದ ಬೇಡಿಕೆಗಳನ್ನು ಈಡೇರಿಸಲು ದೇವಾಲಯವನ್ನು ಪುನರ್ ಸ್ಥಾಪಿಸಲು ಸರ್ಕಾರ ಕ್ರಮ ಕೈಗೊಂಡಿದೆ ಎಂದು ತಿಳಿಸಿದ್ದಾರೆ. ಹಿಂದೂ ಸಮುದಾಯದ ಬೇಡಿಕೆಗಳನ್ನು ಈಡೇರಿಸಲು ದೇವಾಲಯವನ್ನು ಪುನರ್ ಸ್ಥಾಪಿಸಲು ಸರ್ಕಾರ ಕ್ರಮ ಕೈಗೊಂಡಿದೆ ಎಂದು ಹೇಳಿದ್ದಾರೆ.

ವಿವಿಧ ವೃತ್ತಿಗೆ ಅರ್ಜಿ ಆಹ್ವಾನ

ಮೈಸೂರು,ಅ.21– ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ (ಐಟಿಐ) ವತಿಯಿಂದ 2024–25ನೇ ಸಾಲಿನ ವಿಭಾಗದಲ್ಲಿನ ವಿವಿಧ ವೃತ್ತಿಗಳ ಖಾಲಿ ಸ್ಥಾನಗಳಿಗೆ 8ನೇ ತರಗತಿ ಪಾಸಾದ (ವೆಲ್ಡರ್ ವೃತ್ತಿಗೆ ಮಾತ್ರ) ಹಾಗೂ ಎಸ್‌ಎಸ್‌ಎಲ್‌ಸಿ ಉತ್ತೀರ್ಣರಾದ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಆಯ್ಕೆ ಪ್ರಕ್ರಿಯೆಯು ಪ್ರಾಚಾರ್ಯರಿಂದ ಮೆರಿಟ್ ಆಧಾರದಲ್ಲಿ ನಡೆಯಲಿದ್ದು, ಆಸಕ್ತ ಅಭ್ಯರ್ಥಿಗಳು ಐ.ಟಿ.ಐ.ಗೆ ತಮ್ಮ ಮೂಲ ದಾಖಲಾತಿಗಳೊಡನೆ ನೇರವಾಗಿ ಭೇಟಿ ನೀಡಿ ಅ.30 ರವರೆಗೆ ಪ್ರವೇಶ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಎನ್.ಆರ್.ಮೊಹಲ್ಲಾದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ (ಐಟಿಐ) ನೇರವಾಗಿ ಅಥವಾ ದೂ.ಸಂ: 0821–2498456 ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಪ್ರೊ.ಶಿವಪ್ರಕಾಶ್‌ಗೆ ಪ್ರೊ.ಮಲೆಯೂರು ಗುರುಸ್ವಾಮಿ ಪ್ರಶಸ್ತಿ ಪ್ರದಾನ



ಪ್ರೊ.ಮಲೆಯೂರು ಗುರುಸ್ವಾಮಿ ಪ್ರತಿಷ್ಠಾನ ಕೊಡಮಾಡುವ ಈ ಸಾಲಿನ 'ಪ್ರೊ.ಮಲೆಯೂರು ಗುರುಸ್ವಾಮಿ ಪ್ರಶಸ್ತಿ'ಯನ್ನು ಹಿರಿಯ ಸಾಹಿತಿ ಪ್ರೊ.ಎಚ್.ಎಸ್.ಶಿವಪ್ರಕಾಶ್ ಅವರಿಗೆ ಪ್ರದಾನ ಮಾಡಲಾಯಿತು.

ಮೈಸೂರು,ಅ.21(ಎಸ್‌ಪಿಎನ್)– ಪ್ರೊ.ಮಲೆಯೂರು ಗುರುಸ್ವಾಮಿ ಪ್ರತಿಷ್ಠಾನ ಕೊಡಮಾಡುವ ಈ ಸಾಲಿನ 'ಪ್ರೊ.ಮಲೆಯೂರು ಗುರುಸ್ವಾಮಿ ಪ್ರಶಸ್ತಿ'ಯನ್ನು ಹಿರಿಯ ಸಾಹಿತಿ ಪ್ರೊ.ಎಚ್.ಎಸ್.ಶಿವಪ್ರಕಾಶ್ ಅವರಿಗೆ ಪ್ರದಾನ ಮಾಡಲಾಯಿತು.

ಮೈಸೂರು ಊಟಿ ರಸ್ತೆಯ ಜೆಎಸ್‌ಎಸ್ ಪದವಿ ಕಾಲೇಜಿನ ಸುವರ್ಣ ಮಹೋತ್ಸವ ಸಭಾಂಗಣದಲ್ಲಿ ಪ್ರೊ.ಮಲೆಯೂರು ಗುರುಸ್ವಾಮಿ ಪ್ರತಿಷ್ಠಾನ ಹಾಗೂ ಮೈಸೂರು ಸಂವಹನ ಪ್ರಕಾಶನ ಸಹಯೋಗದೊಂದಿಗೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಲೆಯೂರು ಮಂದಾರ ಕೃತಿ ಬಿಡುಗಡೆ ಹಾಗೂ ಪ್ರೊ.ಮಲೆಯೂರು ಗುರುಸ್ವಾಮಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ನಂತರ ಮ.ಗು. ಅವರ ಬದುಕು ಮತ್ತು ಸಾಹಿತ್ಯ–ಒಂದು ಚಿಂತನೆ ಕುರಿತು ಮೈಸೂರು ವಿವಿ ಸಂದರ್ಶಕ ಪ್ರಾಧ್ಯಾಪಕ ಡಾ.ಸಿ.ನಾಗಣ್ಣ ಮಾತನಾಡಿ, ಚಾಮರಾಜನಗರ ಜಿಲ್ಲೆಯ ಕನ್ನಡ ಸಾಹಿತ್ಯ ಚರಿತ್ರೆಗೆ ಅಮೂಲ್ಯ ಕೊಡುಗೆ ನೀಡಿದವರಲ್ಲಿ ಪ್ರೊ.ಮಲೆಯೂರು ಗುರುಸ್ವಾಮಿ ಅವರ ಪಾತ್ರ ಹಿರಿದು ಎಂದು ಅಭಿಪ್ರಾಯಪಟ್ಟರು.

ಪ್ರೊ.ಮಲೆಯೂರು ಗುರುಸ್ವಾಮಿ ರಚಿತ ಕಾದಂಬರಿಗಳಾದ 'ಮಹಾಯಾತ್ರಿಕ', 'ಅಪ್ರತಿಮವೀರ', 'ಚರಿತ್ರೆಯ ಪುಟಕ್ಕೆ ಒಂದು ಟಿಪ್ಪಣಿ', 'ಕಪಿಲೆ ಹರಿದಳು ಕಡಲಿಗೆ', 'ಸಂಸ' ಹಾಗೂ ವಿಮರ್ಶಾ ಕೃತಿಗಳಾದ 'ಮಾತೆಂಬುದು ಜ್ಯೋತಿರ್ಲಿಂಗ ವಚನ ಸಾಹಿತ್ಯ', 'ಶ್ರೀ ಕಾರ್ಯಸ್ವಾಮಿ ಮಠದ ಕ್ಷೇತ್ರ ಚರಿತ್ರೆ', 'ಶರಣ–ಕಿರಣ ವ್ಯಕ್ತಿ ಚಿತ್ರ', 'ಪ್ರಭುಲಿಂಗ ಲೀಲೆ' ವಿಮರ್ಶಾ ಕೃತಿಗಳನ್ನು ರಚಿಸಿದ್ದಾರೆ.

ಅಲ್ಲದೆ, ಸಂಪಾದಿತ ಕೃತಿಗಳಾದ 'ಮೂಡಲ ಸೀಮೆಯ ಕಥೆಗಳು', 'ಕಾಡಂಚಿನ ಕೋಗಿಲೆಗಳ ಕಲರವ', 'ಕಪಿಲಾ ನದಿಯ ಎಡಬಲದಿ', 'ಹೆಜ್ಜೆಗೆ ಅಕ್ಕ', 'ಛಂದೋನಿಜಗುಣ', 'ರಾಜಪಥ', 'ಸೋಮಸಿರಿ', 'ಶಿವಪ್ರಭೆ', 'ಶಿವಯೋಗ', 'ಹೊನ್ನಹೊಳೆ', 'ಶಿವಸಂಪದ' ಸೇರಿ ಅನೇಕ ಅತ್ಯುತ್ತಮ ಕೃತಿಗಳನ್ನು ರಚಿಸಿದ್ದಾರೆ.

ಪ್ರೊ.ಮಲೆಯೂರು ಗುರುಸ್ವಾಮಿ ಅವರ ವ್ಯಕ್ತಿತ್ವ ಮತ್ತು ಸಾಹಿತ್ಯವನ್ನು ಬಿಂಬಿಸುವ ಸಂವಹನ ಪ್ರಕಾಶನ ಪ್ರಕಟಿತ 'ಮಲೆಯೂರು ಮಂದಾರ' ಕುರಿತು ಹಲವು ವಿದ್ವಾಂಸರು ಹಾಗೂ ಅವರ ಆತ್ಮೀಯರು ಉಪಯುಕ್ತ ಲೇಖವನ್ನು ಬರೆದಿದ್ದಾರೆ. ಈ ಗ್ರಂಥದಲ್ಲಿ ಮೂರು ಭಾಗಗಳಿವೆ. ಮೊದಲ ಭಾಗ ಒಡನಾಟ, ಎರಡನೇ ಭಾಗದಲ್ಲಿ ಸ್ವತಂತ್ರ ಕೃತಿಗಳ ಮತ್ತು ಸಂಪಾದಿತ ಕೃತಿಗಳ ವಿಮರ್ಶೆ ಲೇಖನಗಳಿವೆ. ಇದಲ್ಲದೆ, ಪ್ರೊ.ಮಲೆಯೂರು ಭಾಗವಹಿಸಿರುವ ವಿವಿಧ ಸಾಹಿತ್ಯ ಸಮ್ಮೇಳನಗಳು, ಧಾರ್ಮಿಕ, ಸಾಮಾಜಿಕ ಸಂಘ–ಸಂಸ್ಥೆಗಳ ಸಮಾರಂಭಗಳು ಹಾಗೂ ಪ್ರಶಸ್ತಿ, ಸನ್ಮಾನಗಳ ವಿವರದ ಭಾವಚಿತ್ರದ ವಿವರಗಳು ಈ ಕೃತಿಯಲ್ಲಿವೆ ಎಂದರು.

ಒಡನಾಟ ಭಾಗದಲ್ಲಿ ಮೂರು ಕವನ ಸೇರಿದಂತೆ ಒಟ್ಟು 31 ಲೇಖನಗಳಿವೆ. ಆರು ಕಾದಂಬರಿಗಳು ಮತ್ತು ಇತರ ಕೃತಿಗಳ ಬಗ್ಗೆ 13 ಜನ ಹೆಸರಾಂತ ಸಾಹಿತಿಗಳು ಮತ್ತು ವಿಮರ್ಶಕರು ಬರೆದಿರುವ ಅಧ್ಯಯನಪೂರ್ಣ ಲೇಖನಗಳಿವೆ. 23 ಸಂಪಾದಿತ ಕೃತಿಗಳನ್ನು ಕುರಿತು ಮೌಲಿಕ ಬರಹಗಳನ್ನು ಒಳಗೊಂಡಿವೆ. ನಂತರ ಪ್ರೊ.ಮಲೆಯೂರು ಗುರುಸ್ವಾಮಿ ಅವರ ಗುರುಗಳಾಗಿದ್ದ ಡಾ.ಸಿ.ಪಿ.ಕೆ ರಚಿತ ಶರಣು, ಶರಣಾರ್ಥಿ ಕವನ ಓದಿದರು. ನಂತರ ಶಿಷ್ಯವೃಂದ ರಚಿಸಿದ್ದ ಕವನ ವಾಚಿಸಿದರಲ್ಲದೆ, ಪ್ರೊ.ಮಲೆಯೂರು ಗುರುಸ್ವಾಮಿ ಪ್ರತಿಷ್ಠಾನ ಅವರ ಹೆಸರಿನಲ್ಲಿ ಕೊಡಮಾಡುವ ಪ್ರಶಸ್ತಿಯನ್ನು ಹಿರಿಯ ಅನುವಾದಕ, ವಿಮರ್ಶಕ ಪ್ರೊ.ಎಚ್.ಎಸ್.ಶಿವಪ್ರಕಾಶ್ ನೀಡಿ, ಗೌರವಿಸಿರುವುದು ಉತ್ತಮ ಸಂಗತಿ ಎಂದು ಹೇಳಿದರು.

ಈ ವೇಳೆ ಕುಂದೂರು ಮಠದ ಶ್ರೀ ಶರತ್‌ಚಂದ್ರ ಸ್ವಾಮೀಜಿ, ಪ್ರೊ.ಮೊರಬದ ಮಲ್ಲಿಕಾರ್ಜುನ, ನಿವೃತ್ತ ಉಪನ್ಯಾಸಕಿ ಜಯಂತಿ ಮಲೆಯೂರು ಗುರುಸ್ವಾಮಿ, ಶಾಸಕ ಹೆಚ್.ಎಂ.ಗಣೇಶ್‌ಪ್ರಸಾದ್, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಮೈಸೂರು ಜಿಲ್ಲಾ ಘಟಕದ ಮಾಜಿ ಅಧ್ಯಕ್ಷ ಕಾನ್ಯ ಎಸ್.ಶಿವಮೂರ್ತಿ, ನಿವೃತ್ತ ಐಎಎಸ್ ಅಧಿಕಾರಿ ಡಾ.ಕೆ.ಸೋಮಶೇಖರ್, ಪ್ರೊ.ಮಲೆಯೂರು ಗುರುಸ್ವಾಮಿ ಪ್ರತಿಷ್ಠಾನದ ಕಾರ್ಯಕಾರಿ ಸಮಿತಿ ಸದಸ್ಯರು ಉಪಸ್ಥಿತರಿದ್ದರು. ಡಾ.ಎಂ.ಸುಗುಣ ಪ್ರಾರ್ಥಿಸಿದರೆ, ಕೆಬ್ಬೇಪುರ ರಾಜು ಸ್ವಾಗತಿಸಿದರು.

ಅ.25ಕ್ಕೆ ನಾಗಮಂಗಲ ಕೋಟೆ ವಿದ್ಯಾ ಗಣಪತಿ ವಿಸರ್ಜನೆ

ಡಿಸಿ, ಎಸ್ಪಿಯಿಂದ ಶಾಂತಿ ಸಭೆ



ನಾಗಮಂಗಲ,ಅ.21–ನಾಗಮಂಗಲ ಕೋಟೆ ವಿದ್ಯಾ ಗಣಪತಿ ವಿಸರ್ಜನಾ ಮಹೋತ್ಸವ ಶಾಂತಿ, ಸೌಹಾರ್ದಯುತವಾಗಿ ನಡೆಯಲಿ ಆದರೆ ಕಾನೂನಿನ ವಿರುದ್ಧ ನಡೆದರೆ ಶಿಸ್ತುಕ್ರಮ ಜರುಗಿಸಲಾಗುವುದು ಎಂದು ಜಿಲ್ಲಾಧಿಕಾರಿ ಕುಮಾರ್ ತಿಳಿಸಿದರು.

ಅ.25ರಂದು ಶ್ರೀಕೋಟೆ ವಿದ್ಯಾ ಗಣಪತಿಯ ಅದ್ಧೂರಿ ವಿಸರ್ಜನಾ ಮಹೋತ್ಸವದ ನಡೆಯಲಿದ್ದು, ಇದರ ಅಂಗವಾಗಿ ಶಾಂತಿಸಭೆಯಲ್ಲಿ ಭಾಗವಹಿಸಿ ಮಾತನಾಡಿದರು.

ಶ್ರೀ ವಿದ್ಯಾ ಗಣಪತಿಯ ವಿಸರ್ಜನಾ ಮಹೋತ್ಸವದ ಅಂಗವಾಗಿ ಶಾಂತಿ, ಸೌಹಾರ್ದಯುತವಾಗಿ ಯಾವುದೇ ಅಹಿತಕರ ಘಟನೆಗಳು ಸಂಭವಿಸಿದಂತೆ ಎಲ್ಲರ ಸಹಕಾರದೊಂದಿಗೆ ಸಂಭ್ರಮದ ಆಚರಣೆಯೊಂದಿಗೆ ವಿಸರ್ಜನಾ ಮಹೋತ್ಸವ ನಡೆಯಲಿ. ಆದರೆ ಇಂತಹ ಅದ್ದೂರಿ ಕಾರ್ಯಕ್ರಮಗಳಲ್ಲಿ ಕಿಡಿಗೇಡಿಗಳಿಂದ ಅನಾಹುತ ನಡೆದರೆ ಯಾವುದೇ ಮುಲಾಜಿಲ್ಲದೆ ಶಿಸ್ತು ಕ್ರಮ ಜರುಗಿಸಲಾಗುವುದೆಂದು ಈ ಸಂದರ್ಭದಲ್ಲಿ ಖಡಕ್ ಎಚ್ಚರಿಕೆ ನೀಡಿದರು.

ಮಂಡ್ಯ ಎಸ್ಪಿ ಅಶೋಕ್ ಬಾಲದಂಡಿ ಮಾತನಾಡುತ್ತಾ, ನಾಗಮಂಗಲದ ಬದರಿ ಕೊಪ್ಪಲು ಗ್ರಾಮದ ಗಣಪತಿ ವಿಸರ್ಜನಾ ಸಮಯದಲ್ಲಿ ನಡೆದಂತಹ ಘಟನೆ ಕರ್ನಾಟಕ ರಾಜ್ಯ ವ್ಯಾಪ್ತಿಯಲ್ಲಿ ಹರಡಿದ್ದು ಮತ್ತೆ ಘಟನೆ ಮರುಕಳಿಸದಂತೆ ಶಾಂತಿ ಸುವ್ಯವಸ್ಥೆ ಕಾಪಾಡುವ ಸಲುವಾಗಿ ಪಟ್ಟಣದ ಕೋಟೆ ಗಣಪತಿ ವಿಸರ್ಜನಾ ಸಮಯದಲ್ಲಿ ಯಾವುದೇ ಘಟನೆ ನಡೆಯದಂತೆ ಶಾಂತಿಸಭೆಯನ್ನು ಏರ್ಪಡಿಸಿದ್ದೇವೆ ಹಾಗೂ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಗಣೇಶ ಮೆರವಣಿಗೆ ವೇಳೆ ಮುಖ್ಯಸ್ಥಳಗಳಲ್ಲಿ ಸಿಸಿ ಕ್ಯಾಮೆರಾಗಳನ್ನು ಅಳವಡಿಸಲಾಗುವುದು. ನಾಗಮಂಗಲದಲ್ಲಿ ಇಂಥಹ ಘಟನೆ ಮರುಕಳಿಸಿದಂತೆ ಮುಂಜಾಗ್ರತೆಕ್ರಮ ಕೈಗೊಳ್ಳಲಾಗುವುದು ಎಂದರು.

ಇದೇ ಸಂದರ್ಭದಲ್ಲಿ ಅಡಿಷನಲ್ ಎಸ್.ಪಿ ತಿಮ್ಮಯ್ಯ, ನಾಗಮಂಗಲ ತಹಸಿಲ್ದಾರ್ ಜಿ.ಆದರ್ಶ್, ಮಂಡ್ಯ ಜಿಲ್ಲಾ ಪಂಚಾಯತ್ ಸಿಇಓ ಶೇಕ್ ತನ್ವೀರ್ ಆಸಿಫ್, ನಾಗಮಂಗಲ ಸಬ್ ಇನ್ಸ್‌ಪೆಕ್ಟರ್ ಶಿವಕುಮಾರ್, ಸರ್ಕಲ್ ಇನ್ಸ್‌ಪೆಕ್ಟರ್ ನಿರಂಜನ್, ಗ್ರಾಮಾಂತರ ಪೊಲೀಸ್ ಠಾಣೆ ಪಿಎಸ್ಐ ಅನ್ನಪೂರ್ಣ ಸೇರಿದಂತೆ ಎಲ್ಲ ಜನಾಂಗದ ಮುಖಂಡರು ಭಾಗವಹಿಸಿದ್ದರು.

ಮಳೆ ಆರ್ಭಟಕ್ಕೆ ಮಾರ್ಕೋನಹಳ್ಳಿ ಜಲಾಶಯ ಭರ್ತಿ

● ಮಾದಿಹಳ್ಳಿ ಸೇತುವೆ ಮುಳುಗಡೆ ● ಶಿಂಷಾ ನದಿಗೆ ಹೆಚ್ಚುವರಿ ನೀರು ಬಿಡುಗಡೆ

ಕಿಕ್ಕೇರಿ,ಅ.21– ಮಾರ್ಕೋನಹಳ್ಳಿ ಜಲಾಶಯದ ಜಲಾನಯನ ಪ್ರದೇಶದಲ್ಲಿ ಹೆಚ್ಚು ಮಳೆ ಆಗುತ್ತಿದ್ದು, ಜಲಾಶಯವು ಭರ್ತಿಯಾಗಿರುತ್ತದೆ. ಜಲಾಶಯದ ಒಳಹರಿವು ಗಣನೀಯ ಪ್ರಮಾಣದಲ್ಲಿ ಏರಿಕೆ ಆಗುವ ಸಂಭವವಿದ್ದು, ಯಾವುದೇ ಸಮಯದಲ್ಲಿ ಜಲಾಶಯದಿಂದ ಶಿಂಷಾ ನದಿಗೆ ನೀರನ್ನು ಬಿಡುವ ಸಾಧ್ಯತೆಯಿದೆ. ಒಳಹರಿವಿಗೆ ತಕ್ಕಂತೆ ಜಲಾಶಯದಿಂದ ನೀರನ್ನು ನದಿಗೆ ಹರಿಸಲಾಗುವುದು. ಆದುದರಿಂದ ಮಾರ್ಕೋನಹಳ್ಳಿ ಜಲಾಶಯದ ಕೆಳಭಾಗದ ಹಾಗೂ ನದಿಪಾತ್ರದ ಕುಣಿಗಲ್ ತಾಲೂಕಿನ ಹಳ್ಳಿಗಳಾದ ಮಾರ್ಕೋನಹಳ್ಳಿ, ಕಾಡಶೆಟ್ಟಿಹಳ್ಳಿ, ಬಿಸಿನೆಲೆ, ತೊರೆಹಳ್ಳಿ, ಶಾನುಭಾಗೋನಹಳ್ಳಿ, ಕಿರಂಗೂರು, ಪಡುವಗೆರೆ, ಬೆಟ್ಟಹಳ್ಳಿ, ದೊಡ್ಡಕಲ್ಲಹಳ್ಳಿ, ವಳಗೆರಪುರ, 14ನೇ ಮೈಲಿ ಬಂಗಲಿ, ಚಂದನಹಳ್ಳಿ, ಅಂಚಿಪುರ, ಕೀಲಾರ, ಉಂಗ್ರ, ತೊರೆಬೊಮ್ಮನಹಳ್ಳಿ, ಕೊಡವತ್ತಿ, ಹನುಮಂತನಗರ ಹಾಗೂ ನಾಗಮಂಗಲ ತಾಲೂಕಿನ ಮಲ್ಲನಕೊಪ್ಪಲು, ದೊಡ್ಡ ಉಪ್ಪಳ, ತಿಗಳರ ಕೊಪ್ಪಲು, ಬಳ್ಳಕೆರೆ, ಹದಮಗೆರೆ, ಅರಕೆರೆ, ಚೊಟ್ಟನಹಳ್ಳಿ, ಕೂಡಗಬಾಳು, ಕೌಡ್ಲೆ, ಯಡವನಹಳ್ಳಿ, ಬೆಕ್ಕಳಲೆ, ಪಟೇಲನ ಕೊಪ್ಪಲು, ಕಿರಂಗೂರು ಹಾಗೂ ಇನ್ನಿತರೆ ಶಿಂಷಾ ನದಿ ಪಾತ್ರದ ಗ್ರಾಮಗಳ ಸಾರ್ವಜನಿಕರಿಗೆ ಹಾಗೂ ಜಾನುವಾರುಗಳಿಗೆ ಅನಾಹುತ ಆಗದಂತೆ, ಸುರಕ್ಷಿತ ಸ್ಥಳದಲ್ಲಿ ಇರಲು, ಹೊರ ತೆರಳಲು ಎಡೆಯೂರು ಹೇಮಾವತಿ ನಾಲಾ ಉಪ ವಿಭಾಗ ಕಾವೇರಿ ನೀರಾವರಿ ನಿಗಮ ನಿಯಮಿತದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಕಿಕ್ಕೇರಿ ಹೋಬಳಿಯ ಮಾದಿಹಳ್ಳಿ ಗ್ರಾಮದ ಸೇತುವೆ ಮುಳುಗಡೆಯಾಗಿ ಸೋಮವಾರ ಗ್ರಾಮದಿಂದ ಹೊರ ತೆರಳಲು ಗ್ರಾಮಸ್ಥರು, ಶಾಲಾ ಮಕ್ಕಳು ಪರದಾಡಿದರು.

ಮಾದಿಹಳ್ಳಿ ಸೇತುವೆ ಮುಳುಗಡೆ: ಸತತವಾಗಿ ವಾರದಿಂದ ಬಿಡದೆ ಸುರಿಯುತ್ತಿರುವ ಮಳೆರಾಯನ ಆರ್ಭಟಕ್ಕೆ ಕೆರೆಕಟ್ಟೆ ಉಕ್ಕಿ ಹರಿಯುವಂತಾಗಿದೆ.

ಪಟ್ಟಣದ ಅಮಾನಿಕೆರೆಗೆ ಹರಿದುಬರುವ ನೀರಿನ ಮೂಲಪ್ರದೇಶವಾದ ಸಾಸಲು, ದೇವರಹಳ್ಳಿ, ಮಾದಿಹಳ್ಳಿ ಗ್ರಾಮದ ಕಾಲುವೆಯಲ್ಲಿ ನೀರು ಉಕ್ಕಿ ಹರಿಯುತ್ತಿದ್ದು, ಕಾಲುವೆ ದಂಡೆಯ ಹೊಲಗದ್ದೆ ಮುಳುಗಡೆಯಾಗಿವೆ.

ಸಾಸಲು ಗ್ರಾಮದಿಂದ ಐನೋರಹಳ್ಳಿ ಗ್ರಾಮಕ್ಕೆ, ಅಂಕನಹಳ್ಳಿಯಿಂದ ದೇವರಹಳ್ಳಿ ಗ್ರಾಮಕ್ಕೆ ಹಾಗೂ ಬೂವಿನಹಳ್ಳಿ ಮಾರ್ಗದಿಂದ ಮಾದಿಹಳ್ಳಿ ಗ್ರಾಮಕ್ಕೆ ಕಲ್ಪಿಸುವ ರಸ್ತೆಯ ಸೇತುವೆ ಸಂಪೂರ್ಣ ಜಲಾವೃತವಾಗಿದೆ.

ಮಾದಿಹಳ್ಳಿ ಗ್ರಾಮದಲ್ಲಿ ಸೇತುವೆ ಹಾಳಾಗಿ ಮೂರ್‍ನಾಲ್ಕು ವರ್ಷಗಳಾಗಿದ್ದು, ಜನಪ್ರತಿನಿಧಿಗಳು ಇತ್ತ ಗಮನ ಹರಿಸದೆ ಅಂತಿಮವಾಗಿ ಗ್ರಾಮಸ್ಥರೇ ಗ್ರಾಪಂ. ಸದಸ್ಯ ಶ್ರೀಧರ್ ಸಹಕಾರದಲ್ಲಿ ತಾತ್ಕಾಲಿಕ ಸೇತುವೆ ನಿರ್ಮಿಸಿಕೊಂಡು ಓಡಾಡುತ್ತಿದ್ದರು. ಮಳೆಯ ಆರ್ಭಟಕ್ಕೆ ಉಕ್ಕಿ ಹರಿದ ನೀರಿನಿಂದ ಗ್ರಾಮಸ್ಥರಿಂದ ನಿರ್ಮಿಸಿಕೊಳ್ಳಲಾಗಿದ್ದ ಸೇತುವೆ ಕೊಚ್ಚಿಹೋಗಿದೆ. ದೊಡ್ಡ ಪ್ರಮಾಣದಲ್ಲಿ ನೀರಿನ ಕೊರಕಲು ಸೇತುವೆ ಬಳಿ ಮೂಡಿದ್ದು, ಗ್ರಾಮಸ್ಥರು ಗ್ರಾಮದಿಂದ ಬೇರೆ ಸ್ಥಳಗಳಿಗೆ ತೆರಳಲಾಗದಂತೆ ಜಲದಿಗ್ಬಂಧನ ವಿಧಿಸಿದೆ. ಶಾಲಾ ಕಾಲೇಜು ವಿದ್ಯಾರ್ಥಿಗಳು ಮನೆಯಿಂದ ಹೊರ ಹೋಗಲಾಗದೆ ಗ್ರಾಮದಲ್ಲೇ ಉಳಿದರು. ಹಲವರು ಬೆಳಗ್ಗೆ ಮಕ್ಕಳನ್ನು ಶಾಲೆಗೆ ಕಳುಹಿಸಲು ಬೈಕಿನಲ್ಲಿ ಸೇತುವೆ ದಾಟಲು ಮುಂದಾಗಿ ಸಾಧ್ಯವಾಗದೆ ಗ್ರಾಮಕ್ಕೆ ವಾಪಸ್ಸಾದರು.

ನೀರಿನ ರಭಸಕ್ಕೆ ಕಾಲುವೆ ದಂಡೆಯಲ್ಲಿನ ಭತ್ತ, ಜಾನುವಾರು ಮೇವಿನ ಹುಲ್ಲು, ತೆಂಗು, ಬಾಳೆ, ಅಡಿಕೆ ತೋಟಗಳು ಜಲಾವೃತವಾಗಿವೆ. ರಾಸುಗಳಿಗೆ ಮೇವು ತರಲಾಗದೆ ರೈತರು ಕಂಗಾಲಾಗಿದ್ದಾರೆ.

ಗೋದಾಮು ಕಟ್ಟಡ ಉದ್ಘಾಟನೆ



ಪಾಲಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಗೋದಾಮಿನ ಕಟ್ಟಡವನ್ನು ಶಾಸಕ ರಮೇಶ್ ಬಂಡಿಸಿದ್ದೇಗೌಡ ಉದ್ಘಾಟಿಸಿದರು. ಮನಮುಲ್ ಅಧ್ಯಕ್ಷ ಬೋರೇಗೌಡ, ಎಂಡಿಸಿಸಿ ಬ್ಯಾಂಕ್ ಅಧ್ಯಕ್ಷ ಜೋಗಿಗೌಡ, ನಿರ್ದೇಶಕ ಪಿ.ಎಸ್.ಚಂದ್ರಶೇಖರ್, ಎಂಡಿ ವನಜಾ, ಬಿಜೆಪಿ ಮುಖಂಡ ಇಂಡವಾಳು ಸಚ್ಚಿದಾನಂದ, ಜೆಡಿಎಸ್ ಮುಖಂಡರಾದ ಪಿಹೆಚ್ ಚಂದ್ರಶೇಖರ್, ಪೈಲ್ವಾನ್ ಮುಕುಂದ, ಎಸ್.ಲಿಂಗಣ್ಣ, ಪಾಲಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಭೈರೇಶ್ ಹಾಗೂ ನಿರ್ದೇಶಕರು ಉಪಸ್ಥಿತರಿದ್ದರು.

ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ: ಕಲಾವಿದರಿಂದ ಅರ್ಜಿ ಆಹ್ವಾನ

ಮಂಡ್ಯ,ಅ.21– ಮಂಡ್ಯ ಜಿಲ್ಲೆಯಲ್ಲಿ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು 2024–ಡಿಸೆಂಬರ್ 20, 21, 22ರಂದು ಆಯೋಜಿಸಲಾಗಿದ್ದು, ಸದರಿ ಸಮ್ಮೇಳನದಲ್ಲಿ ಮೆರವಣಿಗೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಲು ಇಚ್ಛಿಸುವ ಕಲಾವಿದರಿಂದ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತ ಕಲಾವಿದರು ಅರ್ಜಿ ಸಲ್ಲಿಸಲು ನವೆಂಬರ್ 5 ಕೊನೆಯ ದಿನವಾಗಿದ್ದು, ತಮ್ಮ ಕಲಾ ಪ್ರಾಕಾರದ ಮಾಹಿತಿ ಹಾಗೂ ದಾಖಲೆಗಳೊಂದಿಗೆ ಮಂಡ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 08232–223197 ಅನ್ನು ಸಂಪರ್ಕಿಸಬಹುದು ಎಂದು ಮಂಡ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕ್ಯಾತನಹಳ್ಳಿಯಲ್ಲಿ ಹೈಟೆಕ್ ಸರ್ಕಾರಿ ಶಾಲೆಗೆ ಭೂಮಿಪೂಜೆ

ಪಾಂಡವಪುರ,ಅ.21–ಸರಕಾರಿ ಶಾಲೆಗಳನ್ನು ಬಲವರ್ಧನೆಗೊಳಿಸುವ ಉದ್ದೇಶದಿಂದ ಎಲ್ಲಾ ರೀತಿ ಸೌಲಭ್ಯಗಳು ಹೊಂದಿರುವ ಹೈಟೆಕ್ ಮಾದರಿಯಲ್ಲಿ ಸರಕಾರಿ ಶಾಲೆಗಳ ನಿರ್ಮಾಣ ಮಾಡಲಾಗುವುದು ಎಂದು ಶಾಸಕ ದರ್ಶನ್ ಪುಟ್ಟಣ್ಣಯ್ಯ ಹೇಳಿದರು.

ತಾಲೂಕಿನ ಕ್ಯಾತನಹಳ್ಳಿ ಗ್ರಾಮದಲ್ಲಿ ಅಂದಾಜು 5 ಕೋಟಿ ಮೌಲ್ಯದ ಹೈಟೆಕ್ ಸರಕಾರಿ ಮಾದರಿ ಶಾಲೆ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಿ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದರು.



ಖಾಸಗಿ ಶಾಲೆಗಳ ಹಾವಳಿ ತಡೆಗಟ್ಟುವುದು ಹಾಗೂ ಸರಕಾರಿ ಶಾಲೆಗಳ ಬಲವರ್ಧನೆಪಡಿಸುವ ಉದ್ದೇಶದಿಂದ ಹೋಬಳಿಗೊಂದು ಹೈಟೆಕ್ ಮಾದರಿಯ ಸರಕಾರಿ ಶಾಲೆಗಳನ್ನು ನಿರ್ಮಿಸುವ ಹೊಸ ಪ್ರಯತ್ನಕ್ಕೆ ಮುಂದಾಗಿದ್ದೇವೆ. ಖಾಸಗಿ ಸಂಸ್ಥೆಗಳ ಸಿಎಸ್‌ಆರ್ ಫಂಡ್‌ನಿಂದ ಹಣ ತಂದು ಸರಕಾರಿ ಶಾಲೆ ಜಾಗದಲ್ಲಿ ಹೊಸದಾಗಿ ಹೈಟೆಕ್ ಮಾದರಿಯಲ್ಲಿ ಶಾಲೆಯನ್ನು ನಿರ್ಮಿಸಿ, ಮತ್ತೆ ಸರಕಾರಕ್ಕೆ ಹಸ್ತಾಂತರಿಸಲಾಗುವುದು. ಆ ನಂತರ ಶಾಲೆಯನ್ನು ಸರಕಾರವೇ ನಡೆಸಿಕೊಂಡು ಹೋಗಲಿದೆ ಎಂದು ತಿಳಿಸಿದರು.

ತಾಲೂಕಿನ ಐದು ಹೈಟೆಕ್ ಮಾದರಿಯ ಸರಕಾರಿ ಶಾಲೆಯನ್ನು ನಿರ್ಮಿಸಲು ಕಾರ್ಯಕ್ರಮ ರೂಪಿಸಿಕೊಳ್ಳಲಾಗಿದೆ. ಪ್ರಾಯೋಗಿಕವಾಗಿ ಕ್ಯಾತನಹಳ್ಳಿ ಗ್ರಾಮದಲ್ಲಿಯೇ ಶಾಲೆ ನಿರ್ಮಾಣಕ್ಕೆ ಚಾಲನೆ ನೀಡಲಾಗಿದೆ. ನಂತರ ಹಂತಹಂತವಾಗಿ ಗುರುತಿಸಲಾಗಿರುವ ಸ್ಥಳಕ್ಕೆ ಶಾಲೆಗಳನ್ನು ನಿರ್ಮಿಸಲು ಕ್ರಮವಹಿಸಲಾಗುವುದು. ಶಾಲೆ ನಿರ್ಮಾಣಕ್ಕಾಗಿ ಸರಕಾರದಿಂದ ಅನುದಾನ ಬಳಕೆ ಮಾಡಿಕೊಳ್ಳುತ್ತಿಲ್ಲ. ಸರಕಾರದ ಅನುದಾನ ಬಳಕೆ ಮಾಡಿಕೊಳ್ಳಬೇಕಾದರೆ ನಿಯಮಗಳು ಇರುತ್ತವೆ. ಹಾಗಾಗಿ ಸದ್ಯಕ್ಕೆ ಈ ಶಾಲೆಗಳ ನಿರ್ಮಾಣಕ್ಕಾಗಿ ಸಂಪೂರ್ಣವಾಗಿ ಖಾಸಗಿ ಸಂಸ್ಥೆಗಳಿಂದ ಹಣ ಸಂಗ್ರಹಿಸಿ ಶಾಲೆಗಳನ್ನು ನಿರ್ಮಿಸಲಾಗುತ್ತಿದೆ. ಶಾಲೆಗಳ ನಿರ್ವಹಣೆಗೂ ಸಹ ಹಣವನ್ನು ಡಿಪಾಜಿಟ್ ಮಾಡಲಾಗುವುದು ಎಂದರು ಭರವಸೆ ನೀಡಿದರು.

ಎಲ್‌ಕೆಜಿಯಿಂದ ಎಸ್‌ಎಸ್‌ಎಲ್‌ಸಿ ವರೆಗೂ ತರಗತಿಗಳು ನಡೆಯಲಿದ್ದು, ಅಗತ್ಯಕ್ಕಿಂತ ಹೆಚ್ಚಾಗಿ ಶಿಕ್ಷಕರ ನೇಮಕ ಹಾಗೂ ಸರಕಾರದಿಂದ ಅನುಮತಿ ಪಡೆದು ಅತಿಥಿ ಶಿಕ್ಷಕರನ್ನು ಸಹ ನೇಮಿಸಿಕೊಳ್ಳಲಾಗುವುದು. ಶಾಲಾಭಿವೃದ್ಧಿ ಸಮಿತಿ, ಶಿಕ್ಷಕರು ಹಾಗೂ ಶಿಕ್ಷಣ ಇಲಾಖೆಯೇ ಸಂಪೂರ್ಣ ಜವಾಬ್ದಾರಿ ತೆಗೆದುಕೊಂಡು ಶಾಲೆಗಳನ್ನು ನಡೆಸಲಿವೆ. ಖಾಸಗಿ ಶಾಲೆಗಳ ಮಾದರಿಯಲ್ಲಿಯೇ ಬಸ್ ಸೌಲಭ್ಯಗಳನ್ನು ಒದಗಿಸಿಕೊಡಲು ಚಿಂತನೆ ನಡೆಸಲಾಗುತ್ತಿದೆ ಎಂದರು.

ಇದೇ ವೇಳೆ ಗ್ರಾಮಕ್ಕೆ ಗಣನೀಯ ಸೇವೆಸಲ್ಲಿಸಿದ ಹಲವು ಮಹನೀಯರ ಹೆಸರಿನಲ್ಲಿ ಹಿರಿಯ ಶಿಕ್ಷಕರಾದ ಜವರೇಗೌಡ, ತಿರುಮಲೇಗೌಡ ಹಾಗೂ ಶಿವಲಿಂಗೇಗೌಡ ಎಂಬುವರನ್ನು ಸನ್ಮಾನಿಸಿ ಅಭಿನಂದಿಸಲಾಯಿತು.

ಈ ಸಂದರ್ಭದಲ್ಲಿ ತಹಸೀಲ್ದಾರ್ ಸಂತೋಷ್, ಇಓ ಲೋಕೇಶ್‌ಮೂರ್ತಿ, ಬಿಇಓ ರವಿಕುಮಾರ್, ಬಿ.ಆರ್.ಪ್ರಕಾಶ್, ರೈತ ನಾಯಕಿ ಸುನೀತಾ ಪುಟ್ಟಣ್ಣಯ್ಯ, ಸ್ಮಿತಾಪುಟ್ಟಣ್ಣಯ್ಯ, ರೈತಸಂಘದ ಜಿಲ್ಲಾಧ್ಯಕ್ಷ ಎ.ಎಲ್.ಕೆಂಪೂಗೌಡ, ಅಮೃತಿ ರಾಜಶೇಖರ್, ಕೆ.ಎಸ್.ದಯಾನಂದ, ಕೆ.ಟಿ.ಗೋವಿಂದೇಗೌಡ, ರಾಮ್‌ದಾಸ್ ಸೇರಿದಂತೆ ಹಲವರು ಭಾಗವಹಿಸಿದ್ದರು.

ಒಂದನೇ ಪುಟದಿಂದ

ಯೋಗೇಶ್ವರ್ ರಾಜೀನಾಮೆ

ಮನವೊಲಿಸಲು ಪ್ರಯತ್ನಿಸುವುದಾಗಿಯೂ ಒಂದು ದಿನ ಕಾಯುವಂತೆ ತಿಳಿಸಿದ್ದಾರೆ. ಹೀಗಾಗಿ ತಾವು ಒಂದು ದಿನದ ನಂತರ ನಿರ್ಧಾರ ಕೈಗೊಳ್ಳುವುದಾಗಿ ತಿಳಿಸಿದರು. ಆದರೆ, ಚನ್ನಪಟ್ಟಣ ಉಪ ಚುನಾವಣೆಯಲ್ಲಿ ಸ್ಪರ್ಧಿಸುವುದನ್ನು ಖಚಿತಪಡಿಸಿದರು. ಕುಮಾರಸ್ವಾಮಿ ಅವರಿಂದ ಚನ್ನಪಟ್ಟಣ ಕ್ಷೇತ್ರ ತೆರವಾಗುತ್ತಿದ್ದಂತೆಯೇ ಬಿಜೆಪಿಯ ಸಿ.ಪಿ. ಯೋಗೇಶ್ವರ್, ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ತಮ್ಮ ವ್ಯೂಹ ರಚನೆಗೆ ಮುಂದಾದರು. ಇವರಿಬ್ಬರೂ ಕ್ಷೇತ್ರಾದ್ಯಂತ ಪ್ರವಾಸ ಕೈಗೊಂಡಿದ್ದರು. ತಮ್ಮ ತಮ್ಮ ಪಕ್ಷದ ಕಾರ್ಯಕರ್ತರನ್ನು ಸಂಘಟಿಸುವಲ್ಲಿಯೂ ತೊಡಗಿಸಿಕೊಂಡಿದ್ದರು. ಮತ್ತೊಂದೆಡೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಾವೇ ಚನ್ನಪಟ್ಟಣದ ಅಭ್ಯರ್ಥಿ ಎಂದು ಹೇಳುತ್ತಾ ಕ್ಷೇತ್ರದಲ್ಲಿ ಸಂಚರಿಸತೊಡಗಿದರು. ಅದೇ ವೇಳೆ ಹಲವಾರು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡರು.


ಚನ್ನಪಟ್ಟಣದಲ್ಲಿ ತಮ್ಮ ಪುತ್ರ ನಿಖಿಲ್ ಕುಮಾರಸ್ವಾಮಿಯನ್ನು ಸ್ಪರ್ಧೆಗಿಳಿಸಬೇಕು ಎಂಬ ಇರಾದೆ ಕುಮಾರಸ್ವಾಮಿಯವರಿಗೆ ಇದೆಯಾದರೂ ಈವರೆಗೂ ಅವರು ಈ ವಿಚಾರವನ್ನು ಬಹಿರಂಗವಾಗಿ ಹೇಳಿಲ್ಲ. ಆದರೆ, ಚನ್ನಪಟ್ಟಣ ಕ್ಷೇತ್ರ ತಮ್ಮ ಪಕ್ಷಕ್ಕೆ ಬಿಟ್ಟುಕೊಡಬೇಕು ಎಂಬುದರಲ್ಲಿ ಅಚಲವಾಗಿದ್ದು, ಬಿಜೆಪಿ ರಾಷ್ಟ್ರೀಯ ನಾಯಕರನ್ನು ಮನವೊಲಿಸಿ ಕ್ಷೇತ್ರವನ್ನು ಪಡೆದುಕೊಂಡಿದ್ದಾರೆ. ಅಭ್ಯರ್ಥಿ ಘೋಷಣೆಯನ್ನು ಕುಮಾರಸ್ವಾಮಿಯವರೇ ಮಾಡಬೇಕಾಗಿದೆ. ಆದರೆ, ಸಿ.ಪಿ. ಯೋಗೇಶ್ವರ್ ಸೆಟೆದು ನಿಂತಿರುವುದು ಹಾಗೂ ಕ್ಷೇತ್ರದ ಬಿಜೆಪಿ ಮುಖಂಡರು ಮತ್ತು ನೆರೆಹೊರೆ ಕ್ಷೇತ್ರದ ಆ ಪಕ್ಷದ ನಾಯಕರು ಯೋಗೇಶ್ವರ್ ಬೆನ್ನಿಗೆ ನಿಂತಿರುವುದು ಕುಮಾರಸ್ವಾಮಿಯವರಿಗೆ ಇರಿಸು–ಮುರಿಸನ್ನುಂಟು ಮಾಡಿದೆ. ಚನ್ನಪಟ್ಟಣದಲ್ಲಿ ಪಕ್ಷೇತರರಾಗಿ ಹಾಗೂ ರಾಜ್ಯದಲ್ಲಿ ಅಸ್ತಿತ್ವದಲ್ಲೇ ಇಲ್ಲದಿರುವ ಸಮಾಜವಾದಿ ಪಕ್ಷದ ಚಿಹ್ನೆಯಿಂದ ಸ್ಪರ್ಧಿಸಿಯೂ ಗೆಲುವು ಸಾಧಿಸಿದ್ದ ಸಿ.ಪಿ.ಯೋಗೇಶ್ವರ್ ಕ್ಷೇತ್ರದಲ್ಲಿ ಹಿಡಿತ ಹೊಂದಿದ್ದಾರೆ. ಅವರು ಪಕ್ಷೇತರರಾಗಿ ಅಥವಾ ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣಕ್ಕಿಳಿದರೆ, ಪುತ್ರ ಹ್ಯಾಟ್ರಿಕ್ ಸೋಲನನುಭವಿಸಬೇಕಾಗುತ್ತದೆ ಎಂಬ ಆತಂಕ ಕುಮಾರಸ್ವಾಮಿ ಅವರದು. ಅಂತಹ ಪರಿಸ್ಥಿತಿ ಬಂದರೆ ಪತ್ನಿ ಅನಿತಾ ಕುಮಾರಸ್ವಾಮಿಯವರನ್ನು ಕಣಕ್ಕಿಳಿಸುವ ಬಗ್ಗೆಯೂ ಚಿಂತನೆ ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಚನ್ನಪಟ್ಟಣ ಉಪಚುನಾವಣೆ ವಿಚಾರದಲ್ಲಿ ಎಚ್ಚರಿಕೆ ಹೆಜ್ಜೆ ಇಟ್ಟಿರುವ ಕುಮಾರಸ್ವಾಮಿ ಮತ್ತು ನಿಖಿಲ್ ಈವರೆವಿಗೂ ನಿಖಿಲ್ ಸ್ಪರ್ಧಿಸುತ್ತಾರೆ ಎಂದು ಹೇಳಿಲ್ಲ. ಅದೇ ವೇಳೆ ನಿಖಿಲ್‌ಗೆ ಉಪಚುನಾವಣೆಯಲ್ಲಿ ಆಸಕ್ತಿ ಇಲ್ಲ ಎಂದು ಮಾಜಿ ಸಚಿವ ಸಾ.ರಾ. ಮಹೇಶ್ ಇತ್ತೀಚೆಗೆ ಹೇಳಿದ್ದರು. ಮತ್ತೊಂದೆಡೆ ಯೋಗೇಶ್ವರ್ ಸಹ ಬಿಜೆಪಿ ನಾಯಕರು ಕುಮಾರಸ್ವಾಮಿ ಮನವೊಲಿಸಿ ಕ್ಷೇತ್ರವನ್ನು ಬಿಜೆಪಿಗೆ ತೆಗೆದುಕೊಂಡು ತಮಗೇ ಟಿಕೆಟ್ ನೀಡುತ್ತಾರೆ ಎಂದೇ ಹೇಳುತ್ತಾ ಬಂದಿದ್ದರು. ಆದರೆ, ನಿನ್ನೆ (ಅ. 20) ಹಠಾತ್ತನೇ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಚನ್ನಪಟ್ಟಣ ಅಭ್ಯರ್ಥಿಯನ್ನು ಕುಮಾರಸ್ವಾಮಿ ಘೋಷಿಸುತ್ತಾರೆ ಎಂಬ ಹೇಳಿಕೆಯನ್ನು ನೀಡಿದರೆ, ಕುಮಾರಸ್ವಾಮಿಯವರು ಯೋಗೇಶ್ವರ್ ಕಾಂಗ್ರೆಸ್ ಸಂಪರ್ಕದಲ್ಲಿದ್ದಾರೆ, ಡಿ.ಕೆ.ಶಿವಕುಮಾರ್ ಅವರನ್ನು ಭೇಟಿಯಾಗಿದ್ದಾರೆ. ಕೆಲ ಬಿಜೆಪಿ ನಾಯಕರು ಕಾಂಗ್ರೆಸ್‌ನೊಂದಿಗೆ ಸೇರಿಕೊಂಡು ಮೈತ್ರಿಗೆ ಹುಳಿ ಹಿಂಡುತ್ತಿದ್ದಾರೆ ಎಂದು ನೀಡಿದ ಹೇಳಿಕೆ ಯೋಗೇಶ್ವರ್ ಅವರನ್ನು ಕೆರಳಿಸಿ ಎಂಎಲ್‌ಸಿ ಸ್ಥಾನಕ್ಕೆ ರಾಜೀನಾಮೆ ನೀಡುವ ಮಟ್ಟಕ್ಕೆ ಕೊಂಡೊಯ್ದಿದೆ ಎಂದು ವಿಶ್ಲೇಷಿಸಲಾಗಿದೆ. ವಿಶೇಷವೆಂದರೆ ನಾಲ್ಕೈದು ದಿನದ ಹಿಂದೆ ಜೆಡಿಎಸ್‌ನ ಕೆಲ ನಾಯಕರು ಯೋಗೇಶ್ವರ್‌ರವರನ್ನು ಭೇಟಿ ಮಾಡಿ ಜೆಡಿಎಸ್ ಚಿಹ್ನೆಯಲ್ಲಿ ಸ್ಪರ್ಧಿಸುವಂತೆ ಆಫರ್ ನೀಡಿದ್ದರು.

ಇತ್ತ ಕಾಂಗ್ರೆಸ್ ಮುಖಂಡರು ಡಿ.ಕೆ. ಸುರೇಶ್ ಸ್ಪರ್ಧೆಗೆ ಒತ್ತಡವಿದೆ ಎಂದು ಬಹಿರಂಗವಾಗಿ ಹೇಳುತ್ತಲೇ ಯೋಗೇಶ್ವರ್ ಅವರನ್ನು ಸೆಳೆದುಕೊಳ್ಳಲು ಕಾರ್ಯತಂತ್ರ ರೂಪಿಸಿದ್ದಾರೆ. ಮಾಗಡಿ ಶಾಸಕ ಬಾಲಕೃಷ್ಣ ಮತ್ತು ಮದ್ದೂರು ಶಾಸಕ ಉದಯ್ ಅವರುಗಳು ಈಗಾಗಲೇ ಯೋಗೇಶ್ವರ್ ಜೊತೆ ಮಾತುಕತೆ ನಡೆಸಿ, ಯಶಸ್ವಿ ಆಗಿದ್ದಾರೆ. ಅಲ್ಲದೇ, ಯೋಗೇಶ್ವರ್ ಪಕ್ಷ ಸೇರ್ಪಡೆಗೆ ಕಾಂಗ್ರೆಸ್ ಹೈಕಮಾಂಡ್ ಗ್ರೀನ್ ಸಿಗ್ನಲ್ ನೀಡಿದೆ ಎಂದು ಹೇಳಲಾಗುತ್ತಿದ್ದು, ಪ್ರಭಾವಿ ಮುಖಂಡರು ಪಕ್ಷ ಸೇರುತ್ತಿದ್ದಾರೆ. ಅದಕ್ಕೆ ಸಿದ್ಧತೆ ಮಾಡಿಕೊಳ್ಳಿ ಎಂದು ಡಿ.ಕೆ. ಶಿವಕುಮಾರ್, ಕೆಪಿಸಿಸಿ ಕಚೇರಿಗೆ ಸಂದೇಶ ರವಾನಿಸಿರುವುದು ಇದಕ್ಕೆ ಪುಷ್ಟಿ ನೀಡುತ್ತದೆ. ಒಟ್ಟಾರೆ ಚನ್ನಪಟ್ಟಣದಲ್ಲಿ ರಾಜಕೀಯ ಚದುರಂಗದಾಟ ನಡೆಯುತ್ತಿದ್ದು, ಯೋಗೇಶ್ವರ್ ಪಕ್ಷೇತರ ಅಥವಾ ಕಾಂಗ್ರೆಸ್‌ನಿಂದ ಸ್ಪರ್ಧಿಸುವರೇ, ಜೆಡಿಎಸ್‌ನಿಂದ ಅಭ್ಯರ್ಥಿ ಯಾರು, ಕಾಂಗ್ರೆಸ್ ಯಾರನ್ನು ಕಣಕ್ಕಿಳಿಸಲಿದೆ ಎಂಬ ಕುತೂಹಲ ಮನೆ ಮಾಡಿದೆ.

ಹೊಳೆ–ಹೊಂಡಗಳಾದ ರಸ್ತೆಗಳು; ಜನ–ವಾಹನ ಸಂಚಾರ ಅಸ್ತವ್ಯಸ್ತ

ಅಂತಿಮ ಸಂಸ್ಕಾರಕ್ಕೂ ಸಂಕಷ್ಟ



ಚಾಮುಂಡಿಬೆಟ್ಟ ತಪ್ಪಲಿನ ಚಿತಾಗಾರದಲ್ಲೂ ಮಳೆಯಿಂದ ಸಂಕಷ್ಟ ಎದುರಾಗಿತ್ತು. ಇಲ್ಲಿನ ಕಟ್ಟಿಗೆಯಿಂದ ಸುಡುವ ಸ್ಮಶಾನ ಸಂಪೂರ್ಣ ಜಲಾವೃತವಾಗಿತ್ತು. ಮಂಡಿಯುದ್ದ ನೀರು ನಿಂತಿದ್ದರಿಂದ ಕಟ್ಟೆ ಬಳಿಗೆ ಹೋಗುವುದಕ್ಕೂ ಸಾಧ್ಯವಾಗದಂತಹ ಪರಿಸ್ಥಿತಿ ನಿರ್ಮಾಣವಾಗಿತ್ತು. ಅಂತ್ಯ ಸಂಸ್ಕಾರಕ್ಕೆಂದು ಬಂದವರು ತಮ್ಮವರ ಅಗಲಿಕೆ ನೋವಿನ ಜೊತೆಗೆ ಮತ್ತೊಂದು ರೀತಿಯ ಸಂಕಟ ಅನುಭವಿಸಿದರು. ನೆಮ್ಮದಿಯಾಗಿ ಅಂತಿಮ ಸಂಸ್ಕಾರ ನಡೆಸುವುದಕ್ಕೂ ಸಾಧ್ಯವಾಗುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ಇಲ್ಲಿ ಮಳೆ ನೀರಿನ ಹರಿವಿಗೆ ಸೂಕ್ತ ವ್ಯವಸ್ಥೆ ಇಲ್ಲದ ಕಾರಣದಿಂದ ಜೋರು ಮಳೆ ಬಂದಾಗಲೆಲ್ಲಾ ಇದೇ ರೀತಿಯ ದುಸ್ಥಿತಿ ನಿರ್ಮಾಣವಾಗುತ್ತದೆ. ಆದರೆ ಸಂಬಂಧಪಟ್ಟವರು ಪರಿಹಾರ ಕ್ರಮ ಕೈಗೊಳ್ಳದೆ ನಿರ್ಲಕ್ಷಿಸಿದ್ದಾರೆ ಎಂದು ಜನ ಆರೋಪಿಸಿದ್ದಾರೆ.

ಮರದ ಕೊಂಬೆ ಬಿದ್ದು ಕಾರು ಜಖಂ



ಮೈಸೂರು:ಭಾನುವಾರ ರಾತ್ರಿ ಭಾರೀ ಗಾಳಿಯೊಂದಿಗೆ ಮಳೆ ಸುರಿದ ಪರಿಣಾಮ ಮೈಸೂರಿನ ಕೆ.ಜಿ.ಕೊಪ್ಪಲಿನಲ್ಲಿ ಮರವೊಂದು ಉರುಳಿ ಬಿದ್ದಿದೆ. ಈ ಸ್ಥಳದಲ್ಲಿ ನಿಲುಗಡೆ ಮಾಡಿದ್ದ ಮಾರುತಿ ಕಾರಿನ(ಕೆಎ–09, ಎನ್–3257) ಮೇಲೆ ಕೊಂಬೆ ಬಿದ್ದು, ಕಾರಿಗೆ ಹಾನಿಯಾಗಿದೆ. ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ.

ಇನ್ನಿತರ ವಸ್ತುಗಳ ಮೇಲೆ ಪದಾರ್ಥಗಳನ್ನಿಟ್ಟುಕೊಂಡು ಮಾರಾಟ ಮಾಡಿದರು. ಗ್ರಾಹಕರು ನೀರಿನಲ್ಲೇ ಹಾಯ್ದು ತಮಗೆ ವ್ಯಾಪಾರ ಮಾಡಬೇಕಾದ ದುಃಸ್ಥಿತಿ ನಿರ್ಮಾಣವಾಗಿತ್ತು. ಮಹಾತ್ಮಗಾಂಧಿ ರಸ್ತೆ ಮಾರುಕಟ್ಟೆಯಲ್ಲೂ ಭಾರೀ ಅದ್ವಾನವಾಗಿತ್ತು. ರಸ್ತೆ ಬದಿ ವ್ಯಾಪಾರಿಗಳು ಪ್ಲಾಸ್ಟಿಕ್ ಮುಚ್ಚಿದ್ದ ಸೊಪ್ಪು–ತರಕಾರಿ ಮಳೆ ನೀರಿನ ಪಾಲಾದವು. ಒಟ್ಟಾರೆ ಅರ್ಧ ಗಂಟೆ ಸುರಿದ ಮಳೆಯಿಂದ ವ್ಯಾಪಾರಿಗಳಿಗೆ ಭಾರೀ ಹೊಡೆತ ಬಿದ್ದಿತು.

ವೃತ್ತ–ರಸ್ತೆಗಳು ಜಲಮಯ: ಅಬ್ಬರದ ಮಳೆಯಿಂದಾಗಿ ರಸ್ತೆಗಳೆಲ್ಲಾ ಜಲಮಯವಾಗಿದ್ದವು. ಎರಡೂ ಬದಿಯಲ್ಲಿ ಕಾಲುವೆಯಂತೆ ನೀರು ಹರಿಯುತ್ತಿತ್ತು. ತಗ್ಗು ಪ್ರದೇಶದಲ್ಲಿ ನೀರು ತುಂಬಿ ರಸ್ತೆ ಸಂಚಾರಕ್ಕೆ ತೀವ್ರ ಅಡ್ಡಿಯುಂಟಾಗಿತ್ತು. ಹಾಗೆಯೇ ಅಗ್ರಹಾರ ವೃತ್ತಕ್ಕೆ ವಾಣಿವಿಲಾಸ ರಸ್ತೆ, ತ್ಯಾಗರಾಜ ರಸ್ತೆ ಹಾಗೂ ನೂರೊಂದು ಗಣಪತಿ ದೇವಸ್ಥಾನದ ಕಡೆಯಿಂದ ನೀರು ಹಡಿದು ಬರುವುದರಿಂದ ಇಡೀ ವೃತ್ತ ಜಲಾವೃತವಾಗಿತ್ತು. ದೊಡ್ಡ ಗಡಿಯಾರ ವೃತ್ತದ ಬಳಿಯೂ ಹೊಳೆಯಂತೆ ನೀರು ಹರಿಯುತ್ತಿತ್ತು. ಖಾಸಗಿ ಬಸ್ ನಿಲ್ದಾಣದ ಬಳಿ ಶೇಷಾದ್ರಿ ಅಯ್ಯರ್ ರಸ್ತೆಯಲ್ಲೂ ಅಪಾರ ಪ್ರಮಾಣದ ನೀರು ನಿಂತಿತ್ತು. ಧನ್ವಂತ್ರಿ ರಸ್ತೆ ಪೆಟ್ರೋಲ್ ಬಂಕ್ ಬಳಿಯೂ ರಸ್ತೆಯನ್ನು ನೀರು ಆವರಿಸಿತ್ತು. ಸಯ್ಯಾಜಿರಾವ್ ರಸ್ತೆ, ದೇವರಾಜ ಅರಸು ರಸ್ತೆ ಕಡೆಯಿಂದ ಹರಿದು ಬಂದ ಭಾರೀ ಪ್ರಮಾಣದ ನೀರು ಕೆ.ಆರ್.ವೃತ್ತವನ್ನು ಆವರಿಸಿತ್ತು.

ಕೆಆರ್‌ಎಸ್ ರಸ್ತೆಯೂ ಅಧ್ವಾನ: ಕೆಆರ್‌ಎಸ್ ರಸ್ತೆ ಗೋಕುಲ್ ಥಿಯೇಟರ್ ಬಳಿಯ ತಗ್ಗಿನಲ್ಲೂ ಭಾರೀ ಪ್ರಮಾಣದ ನೀರು ಹರಿಯುತ್ತಿದ್ದ ಕಾರಣ ವಾಹನ ಸಂಚಾರ ಅಸ್ತವ್ಯಸ್ತವಾಗಿತ್ತು. ವಾಹನಗಳು ಸಾಲುಗಟ್ಟಿ ನಿಂತಿದ್ದರಿಂದ ಟ್ರಾಫಿಕ್ ಜಾಮ್ ಉಂಟಾಗಿತ್ತು.

ಮಹಾರಾಣಿ ಕಾಲೇಜಿನೆದುರು ಚರಂಡಿ ಭರ್ತಿ



ನಗರದ ವಾಲ್ಮೀಕಿ ರಸ್ತೆಯಲ್ಲಿ ಮಹಾರಾಣಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ಮುಂಭಾಗ ಹೊಳೆ ನಿರ್ಮಾಣವಾಗಿತ್ತು. ಪರಿಣಾಮ ವಾಹನ ಸಂಚಾರ ಅಸ್ತವ್ಯಸ್ತವಾಗಿತ್ತು. ಎರಡು ಅಡಿಗೂ ಹೆಚ್ಚು ನೀರು ನಿಂತಿದ್ದರಿಂದ ದ್ವಿಚಕ್ರ ವಾಹನ ಸವಾರರು ಹರಸಾಹಸ ಪಡುವಂತಾಗಿತ್ತು. ಕೆಲವು ಬೈಕ್ ಹಾಗೂ ಸ್ಕೂಟರ್‌ಗಳು ನೀರಿನ ಮಧ್ಯೆಯೇ ಆಫ್ ಆಗಿದ್ದರಿಂದ ಸವಾರರು ತೊಂದರೆ ಅನುಭವಿಸಿದರು. ಕಾರು ಇನ್ನಿತರ ದೊಡ್ಡ ವಾಹನಗಳು ನೀರಿನಲ್ಲೇ ಹಾದು ಹೋದಾಗ ಅಲೆಗಳು ಬಡಿದು ದ್ವಿಚಕ್ರ ವಾಹನ ಸವಾರರು ಆಯತಪ್ಪುತ್ತಿದ್ದರು. ಮಳೆಯಾಗುವ ವೇಳೆ ಫುಟ್‌ಪಾತ್ ಅನ್ನೂ ನೀರು ಆವರಿಸಿತ್ತು. ಕಾಲೇಜು ಕಾಂಪೌಂಡ್ ಬಳಿಯ ಮಳೆ ನೀರು ಚರಂಡಿ ಸಂಪೂರ್ಣವಾಗಿ ಮುಚ್ಚಿಹೋಗಿದೆ. ಪ್ಲಾಸ್ಟಿಕ್ ಚೀಲ ಇನ್ನಿತರ ತ್ಯಾಜ್ಯ ಚರಂಡಿ ತುಂಬಿಕೊಂಡಿವೆ. ಒಂದು ಹನಿಯೂ ಚರಂಡಿಯಲ್ಲಿ ಹರಿಯುವುದಿಲ್ಲ. ಅಲ್ಲದೆ ರಸ್ತೆಯ ಮತ್ತೊಂದು ಬದಿಯಲ್ಲೂ ನೀರಿನ ಹರಿವಿಗೆ ಸೂಕ್ತ ವ್ಯವಸ್ಥೆ ಇಲ್ಲದ ಕಾರಣ ಈ ರೀತಿ ಅಧ್ವಾನ ಉಂಟಾಗಿತ್ತು.

ಜಯದೇವ ಆಸ್ಪತ್ರೆ, ಜಿಲ್ಲಾಸ್ಪತ್ರೆ, ಟ್ರಾಮಾ ಕೇರ್ ಸೆಂಟರ್‌ಗೆ ಸಾಗುತ್ತಿದ್ದ ಆಂಬುಲೆನ್ಸ್‌ಗಳೂ ವಾಹನ ದಟ್ಟಣೆಯಲ್ಲಿ ಸಿಲುಕಿಕೊಂಡಿದ್ದವು. ವಿವಿ ಪುರಂ ಸಂಚಾರ ಠಾಣೆ ಪೊಲೀಸರು ಸಂಚಾರ ದಟ್ಟಣೆ ನಿರ್ವಹಣೆ ಮಾಡಲು ಹರಸಾಹಸಪಟ್ಟರು. ನಗರ ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿದರು. ಬಹುತೇಕ ರಸ್ತೆಗಳ ತಗ್ಗು ಪ್ರದೇಶದಲ್ಲೂ ಇದೇ ಪರಿಸ್ಥಿತಿ ನಿರ್ಮಾಣವಾಗಿತ್ತು. ಮಳೆ ನಿಂತ ನಂತರ ಕೆರೆಯಂತಿದ್ದ ನೀರು ನಿಧಾನವಾಗಿ ಕಡಿಮೆ ಆಯಿತು.

ಮನೆಗಳಿಗೂ ನೀರು: ಮೇದರ್‌ಬ್ಲಾಕ್, ಸುಣ್ಣದಕೇರಿ, ಉದಯಗಿರಿ, ಗೌಸಿಯಾನಗರ, ಸಾತಗಳ್ಳಿ ಸೇರಿದಂತೆ ಹಲವೆಡೆ ತಗ್ಗು ಪ್ರದೇಶದಲ್ಲಿರುವ ಮನೆಗಳಿಗೆ ನೀರು ನುಗ್ಗಿದ್ದರಿಂದ ನಿವಾಸಿಗಳು ಕಂಗಾಲಾದರು. ಮಳೆ ನೀರಿನಿಂದ ಗೃಹೋಪಯೋಗಿ ವಸ್ತುಗಳಿಗೆ ಹಾನಿಯಾಯಿತು. ಪಾತ್ರೆಗಳ ಮೂಲಕ ನೀರು ಹೊರಹಾಕಲು ಹರಸಾಹಸಪಟ್ಟರು. ಇನ್ನೂ ಅರ್ಧ ಗಂಟೆ ರಭಸವಾದ ಮಳೆ ಮುಂದುವರೆದಿದ್ದರೆ ಭಾರೀ ನಷ್ಟವಾಗುತ್ತಿತ್ತು.

ಅಧಿಕಾರಿಗಳ ವಿರುದ್ಧ ಜನಾಕ್ರೋಶ: ಸುಣ್ಣದಕೇರಿಯ ಸುಮಾರು 40 ಕ್ಕೂ ಹೆಚ್ಚು ಮನೆಗಳಿಗೆ ಚರಂಡಿ ನೀರು ನುಗ್ಗಿದ್ದು, ಇದಕ್ಕೆ ಅಧಿಕಾರಿಗಳ ನಿರ್ಲಕ್ಷವೇ ಕಾರಣ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕಿರಿದಾದ ರಸ್ತೆಯಲ್ಲಿ ಸಮರ್ಪಕವಾಗಿ ಒಳಚರಂಡಿ ಪೈಪ್‌ಲೇನ್ ಮಾಡಿಲ್ಲ. ಈ ಬಗ್ಗೆ ಅಧಿಕಾರಿಗಳಿಗೆ ಮಾಹಿತಿ ನೀಡಿದರೂ ಯಾವುದೇ ಕ್ರಮ ಕೈಗೊಂಡಿಲ್ಲ.

ಭಾರೀ ಮಳೆ ಸಾಧ್ಯತೆ

ತಗ್ಗು ಪ್ರದೇಶಗಳಿಗೆ ನೀರು ನುಗ್ಗುವುದು ಸೇರಿದಂತೆ ಏನೇ ತೊಂದರೆ ಆದರೂ ತಕ್ಷಣ ಅದನ್ನು ಪರಿಹಾರ ಮಾಡಲು ಮೈಸೂರು ನಗರ ಪಾಲಿಕೆ ಹಾಗೂ ಜಿಲ್ಲಾಡಳಿತ ಸನ್ನದ್ಧವಾಗಬೇಕಿದೆ. ಆದರೆ ಯುದ್ಧ ಕಾಲೇ ಶಸ್ತ್ರಾಭ್ಯಾಸ ಎಂಬಂತೆ ಅನಾಹುತವಾದಾಗ ಜಿಲ್ಲಾಡಳಿತ ಟಾಸ್ಕ್‌ಫೋರ್ಸ್ ರಚನೆ ಮಾಡಿದರೆ ಏನು ಪ್ರಯೋಜನವಾಗುವುದಿಲ್ಲ.

ಜಿಲ್ಲೆಯಲ್ಲಿ ಈ ವರ್ಷ ಸಾವಿರ ಮಿ.ಮೀ. ಮಳೆ ಸಾಧ್ಯತೆ: ಮೈಸೂರು ಜಿಲ್ಲೆಯಲ್ಲಿ ವಾರ್ಷಿಕ 725 ಮಿ.ಮೀ. ವಾಡಿಕೆ ಮಳೆ ಇದೆ. ಆದರೆ ಈವರೆಗೆ 843 ಮಿ.ಮೀ. ಮಳೆಯಾಗಿದ್ದು, ಶೇ.16 ರಷ್ಟು ಅಧಿಕ ಮಳೆಯಾಗಿದೆ. ಹಾಗಾಗಿ ಈ ಬಾರಿ ಸಾವಿರ ಮಿ.ಮೀ. ಗಡಿ ದಾಟುವ ಸಾಧ್ಯತೆ ಇದೆ. ಚಾಮರಾಜನಗರ ಜಿಲ್ಲೆಯಲ್ಲಿ 636 ಮಿ.ಮೀ. ವಾಡಿಕೆ ಮಳೆಯಿದ್ದು, ಈವರೆಗೆ 704 ಮಿ.ಮೀ. ಮಳೆಯಾಗಿದೆ. ಅಂದರೆ ಶೇ.11 ರಷ್ಟು ಹೆಚ್ಚು ಮಳೆಯಾಗಿದೆ. ಮಂಡ್ಯ ಜಿಲ್ಲೆಯಲ್ಲಿ 595 ಮಿ.ಮೀ. ವಾಡಿಕೆ ಮಳೆಯಿದ್ದು, ಈವರೆಗೆ 710 ಮಿ.ಮೀ. ಮಳೆಯಾಗಿದ್ದು, ಶೇ.19ರಷ್ಟು ಹೆಚ್ಚಾಗಿದೆ.

ಮೈಸೂರಲ್ಲಿ ಪೊಲೀಸ್ ಹುತಾತ್ಮರ ದಿನ ಆಚರಣೆ





ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ರವೀಂದ್ರ ಹೆಗಡೆ, ಹುತಾತ್ಮರ ಸ್ಮಾರಕಕ್ಕೆ ರೀತ್ ಅರ್ಪಿಸಿದರು. ಬಲಚಿತ್ರದಲ್ಲಿ ವಾಲಿ ಫೈರಿಂಗ್, ಹುತಾತ್ಮರಿಗೆ ಮೌನ ಗೌರವಾರ್ಪಣೆ ಮಾಡಲಾಯಿತು.

ಮೈಸೂರು, ಅ.21(ಆರ್‌ಕೆ)– ಮೈಸೂರಲ್ಲಿ ಸೋಮವಾರ ಪೊಲೀಸ್ ಹುತಾತ್ಮರ ದಿನವನ್ನು ಆಚರಿಸಲಾಯಿತು.

ದಕ್ಷಿಣ ವಲಯ ಡಿಐಜಿಪಿ, ಮೈಸೂರು ನಗರ ಮತ್ತು ಜಿಲ್ಲಾ ಪೊಲೀಸ್, ಕರ್ನಾಟಕ ಪೊಲೀಸ್ ಅಕಾಡೆಮಿ (ಕೆಪಿಎ), ಕೆಎಸ್‌ಆರ್‌ಪಿ ಮತ್ತು ಕೆಎಆರ್‌ಪಿ ಘಟಕಗಳ ಸಂಯುಕ್ತಾಶ್ರಯದಲ್ಲಿ ಮೈಸೂರಿನ ಎಸ್‌ಪಿ ಕಚೇರಿ ಸರ್ಕಲ್‌ನಲ್ಲಿರುವ ಪೊಲೀಸ್ ಹುತಾತ್ಮರ ಸ್ಮಾರಕ ಉದ್ಯಾನವನದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ರವೀಂದ್ರ ಹೆಗಡೆ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಪರೇಡ್ ವಂದನೆ ಸ್ವೀಕರಿಸಿದರು.

ಈ ಸಂದರ್ಭ ಪೊಲೀಸ್ ಅಧಿಕಾರಿಗಳು, ಸಿಬ್ಬಂದಿಗಳನ್ನುದ್ದೇಶಿಸಿ ಮಾತನಾಡಿದ ಅವರು, ಪೊಲೀಸ್ ವ್ಯವಸ್ಥೆ ಇಲ್ಲದಿದ್ದರೆ, ಸಮಾಜದಲ್ಲಿ ಕಾನೂನು–ಸುವ್ಯವಸ್ಥೆ ಹೇಗಿರುತ್ತದೆ ಎಂಬುದನ್ನು ಊಹಿಸುವುದೂ ಅಸಾಧ್ಯ. 150 ಕೋಟಿ ಜನಸಂಖ್ಯೆ ಇರುವ ನಮ್ಮ ದೇಶದಲ್ಲಿ 1 ಲಕ್ಷ ಮಂದಿಗೆ ಕೇವಲ 145 ಪೊಲೀಸರು ಕರ್ತವ್ಯ ನಿರ್ವಹಿಸುತ್ತಿದ್ದಾರೆ ಎಂದರು.

ಅಪರಾಧ ಕೃತ್ಯ, ಕೆಟ್ಟ ಯೋಚನೆ, ವರ್ತನೆ ಮಾಡುವವರನ್ನು ನಿಯಂತ್ರಿಸಲು ಪೊಲೀಸ್ ವ್ಯವಸ್ಥೆ ಅತ್ಯವಶ್ಯಕವಾಗಿದ್ದು, ಅಂತಹ ಕೆಲಸ ನಿರ್ವಹಿಸಲು ಪೊಲೀಸರ ಸಂಖ್ಯೆ ಹೆಚ್ಚಿಸಬೇಕು, ಜನಸಾಮಾನ್ಯರು ಪೊಲೀಸರಿಗೆ, ನಮ್ಮ ಕಾನೂನುಗಳಿಗೆ ಹೆಚ್ಚು ಗೌರವ ಕೊಡುವಂತಾಗಬೇಕು ಎಂದ ನ್ಯಾಯಾಧೀಶರು, ಸಂವಿಧಾನದ ಹಕ್ಕುಗಳನ್ನು ಪ್ರತಿಪಾದಿಸುವಂತೆ ಪೊಲೀಸರು ಸಹ ತಮ್ಮ ಹಕ್ಕುಗಳನ್ನು ಪಡೆಯಲು ಅರ್ಹರಿರುತ್ತಾರೆ. ಅವರಿಗೂ ವಿವಿಧ ಸೌಲಭ್ಯಗಳನ್ನು ಒದಗಿಸುವುದೂ ಅವಶ್ಯ ಎಂದರು.

ಈ ಒಂದು ವರ್ಷದಲ್ಲಿ ದೇಶಾದ್ಯಂತ 216 ಮಂದಿ ಪೊಲೀಸರು ಕರ್ತವ್ಯದಲ್ಲಿದ್ದಾಗ ಸಾವನ್ನಪ್ಪಿರುವುದರಿಂದ ಅವರನ್ನು ಸಂಸ್ಮರಣೆಗಾಗಿ ಪೊಲೀಸ್ ಹುತಾತ್ಮರ ದಿನವನ್ನು ಆಚರಿಸಲಾಗುತ್ತಿದೆ. ದೇಶ, ನಾಡಿಗಾಗಿ ಸೇವೆ ಸಲ್ಲಿಸಿದ ಪೊಲೀಸರ ರಕ್ಷಣೆಗಾಗಿ ಸೌಲಭ್ಯ ಒದಗಿಸುವುದು ಸೂಕ್ತ ಎಂದೂ ರವೀಂದ್ರ ಹೆಗಡೆ ನುಡಿದರು.

ದಕ್ಷಿಣ ವಲಯ ಡಿಐಜಿ ಡಾ.ಬೋರಲಿಂಗಯ್ಯ, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ, ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಎಸ್‌ಪಿ ಎನ್.ವಿಷ್ಣುವರ್ಧನ್, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ.ಗಾಯತ್ರಿ, ಡಿಸಿಪಿಗಳಾದ ಎಂ.ಮುತ್ತುರಾಜ್, ಎಸ್.ಜಾಹ್ನವಿ, ಪೊಲೀಸ್ ಅಧಿಕಾರಿಗಳು, ಮಾಧ್ಯಮ ಪ್ರತಿನಿಧಿಗಳು, ನಾಗರಿಕರು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಪೊಲೀಸ್ ಹುತಾತ್ಮರ ಸ್ಮಾರಕಕ್ಕೆ ರೀತ್ ಸಮರ್ಪಿಸಿ, ಗೌರವ ವಂದನೆ ಸಲ್ಲಿಸಿದರು.

ಕೆಎಸ್‌ಆರ್‌ಪಿ ಅಸಿಸ್ಟೆಂಟ್ ಕಮಾಂಡೆಂಟ್ ಮಹದೇವಸ್ವಾಮಿ ಪರೇಡ್ ಕಮಾಂಡೆಂಟ್ ನೇತೃತ್ವ ವಹಿಸಿದ್ದರು. ಈ ವೇಳೆ ವಾಲಿ ಫೈರಿಂಗ್, ಹುತಾತ್ಮರಿಗೆ ಮೌನ ಗೌರವಾರ್ಪಣೆ ಮಾಡಲಾಯಿತು. ಎಸ್‌ಪಿ ಎನ್.ವಿಷ್ಣುವರ್ಧನ್ ಅವರು 216 ಮಂದಿ ಹುತಾತ್ಮ ಪೊಲೀಸರ ನಾಮವಾಚನ ಮಾಡಿದರು. ಸಬ್‌ಇನ್ಸ್‌ಪೆಕ್ಟರ್ ಸುನಿಲ್ ಮಿರ್ಲೆ ಹಾಗೂ ಕೆಪಿಎ ಹೆಡ್‌ಕಾನ್‌ಸ್ಟೇಬಲ್ ನಂದಿನಿ ಕಾರ್ಯಕ್ರಮ ನಿರೂಪಿಸಿದರು.

ಪೊಲೀಸ್ ಹುತಾತ್ಮರ ದಿನಾಚರಣೆ ಹಿನ್ನೆಲೆ

21–10–1959ರಂದು ಭಾರತ ಮತ್ತು ಚೀನಾದ ಗಡಿ ಪ್ರದೇಶದಲ್ಲಿರುವ ಲಡಾಖ್ ಪ್ರದೇಶದ ಅಕ್ಸಾಯ್ ಎಂಬ ಸ್ಥಳದಲ್ಲಿ ಸಿಆರ್‌ಪಿಎಫ್ ಪಡೆಯ ಡಿಎಸ್‌ಪಿ ಕರಣ್ ಸಿಂಗ್ ಮತ್ತು ಅವರ ಸಿಬ್ಬಂದಿ ಗಸ್ತು ಕಾರ್ಯದಲ್ಲಿರುವಾಗ ಚೈನಾ ಪಡೆ ಇವರ ಮೇಲೆ ಅತ್ಯಾಧುನಿಕ ಶಸ್ತ್ರಾಸ್ತ್ರಗಳಿಂದ ದಾಳಿ ನಡೆಸಿದರು. ಎದೆಗುಂದದೆ ಕೊನೆಯ ರಕ್ತದ ಹನಿ ಇರುವವರೆಗೆ ಕೇವಲ ರೈಫಲ್‌ನಿಂದ ನಮ್ಮ ಸೈನಿಕರು ಅತ್ಯುತ್ತಮ ಸಾಹಸದ ಹೋರಾಟ ನಡೆಸುತ್ತಾ, ಕೊನೆಗೆ 10 ಮಂದಿ ಜವಾನರು ಮೃತರಾಗಿ, 9 ಮಂದಿ ಗಾಯಗೊಂಡರು ಮತ್ತು ಸೆರೆಯಾದರು. ಈ ಪಡೆ ತೋರಿದ ಧೈರ್ಯ ಮತ್ತು ಸಾಹಸ ಇಡೀ ರಾಷ್ಟ್ರವನ್ನು ಶೋಕದ ಕಡಲಲ್ಲಿ ಮುಳುಗಿಸಿತು. ಈ ದಿನದ ನೆನಪಿಗಾಗಿ ಒಂದು ಸ್ಮಾರಕವನ್ನು ಈ ಸ್ಥಳದಲ್ಲಿ ಸಮುದ್ರ ಮಟ್ಟದಿಂದ ಸುಮಾರು 16,000 ಅಡಿ ಎತ್ತರದ ಬಂಜರು ಹಾಗೂ ಅತೀ ಶೀತಲ ಪ್ರದೇಶದಲ್ಲಿ ಭಾರತ ಸರ್ಕಾರವು ನಿರ್ಮಿಸಿತು. ಈ ನೆನಪಿಗಾಗಿ ಪ್ರತಿ ವರ್ಷ ಪೊಲೀಸ್ ಸೇವೆಯಲ್ಲಿದ್ದಾಗ ನಿಧನರಾದ ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿಗೆ ರಾಷ್ಟ್ರವ್ಯಾಪ್ತಿ 'ಹುತಾತ್ಮರ ದಿನ'ವನ್ನು ಅಕ್ಟೋಬರ್ 21ರಂದು ಆಚರಿಸಲಾಗುತ್ತಿದೆ. ಒಂದು ಮಧ್ಯಂತರ ವರ್ಷದ ಅವಧಿಯಲ್ಲಿ ಮೃತರಾಗುವ ಎಲ್ಲಾ ಹೆಸರುಗಳನ್ನು ಅಕ್ಟೋಬರ್ 21ರಂದು ಸಹ ಸ್ಮರಿಸಲಾಗುವುದು. ಪ್ರತಿ ಪೊಲೀಸ್ ಘಟಕದಲ್ಲೂ ಈ ದಿನವನ್ನು ಹುತಾತ್ಮರ ದಿನವನ್ನಾಗಿ ಆಚರಿಸುತ್ತಿರುವಂತೆ ಈ ಘಟಕದಲ್ಲೂ ಶ್ರದ್ಧಾಂಜಲಿ ಕಾರ್ಯಕ್ರಮವಾಗಿ ಈ ದಿನವನ್ನು ಆಚರಿಸಲಾಗುತ್ತಿದೆ.

545 ಪಿಎಸ್‌ಐಗಳ ತಾತ್ಕಾಲಿಕ ಪಟ್ಟಿ ಪ್ರಕಟ

ಬೆಂಗಳೂರು, ಅ.21–ರಾಜ್ಯ ಪೊಲೀಸ್ ಇಲಾಖೆಯಲ್ಲಿ 545 ಪೊಲೀಸ್ ಸಬ್ ಇನ್ಸ್‌ಪೆಕ್ಟರ್‌ಗಳ ತಾತ್ಕಾಲಿಕ ಪಟ್ಟಿಯನ್ನು ರಾಜ್ಯ ಗೃಹ ಇಲಾಖೆ ಸೋಮವಾರ ಪ್ರಕಟಿಸಿದೆ.

ದೊಡ್ಡ ಅಕ್ರಮ ನಡೆದ ಬಳಿಕ 545 ಪಿಎಸ್‌ಐ ಹುದ್ದೆಗಳಿಗೆ ಮರುಪರೀಕ್ಷೆ ನಡೆಸಲಾಗಿತ್ತು. ಇದರಲ್ಲಿ 545 ಪಿಎಸ್‌ಐ ಹುದ್ದೆಗಳ ತಾತ್ಕಾಲಿಕ ನೇಮಕಾತಿ ಪಟ್ಟಿಯನ್ನು ಸರ್ಕಾರ ಸೋಮವಾರ ಬಿಡುಗಡೆ ಮಾಡಿದೆ. ಈ ಮೂಲಕ ಆರೋಪ ಮಾಡುತ್ತಿದ್ದ ವಿಪಕ್ಷಗಳಿಗೆ ತಿರುಗೇಟು ನೀಡಿದೆ. ಬಸವರಾಜ್ ಬೊಮ್ಮಾಯಿ ಸಿಎಂ ಆಗಿದ್ದ ಅವಧಿಯಲ್ಲಿ ರಾಜ್ಯದಲ್ಲಿ 545 ಪಿಎಸ್‌ಐ ಹುದ್ದೆಗಳಿಗೆ ನಡೆದಿದ್ದ ನೇಮಕಾತಿ ಪರೀಕ್ಷೆಯಲ್ಲಿ ಆದ ಅಕ್ರಮ ಸಂಚಲನ ಸೃಷ್ಟಿಸಿತ್ತು ಇದಾದ ಬಳಿಕ ಹೈಕೋರ್ಟ್ ನೀಡಿದ್ದ ಸೂಚನೆಯ ಅನ್ವಯ ರಾಜ್ಯ ಸರ್ಕಾರ ಮರು ಪರೀಕ್ಷೆ ನಡೆಸಿತ್ತು. ಆದರೆ ಫಲಿತಾಂಶ ಹೊರಬಿದ್ದಿತ್ತೇ ಹೊರತು ಆಯ್ಕೆ ಪಟ್ಟಿ ಪ್ರಕಟಿಸಿರಲಿಲ್ಲ. ಇದು ವಿಪಕ್ಷಗಳ ಕೆಂಗಣ್ಣಿಗೆ ಗುರಿಯಾಗಿತ್ತು. ಇದೀಗ ರಾಜ್ಯ ಸರ್ಕಾರ ಅ.21ರಂದು ಪಿಎಸ್‌ಐ ನೇರ ನೇಮಕಾತಿಗಳ 01.01.2023ರ ಸುತ್ತೋಲೆಯ ಅನ್ವಯ ಆಯ್ಕೆ ಪಟ್ಟಿ ತಯಾರಿಸಿ ಪ್ರಕಟಗೊಳಿಸಿದೆ.

ಆಯ್ಕೆಯನ್ನು ಪ್ರಕಟಿಸುವ ಸಂದರ್ಭದಲ್ಲಿ ಈ ಆಯ್ಕೆ ಪಟ್ಟಿಯು ಉಚ್ಚ ನ್ಯಾಯಾಲಯವು ರಿಟ್ ಪಿಟಿಷನ್ 20:16343/20240 ಅಂತಿಮ ತೀರ್ಪಿಗೊಳಪಟ್ಟಿದೆ. ಅಲ್ಲದೇ ಈ ಆಯ್ಕೆ ಪಟ್ಟಿಯ ವೃಂದ ಬದಲಾವಣೆ, ಮೀಸಲಾತಿ ಪ್ರಕಾರ ಬದಲಾವಣೆ, ಅರ್ಹತಾ ಸ್ಥಾನ ಮತ್ತು ಘಟಕಗಳ ಬದಲಾವಣೆ ಆಗುವ ಸಾಧ್ಯತೆಗಳಿರುವ ಷರತ್ತುಗಳನ್ನು ವಿಧಿಸುತ್ತದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

06.06.2020ರ ಸುತ್ತೋಲೆ ಅನ್ವಯ ಆಯ್ಕೆ ಪಟ್ಟಿಯಿಂದ ಹೊರಗುಳಿಯುವ 40 ಕಲ್ಯಾಣ ಕರ್ನಾಟಕ ವೃಂದದ ಅಭ್ಯರ್ಥಿಗಳಿಗನುಗುಣವಾಗಿ 40 ಹುದ್ದೆಗಳನ್ನು ಕಲ್ಯಾಣ ಕರ್ನಾಟಕ ವೃಂದದಲ್ಲಿ ಕಾಯ್ದಿರಿಸಿ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿದೆ.

ಮಳೆಯಿಂದ ಅಪಾರ ಹಾನಿ: ಕೂಡಲೇ 5 ಸಾವಿರ ಕೋಟಿ ಬಿಡುಗಡೆಗೆ ಬಿಜೆಪಿ ಆಗ್ರಹ



ಬೆಂಗಳೂರು: ರಾಜ್ಯದಲ್ಲಿ ಪ್ರವಾಹದಿಂದ ಅಪಾರ ಹಾನಿ ಉಂಟಾಗಿದ್ದು, ರಾಜ್ಯ ಸರ್ಕಾರ ಕೂಡಲೇ ಸಭೆ ಕರೆದು 5,000 ಕೋಟಿ ರೂ. ಬಿಡುಗಡೆ ಮಾಡಲಿ. ಜೊತೆಗೆ ಬೆಂಗಳೂರಿನಲ್ಲಿ ಪರಿಹಾರ ಕಾರ್ಯಾಚರಣೆಗೆ 1,000 ಕೋಟಿ ರೂ. ಬಿಡುಗಡೆ ಮಾಡಲಿ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ್ ಆಗ್ರಹಿಸಿದರು.

ಬೆಂಗಳೂರಿನ ಸಿಲ್ಕ್ ಬೋರ್ಡ್ ವೃತ್ತದ ಬಳಿ ಮಳೆ ಹಾನಿ ಪರಿಶೀಲನೆ ನಡೆಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯ ಸರ್ಕಾರದಲ್ಲಿ ಹಣದ ಕೊರತೆ ಇದೆ. ಮಲೆನಾಡಿನಲ್ಲಿ ಕಾಫಿ ಉದುರುತ್ತಿದೆ, ಭತ್ತದ ಬೆಳೆ ನೀರಿನಲ್ಲಿ ಮುಳುಗಿದೆ, ಈರುಳ್ಳಿ ಕೊಳೆಯುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಕುಂಭಕರ್ಣನಂತೆ ನಿದ್ದೆ ಮಾಡುವುದನ್ನು ಬಿಟ್ಟು ಎಲ್ಲ ಹಿರಿಯ ಅಧಿಕಾರಿಗಳ ಸಭೆ ನಡೆಸಿ ಯಾವ ರೀತಿ ಅನಾಹುತವಾಗಿದೆ ಎಂದು ಪರಿಶೀಲಿಸಬೇಕು. ಕಳೆದೊಂದು ತಿಂಗಳಿಂದ ಪ್ರವಾಹ ಸಂಬಂಧದ ಸಭೆಯೇ ನಡೆದಿಲ್ಲ. ಸರ್ಕಾರ ಕೂಡಲೇ ಸಭೆ ಕರೆದು ಕನಿಷ್ಠ 5,000 ಕೋಟಿ ರೂ. ಬಿಡುಗಡೆ ಮಾಡಬೇಕು. ಬೆಂಗಳೂರಿಗೆ ವಿಶೇಷವಾಗಿ 1,000 ಕೋಟಿ ರೂ. ಬಿಡುಗಡೆ ಮಾಡಲಿ ಎಂದು ಆಗ್ರಹಿಸಿದರು.

16 ತಿಂಗಳ ಕಾಂಗ್ರೆಸ್ ಸರ್ಕಾರದ ಪಾಪದ ಫಲವನ್ನು ಬೆಂಗಳೂರಿನ ಜನರು ಅನುಭವಿಸಬೇಕಾಗಿದೆ. ರಾಜ ಕಾಲುವೆಯ ಹೂಳು ತೆಗೆದು ಸ್ವಚ್ಛ ಮಾಡುವ ಕೆಲಸವನ್ನು ಸರ್ಕಾರ ಮಾಡಿಲ್ಲ. ಇದರಿಂದಾಗಿ ತೇಲುತ್ತಿರುವ ಬೆಂಗಳೂರು ಎಂಬ ಅಪಖ್ಯಾತಿ ನಗರಕ್ಕೆ ಬಂದಿದೆ. ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಹಾಗೂ ಸಚಿವರು ಒಂದೂವರೆ ವರ್ಷದಲ್ಲಿ ಎಷ್ಟು ಒತ್ತುವರಿ ತೆರವು ಮಾಡಿದ್ದಾರೆ, ಎಷ್ಟು ಹೂಳು ತೆಗೆಸಿದ್ದಾರೆ ಎಂದು ತಿಳಿಸಲಿ. ಬಿಜೆಪಿ ಸರ್ಕಾರವಿದ್ದಾಗ ಮಳೆಗಾಲಕ್ಕೆ ಮುನ್ನ ಎಲ್ಲ ಸಿದ್ಧತೆ ಮಾಡಲಾಗುತ್ತಿತ್ತು ಎಂದರು.

ಚನ್ನಪಟ್ಟಣ ಉಪಚುನಾವಣೆಗೆ ಇನ್ನೆರಡು ದಿನದಲ್ಲಿ ಎನ್‌ಡಿಎ ಅಭ್ಯರ್ಥಿ ಘೋಷಣೆಯಾಗಲಿದೆ. ಇದು ಜೆಡಿಎಸ್ ಕ್ಷೇತ್ರ ಆಗಿರುವುದರಿಂದ ಅವರ ಸಲಹೆ ಪ್ರಮುಖ ಎಂದು ಅಶೋಕ್ ಹೇಳಿದರು.

ಎಲ್‌ಐಸಿ ಪ್ರತಿನಿಧಿಗಳಿಂದ ಪ್ರತಿಭಟನೆ



ಭಾರತೀಯ ಜೀವ ವಿಮಾ ನಿಗಮದ ಪ್ರತಿನಿಧಿಗಳಿಗೆ ಕಮಿಷನ್ ಕಡಿಮೆ ಮಾಡಿರುವುದರ ವಿರುದ್ಧ ಶಾರದಾದೇವಿನಗರ ಶಾಖೆಯ ಪ್ರತಿನಿಧಿಗಳು ಸೋಮವಾರ ಪ್ರತಿಭಟನೆ ನಡೆಸಿದರು. ಸಂಘದ ಅಧ್ಯಕ್ಷ ಕೆ.ತುಕರಾಂ, ಕಾರ್ಯದರ್ಶಿ ಸೋಮಶೇಖರ್, ತುಳಸಿರಾಂ, ಛಾಯ ಇನ್ನಿತರರಿದ್ದರು.

ಮುಕ್ತ, ಸ್ವತಂತ್ರವಾಗಿ ಸೇವೆ ನಿರ್ವಹಿಸಲು ಪೊಲೀಸರಿಗೆ ಸಹಕಾರ

●ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ●ಹುತಾತ್ಮ ಪೊಲೀಸರಿಗೆ ನಮನ

ಬೆಂಗಳೂರು, ಅ.21(ಕೆಎಂಶಿ)– ಪೊಲೀಸರು ಮುಕ್ತ ಹಾಗೂ ಸ್ವತಂತ್ರವಾಗಿ ಕೆಲಸ ನಿರ್ವಹಿಸಲು ಸರ್ಕಾರ ಸಂಪೂರ್ಣ ಸಹಕಾರ ನೀಡಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ತಿಳಿಸಿದ್ದಾರೆ.

ಪೊಲೀಸ್ ಸಂಸ್ಮರಣಾ ದಿನದಂದು ಹುತಾತ್ಮ ಪೊಲೀಸ್ ಸಿಬ್ಬಂದಿಗೆ ನಮನ ಸಲ್ಲಿಸಿ ಮಾತನಾಡಿದ ಅವರು, ಜನರ ಪ್ರಾಣ, ಆಸ್ತಿ ರಕ್ಷಿಸುವ ಪೊಲೀಸ್ ಸಿಬ್ಬಂದಿ ಹಿತ ರಕ್ಷಿಸಲು ಸರ್ಕಾರ ಬದ್ಧವಾಗಿದೆ, ಇದಕ್ಕಾಗಿ 2025ರಲ್ಲಿ 10 ಸಾವಿರ ಪೊಲೀಸ್ ವಸತಿಗಳ ನಿರ್ಮಾಣಕ್ಕೆ 2,000 ಕೋಟಿ ರೂ. ನೀಡಿದ್ದೇವೆ, 200 ಕೋಟಿ ರೂ. ವೆಚ್ಚದಲ್ಲಿ 100 ಹೊಸ ಠಾಣೆಗಳ ನಿರ್ಮಾಣ ಆಗುತ್ತಿವೆ, ಪೊಲೀಸ್ ಮಕ್ಕಳಿಗಾಗಿ 7 ಪ್ರಮುಖ ಸ್ಥಳಗಳಲ್ಲಿ 7 ಪಬ್ಲಿಕ್ ಶಾಲೆಗಳನ್ನು ತೆರೆಯಲಾಗುತ್ತದೆ ಎಂದು ಘೋಷಿಸಿದರು.

ಕಳೆದ ಒಂದು ವರ್ಷದಲ್ಲಿ ದೇಶದಲ್ಲಿ 216 ಮಂದಿ, ರಾಜ್ಯದಲ್ಲಿ 12 ಮಂದಿ ಪೊಲೀಸ್ ಸಿಬ್ಬಂದಿ ಮತ್ತು ಅಧಿಕಾರಿಗಳು ಕರ್ತವ್ಯದಲಿದ್ದಾಗ ಹುತಾತ್ಮರಾಗಿದ್ದಾರೆ. ಇವರ ಆತ್ಮಕ್ಕೆ ನಾನು ಶಾಂತಿ ಕೋರುತ್ತಲೇ ಕುಟುಂಬದವರ ದುಃಖದಲ್ಲಿ ಭಾಗಿ ಆಗುತ್ತೇನೆ. ದೇಶ ಹಾಗೂ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ, ಜನರ ಪ್ರಾಣ, ಮಾನ ಕಾಪಾಡುವಾಗ ಇವರು ಹುತಾತ್ಮರಾಗಿದ್ದಾರೆ. ದೇಶದ ಆಂತರಿಕ ಭದ್ರತೆ ಕಾಪಾಡುವಲ್ಲಿ, ದೌರ್ಜನ್ಯ, ಅಪರಾಧ, ದುರಂತಗಳನ್ನು ತಡೆಯುವುದರಲ್ಲಿ ಪ್ರಮುಖ ಪಾತ್ರ ವಹಿಸುವುದು ನಮ್ಮ ಪೊಲೀಸ್ ಸಿಬ್ಬಂದಿ, ಇವರ ಜವಾಬ್ದಾರಿ ಬಹಳ ದೊಡ್ಡದು. ಅಸಮಾನತೆ ಇರುವ ಸಮಾಜದಲ್ಲಿ ಶೋಷಣೆ, ದೌರ್ಜನ್ಯಗಳೂ ಇರುತ್ತವೆ. ಈ ಶೋಷಿತರ ಸಂವಿಧಾನಬದ್ಧ ಹಕ್ಕುಗಳನ್ನು ಕಾಪಾಡಲು ಮುಖ್ಯ ಪಾತ್ರ ವಹಿಸುವವರು ನಮ್ಮ ಪೊಲೀಸರು. ಇವರ ಜೊತೆಗೆ ಸರ್ಕಾರ ಇರುತ್ತದೆ. ಅಪರಾಧ ತಡೆಯಲು 6,000 ಸಿಸಿ ಕ್ಯಾಮರಾಗಳು, 260ಕ್ಕೂ ಹೆಚ್ಚು ಹೆದ್ದಾರಿ ಗಸ್ತು ವಾಹನಗಳು ಕರ್ತವ್ಯ ನಿರ್ವಹಿಸುತ್ತಿವೆ ಎಂದು ಹೇಳಿದರು.



ಪೊಲೀಸ್ ಸಂಸ್ಮರಣಾ ದಿನದಂದು ಹುತಾತ್ಮ ಪೊಲೀಸ್ ಸಿಬ್ಬಂದಿಗೆ ಸೋಮವಾರ ಬೆಂಗಳೂರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನಮನ ಸಲ್ಲಿಸಿದರು.

ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ಮೈಸೂರು: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಮೆಟ್ರಿಕ್ ನಂತರದ ಪಿಯುಸಿ ಮತ್ತು ಸಮಾನಂತರ, ಸಾಮಾನ್ಯ ಪದವಿ ಮತ್ತು ಸಂಯೋಜಿತ ಉಭಯ ಪದವಿ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಪ್ರವರ್ಗ–1ರ ಅಲೆಮಾರಿ/ಅರೆ ಅಲೆಮಾರಿ ವಿದ್ಯಾರ್ಥಿಗಳಿಂದ 2024–25ನೇ ಸಾಲಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ, ಶುಲ್ಕ ವಿನಾಯಿತಿ, ವಿದ್ಯಾಸಿರಿ (ಊಟ ಮತ್ತು ವಸತಿ ಸಹಾಯ ಯೋಜನೆ) ಹಾಗೂ ನರ್ಸಿಂಗ್ ವಿದ್ಯಾರ್ಥಿಗಳಿಗೆ ಶಿಷ್ಯವೇತನ ಸೌಲಭ್ಯಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಕೆ ಅವಧಿಯನ್ನು ಅ.31ರವರೆಗೆ ವಿಸ್ತರಿಸಲಾಗಿದೆ. ಅರ್ಹ ಅಭ್ಯರ್ಥಿಗಳು ಅರ್ಜಿಯನ್ನು https://ssp.postmatric.karnataka.gov.in/ ಮೂಲಕ ಸಲ್ಲಿಸಬೇಕು. ಮಾಹಿತಿಗೆ ಸಹಾಯವಾಣಿ ಸಂ: 8050770005 ಅನ್ನು ಸಂಪರ್ಕಿಸಬಹುದು.

ಕಾಶ್ಮೀರ ಎಂದಿಗೂ ಪಾಕಿಸ್ತಾನ ಆಗಲ್ಲ: ಉಗ್ರ ದಾಳಿಗಳನ್ನು ನಿಲ್ಲಿಸಿ

ಪಾಕ್‌ಗೆ ಫಾರೂಕ್ ಅಬ್ದುಲ್ಲಾ ಎಚ್ಚರಿಕೆ!



ಶ್ರೀನಗರ: ಏಳು ದಶಕಗಳಿಂದ ಆಗದ್ದೂ ಈಗ ಆಗುತ್ತಾ... ಕಾಶ್ಮೀರ ಎಂದಿಗೂ ಪಾಕಿಸ್ತಾನ ಆಗಲ್ಲ. ಉಗ್ರ ದಾಳಿಗಳನ್ನು ನಿಲ್ಲಿಸಿ, ನಮ್ಮನ್ನು ನೆಮ್ಮದಿಯಿಂದ ಜೀವನ ನಡೆಸಲು ಬಿಡಿ ಎಂದು ಜಮ್ಮು ಮತ್ತು ಕಾಶ್ಮೀರದ ಮಾಜಿ ಮುಖ್ಯಮಂತ್ರಿ ಡಾ. ಫಾರೂಕ್ ಅಬ್ದುಲ್ಲಾ ಹೇಳಿದ್ದಾರೆ.

ಗಂದರ್‌ಬಾಲ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಯಲ್ಲಿ 7 ಮಂದಿ ವಲಸೆ ಕಾರ್ಮಿಕರು ಮೃತಪಟ್ಟ ಬೆನ್ನಲ್ಲೇ ಫಾರೂಕ್ ಅಬ್ದುಲ್ಲಾ ಭಾವನಾತ್ಮಕ ಹೇಳಿಕೆ ನೀಡಿದ್ದಾರೆ. ಕಾಶ್ಮೀರ, ಪಾಕಿಸ್ತಾನವಾಗುವುದಿಲ್ಲ. ಹೊರಗಿನ ಕಾರ್ಮಿಕರನ್ನು ಉಲ್ಲೇಖಿಸಿದ ಅವರು, ಕಾಶ್ಮೀರದಲ್ಲಿ ಹಣ ಸಂಪಾದಿಸಲು ಮತ್ತು ಕುಟುಂಬಕ್ಕೆ ಕಳುಹಿಸಲು ಬರುವ ಹೊರಗಿನ ಕಾರ್ಮಿಕರು ನಿನ್ನೆ ಈ ಕ್ರೂರರಿಂದ ಹುತಾತ್ಮರಾಗಿದ್ದಾರೆ ಎಂದು ಹೇಳಿದ್ದು ಇದರಲ್ಲಿ ಜನರ ಸೇವೆ ಮಾಡುವ ನಮ್ಮ ವೈದ್ಯರೂ ಸೇರಿದ್ದಾರೆ. ಇದನ್ನು ನಾವು ಹಲವು ವರ್ಷಗಳಿಂದ ನೋಡುತ್ತಿದ್ದೇವೆ ಮತ್ತು ಭಾರತದೊಂದಿಗಿನ ಸಂಬಂಧ ಸುಧಾರಿಸಬೇಕಾದರೆ ಇದೆಲ್ಲವೂ ನಿಲ್ಲಬೇಕು ಎಂದು ಪಾಕಿಸ್ತಾನದ ಆಡಳಿತಗಾರರಿಗೆ ಹೇಳಲು ಬಯಸುತ್ತೇವೆ ಎಂದು ಡಾ.ಫಾರೂಕ್ ಅಬ್ದುಲ್ಲಾ ಹೇಳಿದರು.

ಶಾಂತಿ ಮತ್ತು ಘನತೆಯಿಂದ ಬದುಕಲು ಮನವಿ ಮಾಡಿದ ಅವರು ಭಯೋತ್ಪಾದನೆ ವಿರುದ್ಧ ಏಕತೆಯ ಅಗತ್ಯವನ್ನು ಒತ್ತಿ ಹೇಳಿದರು. ಈ ಭಯೋತ್ಪಾದಕ ದಾಳಿಯೂ ಕಾಶ್ಮೀರದಲ್ಲಿ ದುಃಖ ಮತ್ತು ಕಳವಳದ ಅಲೆಯನ್ನು ಎಬ್ಬಿಸಿದೆ. ಅಲ್ಲದೆ ಸ್ಥಳೀಯ ನಾಯಕರು ಭಯೋತ್ಪಾದನೆ ವಿರುದ್ಧ ಮಾತನಾಡುವಂತಾಗಿದೆ.

ಬಿಜೆಪಿ ಎಸ್.ಟಿ. ಮೋರ್ಚಾ ವತಿಯಿಂದ ವಾಲ್ಮೀಕಿ ಜಯಂತಿ



ಬಿಜೆಪಿ ಚಾಮುಂಡೇಶ್ವರಿ ಕ್ಷೇತ್ರದ ಎಸ್.ಟಿ. ಮೋರ್ಚಾ ವತಿಯಿಂದ ಮಹರ್ಷಿ ವಾಲ್ಮೀಕಿ ಜಯಂತಿ ಆಚರಿಸಲಾಯಿತು.

ಮೈಸೂರು, ಅ.21(ಎಂಕೆ)– ಮೈಸೂರಿನ ಶಾರದಾದೇವಿನಗರದ ನವೋವನದಲ್ಲಿ ಬಿಜೆಪಿ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಎಸ್.ಟಿ. ಮೋರ್ಚಾ ವತಿಯಿಂದ ಮಹರ್ಷಿ ವಾಲ್ಮೀಕಿ ಜಯಂತಿ ಆಚರಿಸಲಾಯಿತು.

ಈ ವೇಳೆ ಮಹರ್ಷಿ ವಾಲ್ಮೀಕಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ, ಸಿಹಿ ವಿತರಿಸಲಾಯಿತು. ನಂತರ ಎಸ್.ಟಿ. ಮೋರ್ಚಾ ಅಧ್ಯಕ್ಷ ಟಿ.ರಾಜ ನಾಯಕ್ ಮಾತನಾಡಿ, ಶ್ರೀ ರಾಮನ ಆದರ್ಶಗಳನ್ನು ತಿಳಿಸಿದ ಮಹರ್ಷಿ ವಾಲ್ಮೀಕಿಯವರನ್ನು ನಿತ್ಯವೂ ಸ್ಮರಿಸಬೇಕು. ರಾಮಾಯಣ ಜಗತ್ತಿನ ಮಹಾನ್ ಕಾವ್ಯವಾಗಿದೆ ಎಂದು ತಿಳಿಸಿದರು. ಚಾಮುಂಡೇಶ್ವರಿ ಕ್ಷೇತ್ರದ ನಗರ ಮಂಡಲದ ಅಧ್ಯಕ್ಷ ರಾಕೇಶ್ ಭಟ್, ಪ್ರಧಾನ ಕಾರ್ಯದರ್ಶಿ ಆರ್.ಸೋಮಶೇಖರ್, ಎಸ್.ಟಿ.ಮೋರ್ಚಾ ಕಾರ್ಯದರ್ಶಿಗಳಾದ ಪ್ರಜ್ವಲ್, ಸ್ವಾಮಿ, ನಗರ ಉಪಾಧ್ಯಕ್ಷ ತ್ಯಾಗರಾಜ್, ಎಸ್.ಸಿ. ಮೋರ್ಚಾ ನಗರ ಉಪಾಧ್ಯಕ್ಷ ಪ್ರತಾಪ್, ಮುಖಂಡರಾದ ಹೆಚ್.ಜಿ.ರಾಜಮಣಿ, ಬಿ.ಸಿ.ಶಶಿಕಾಂತ್, ಶಿವಕುಮಾರ್, ವಿನುತಾ, ತುಳಸಿ, ಚಂದ್ರಶೇಖರ ಸ್ವಾಮಿ, ಚಂದನ್ ಗೌಡ, ರಾಘವೇಂದ್ರ ರವಿ ಉತ್ತಪ್ಪ ಮಹೇಶ್, ಮಹಾದೇವ, ರಾಧಾ ಮುತಾಲಿಕ್, ಗೋಪಾಲ್ ಮತ್ತಿತರರಿದ್ದರು.

ಡಿ.4ಕ್ಕೆ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷರು, ಜಿಲ್ಲಾ ಖಜಾಂಚಿ, ರಾಜ್ಯ ಪರಿಷತ್ ಸದಸ್ಯರ ಚುನಾವಣೆ

ಮೈಸೂರು,ಅ.21– ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ 2024–29ನೇ ಅವಧಿಯ ಜಿಲ್ಲಾ ಶಾಖೆಗಳ ಜಿಲ್ಲಾಧ್ಯಕ್ಷರು, ಜಿಲ್ಲಾ ಖಜಾಂಚಿ ಮತ್ತು ರಾಜ್ಯ ಪರಿಷತ್ ಸದಸ್ಯರ ಚುನಾವಣಾ ವೇಳಾಪಟ್ಟಿಯನ್ನು ಬಿಡುಗಡೆ ಮಾಡಲಾಗಿದೆ. ಅರ್ಹ ಅಭ್ಯರ್ಥಿಗಳು ನ.19ರಂದು ಬೆಳಗ್ಗೆ 11ರಿಂದ ನ.27ರ ಸಂಜೆ 5ರವರೆಗೆ ನಾಮಪತ್ರ ಸಲ್ಲಿಸಬಹುದಾಗಿದ್ದು, ನ.28ರಂದು ನಾಮಪತ್ರಗಳನ್ನು ಪರಿಶೀಲಿಸಿ, ಅರ್ಹ ಅಭ್ಯರ್ಥಿಗಳ ಹೆಸರನ್ನು ಪ್ರಕಟಣೆ ಮಾಡಲಾಗುತ್ತದೆ. ಉಮೇದುವಾರಿಕೆ ಹಿಂಪಡೆಯಲು ನ.29ರ ಸಂಜೆ 4.30 ಕೊನೇ ದಿನ. ನ.29ರ ಸಂಜೆ 5.30ರ ನಂತರ ಚುನಾವಣಾ ಕಣದಲ್ಲಿ ಉಳಿದ ಅಭ್ಯರ್ಥಿಗಳ ಹೆಸರನ್ನು ಪ್ರಕಟಿಸಲಾಗುವುದು. ಡಿ.4ರಂದು ಬೆಳಗ್ಗೆ 9ರಿಂದ 4ರವರೆಗೆ ಚುನಾವಣೆ ನಡೆಯಲಿದ್ದು, ಮತದಾನ ಮುಕ್ತಾಯವಾದ ನಂತರ ಮತಗಳ ಎಣಿಕೆ ಕಾರ್ಯ ನಡೆಯಲಿದೆ. ಮತ ಎಣಿಕೆ ಮುಗಿದ ನಂತರ ಫಲಿತಾಂಶ ಪ್ರಕಟಗೊಳಿಸಲಾಗುವುದು ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಹೆಚ್.ಸಂದೇಶ್‌ಗೆ ಪಿಹೆಚ್.ಡಿ



ಮೈಸೂರು: ಡಾ.ಕೆ.ಯಶೋಧ ನಂಜಪ್ಪ ಅವರ ಮಾರ್ಗದರ್ಶನದಲ್ಲಿ ಹೆಚ್.ಸಂದೇಶ್ ಅವರು 'ಲಿಟರರಿ ಸೆನ್ಸಿಬಿಲಿಟಿ ಇನ್ ದಿ ರೈಟಿಂಗ್ಸ್ ಆಫ್ ಡಾ.ಬಿ.ಆರ್.ಅಂಬೇಡ್ಕರ್' ಕುರಿತ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ದೇಶ – ವಿದೇಶ

ಲೆಬನಾನ್ ಬಿಟ್ಟು ಇರಾನ್‌ಗೆ ಪರಾರಿಯಾದ ಹಿಜ್ಬುಲ್ಲಾ ಲೀಡರ್ ನಯೀಮ್ ಕಾಸ್ಸೆಮ್




ಇರಾನ್: ಹಮಾಸ್, ಹಿಜ್ಬುಲ್ಲಾ ಮತ್ತು ಇತರ ಇರಾನಿನ ಪ್ರಾಕ್ಸಿಗಳನ್ನು ನಾಶಮಾಡುವ ತನ್ನ ಪ್ರತಿಜ್ಞೆಯತ್ತ ಅಚಲವಾಗಿ ಮುನ್ನುಗ್ಗುತ್ತಿರುವ ಇಸ್ರೇಲ್, ಎರಡೂ ಗುಂಪುಗಳ ಹಲವಾರು ಪ್ರಮುಖ ನಾಯಕರನ್ನು ಹೊಡೆದು ಹಾಕಿದೆ. ಇದರ ನಡುವೆ ಬದುಕುಳಿದಿರುವ ಹಿಜ್ಬುಲ್ಲಾ ಸಂಘಟನೆಯ ಕೆಲವೇ ಕೆಲವು ನಾಯಕರಲ್ಲಿ ಹಿಜ್ಬುಲ್ಲಾದ ಎರಡನೇ ಕಮಾಂಡರ್ ಆಗಿದ್ದ ಡೆಪ್ಯೂಟಿ ಸೆಕ್ರೆಟರಿ ಜನರಲ್ ನಯಿಮ್ ಕಾಸ್ಸೆಮ್ ಕೂಡ ಒಬ್ಬ. ಆದರೆ ನಯಿಮ್ ಕಾಸ್ಸೆಮ್ ಜೀವ ಭಯದಿಂದ ಇರಾನ್‌ಗೆ ಪಲಾಯನ ಮಾಡಿದ್ದಾನೆ ಎನ್ನಲಾಗಿದೆ. ಹಿಜ್ಬುಲ್ಲಾ ಉಗ್ರ ಸಂಘಟನೆಯ ವಿರುದ್ಧ ಇಸ್ರೇಲ್ ತನ್ನ ಸೇನಾ ಕಾರ್ಯಾಚರಣೆ ತೀವ್ರಗೊಳಿಸುತ್ತಿರುವುದರ ಪರಿಣಾಮವಾಗಿ ಅದರ ಮುಖ್ಯಸ್ಥ ಹಸನ್ ನಸ್ರಲ್ಲಾ ಸೇರಿದಂತೆ ಸಂಘಟನೆಯೊಳಗಿನ ಹಲವಾರು ಪ್ರಮುಖ ನಾಯಕರ ಸಾವಿಗೆ ಕಾರಣವಾಯಿತು. ಇದೇ ಕಾರಣದಿಂದ ಯುದ್ಧಪೀಡಿತ ಲೆಬನಾನ್, ಸಿರಿಯಾ ದೇಶಗಳಿಗೆ ಇರಾನ್‌ನ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಭೇಟಿ ನೀಡಿದ ವೇಳೆಯೇ ನಯಿಮ್ ಕಾಸ್ಸೆಮ್ ಸಚಿವರೊಡನೆ ಅ.5ರಂದು ಬೈರುತ್‌ನಿಂದ ಹೊರಟು ಇರಾನಿನ ಟೆಹ್ರಾನ್‌ಗೆ ತಲುಪಿದ್ದಾನೆ ಎಂದು ದುಬೈ ಮೂಲದ ಎರೆಮ್ ನ್ಯೂಸ್ ವರದಿ ಮಾಡಿದೆ.

ರೋಹಿಣಿ ಸ್ಫೋಟ: ಟೆಲಿಗ್ರಾಮ್‌ನಿಂದ 'ಜಸ್ಟೀಸ್ ಲೀಗ್ ಇಂಡಿಯಾ'ದ ಮಾಹಿತಿ ಕೇಳಿದ ದೆಹಲಿ ಪೊಲೀಸರು



ನವದೆಹಲಿ: ಖಲಿಸ್ತಾನ್ ಜಿಂದಾಬಾದ್ ಎಂಬ ವಾಟರ್ ಮಾರ್ಕ್‌ನೊಂದಿಗೆ ರೋಹಿಣಿ ಸ್ಫೋಟದ ವಿಡಿಯೋವನ್ನು ಪೋಸ್ಟ್ ಮಾಡಿದ 'ಜಸ್ಟೀಸ್ ಲೀಗ್ ಇಂಡಿಯಾ' ಹೆಸರಿನ ಚಾನೆಲ್ ಬಗ್ಗೆ ಮತ್ತು ಬೆದರಿಕೆ ಸಂದೇಶವನ್ನು ಪೋಸ್ಟ್ ಮಾಡಿದ ಬಗ್ಗೆ ಮಾಹಿತಿ ಕೋರಿ ದೆಹಲಿ ಪೊಲೀಸರು ಸೋಮವಾರ ಸಾಮಾಜಿಕ ಮಾಧ್ಯಮ ಟೆಲಿಗ್ರಾಮ್‌ಗೆ ಪತ್ರ ಬರೆದಿದ್ದಾರೆ. ಭಾನುವಾರ ಬೆಳಗ್ಗೆ ದೆಹಲಿಯ ರೋಹಿಣಿ ಪ್ರದೇಶದ ಸಿಆರ್‌ಪಿಎಫ್ ಶಾಲೆಯ ಬಳಿ ನಿಗೂಢ ಸ್ಫೋಟ ಸಂಭವಿಸಿದ್ದು, ದೆಹಲಿಯಲ್ಲಿ ಭದ್ರತಾ ಆತಂಕವನ್ನು ಉಂಟುಮಾಡಿದೆ. ಕಚ್ಚಾ ಬಾಂಬ್‌ನಿಂದ ಪ್ರಚೋದಿತವಾದ ಈ ಸ್ಫೋಟದಿಂದ ಶಾಲೆಯ ಗೋಡೆ ಮತ್ತು ಸಮೀಪದಲ್ಲಿ ನಿಲ್ಲಿಸಿದ್ದ ಕೆಲವು ಕಾರುಗಳಿಗೆ ಭಾಗಶಃ ಹಾನಿಯಾಗಿದೆ. ಅದೃಷ್ಟವಶಾತ್ ಯಾರಿಗೂ ಗಾಯಗಳಾಗಿಲ್ಲ. ಭಾನುವಾರ ಸಂಜೆ ಟೆಲಿಗ್ರಾಮ್ ಪೋಸ್ಟ್‌ನ ಸ್ಕ್ರೀನ್ ಶಾಟ್ ಕೂಡ ಸಾಮಾಜಿಕ ಮಾಧ್ಯಮ ವೇದಿಕೆಗಳಲ್ಲಿ ಪ್ರಸಾರವಾಯಿತು. ಭಾರತ ಹೇಡಿಗಳ ಸಂಸ್ಥೆ ಮತ್ತು ಅವರ ಯಜಮಾನರು ನಮ್ಮ ಸದಸ್ಯರನ್ನು ಗುರಿಯಾಗಿಸಿ ನಮ್ಮ ಧ್ವನಿಯನ್ನು ಅಡಗಿಸಲು ಹೊಲಸು ಗೂಂಡಾಗಳನ್ನು ನೇಮಿಸಬಹುದು ಎಂದು ಭಾವಿಸಿದರೆ ಅದು ಮೂರ್ಖತನವಾಗುತ್ತದೆ.

ಇರಾನ್ ನಾಯಕ ಖಮೇನಿ ಮುಗಿಸುವುದಾಗಿ ಮೊಸಾದ್ ಘೋಷಣೆ



ಟೆಲ್ ಅವೀವ್: ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಹತ್ಯೆ ಯತ್ನಕ್ಕೆ ತಿರುಗೇಟು ನೀಡಲು ನಮಗೆ ಎಲ್ಲ ಹಕ್ಕಿದೆ. ಪ್ರಧಾನಿ ನಿವಾಸದ ಮೇಲೆ ನಡೆದ ಕ್ಷಿಪಣಿ ದಾಳಿಗೆ ಪ್ರತೀಕಾರವಾಗಿ ಇರಾನ್ ಸರ್ವೋಚ್ಚ ನಾಯಕ ಅಯತೊಲ್ಲಾ ಖಮೇನಿಯನ್ನು ಹೊಡೆದುರುಳಿಸಲು ಕಾನೂನಾತ್ಮಕ ಬೆಂಬಲ ಸಿಕ್ಕಂತಾಗಿದೆ ಎಂದು ಇಸ್ರೇಲ್ ಗುಪ್ತಚರ ಸಂಸ್ಥೆ 'ಮೊಸಾದ್' ಹೇಳಿಕೊಂಡಿದೆ.

ಹಿಜ್ಬುಲ್ಲಾ ಬಂಡುಕೋರ ಪಡೆ ಶನಿವಾರ ನೆತನ್ಯಾಹು ಖಾಸಗಿ ನಿವಾಸದ ಮೇಲೆ ಕ್ಷಿಪಣಿ ದಾಳಿ ನಡೆಸಿತ್ತು. ಇರಾನ್ ಬೆಂಬಲಿತ ಬಂಡುಕೋರ ಪಡೆಯ ಕೃತ್ಯಕ್ಕೆ ತಿರುಗೇಟು ನೀಡಲು ನಮ್ಮ ಪಡೆ ಸಿದ್ಧವಿದೆ. ದಾಳಿಗೆ ಪ್ರಚೋದನೆ ನೀಡಿರುವ ಅಯೊತೊಲ್ಲಾ ಖಮೇನಿಯನ್ನು ಮುಗಿಸಲು ನಮಗೆ ನೈತಿಕ ಬಲ ಸಿಕ್ಕಂತಾಗಿದೆ ಎಂದು ಗುಪ್ತಚರ ಸಂಸ್ಥೆ 'ಮೊಸಾದ್' ತನ್ನ ಅಧಿಕೃತ 'ಎಕ್ಸ್' ಖಾತೆಯಲ್ಲಿ ಬರೆದುಕೊಂಡಿದೆ. ತಮ್ಮ ಖಾಸಗಿ ನಿವಾಸದ ಮೇಲೆ ನಡೆದ ಕ್ಷಿಪಣಿ ದಾಳಿಗೆ ಪ್ರತಿಕ್ರಿಯೆ ನೀಡಿದ್ದ ಬೆಂಜಮಿನ್ ನೆತನ್ಯಾಹು, ಇರಾನ್ ಬೆಂಬಲಿತ ಹಿಜ್ಬುಲ್ಲಾ ಪಡೆ ನನ್ನ ಹತ್ಯೆಗೆ ಯತ್ನ ನಡೆಸುವ ಮೂಲಕ ಘೋರ ತಪ್ಪು ಮಾಡಿದೆ. ಇದರ ಪರಿಣಾಮ ಭೀಕರವಾಗಿರಲಿವೆ ಎಂದು ಎಚ್ಚರಿಸಿದ್ದರು.

ಭಾರಿ ಪ್ರಮಾಣದ ಶಸ್ತ್ರಾಸ್ತ್ರ ಹೊಂದಿದ್ದ ಉಗ್ರನ ಹತ್ಯೆ; ಮದ್ದು, ಗುಂಡು ವಶ




ಶ್ರೀನಗರ: 7 ಮಂದಿಯನ್ನು ಹತ್ಯೆಗೈದ ಉಗ್ರರ ಅಟಾಟೋಪ ಪ್ರಕರಣ ಹಸಿರಾಗಿರುವಂತೆಯೇ ಇತ್ತ ಬಾರಾಮುಲ್ಲಾದಲ್ಲಿ ಭಾರಿ ಪ್ರಮಾಣದ ಶಸ್ತ್ರಾಸ್ತ್ರ ಹೊಂದಿದ್ದ ಉಗ್ರನನ್ನು ಭಾರತೀಯ ಸೇನೆ ಹೊಡೆದುರುಳಿಸಿದೆ. ಜಮ್ಮು–ಕಾಶ್ಮೀರದ ಬಾರಾಮುಲ್ಲಾ ಜಿಲ್ಲೆಯಲ್ಲಿ ನಡೆಸಿದ ಜಂಟಿ ಕಾರ್ಯಾಚರಣೆಯಲ್ಲಿ ಭಾರೀ ಶಸ್ತ್ರಸಜ್ಜಿತ ಭಯೋತ್ಪಾದಕನನ್ನು ಹೊಡೆದುರುಳಿಸಲಾಗಿದ್ದು, ಮದ್ದು, ಗುಂಡು ಸೇರಿದಂತೆ ಅಪಾರ ಪ್ರಮಾಣದ ಶಸ್ತ್ರಾಸ್ತ್ರ ವಶಪಡಿಸಿಕೊಳ್ಳಲಾಗಿದೆ. ಈ ಬಗ್ಗೆ ಮಾಧ್ಯಮಗಳಿಗೆ ಮಾಹಿತಿ ನೀಡಿರುವ ಸೇನೆ, ಭಾರೀ ಶಸ್ತ್ರಾಸ್ತ್ರ ಹೊಂದಿದ್ದ ಒಬ್ಬ ಉಗ್ರನನ್ನು ಹತ್ಯೆ ಮಾಡಲಾಗಿದೆ. ಒಂದು ಎಕೆ ಸರಣಿಯ ರೈಫಲ್, ಎರಡು ಎಕೆ ಸರಣಿಯ ಮ್ಯಾಗಜಿನ್, 57 ಸುತ್ತು ಎಕೆ ಸರಣಿಯ ಗುಂಡು, 2 ಪಿಸ್ತೂಲ್‌ಗಳು, ಮೂರು ಪಿಸ್ತೂಲ್ ಮ್ಯಾಗಜಿನ್ ಸೇರಿದಂತೆ ಯುದ್ಧೋಪಾದಿಯಲ್ಲಿ ಸಂಗ್ರಹಿಸಿಟ್ಟಿದ್ದ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ. ಈ ಮಧ್ಯೆ ಭಾನುವಾರ ಸಂಜೆ ಗಾಂದರಬಲ್ ಜಿಲ್ಲೆಯ ಗಗಂಗೀರ್ ಪ್ರದೇಶದಲ್ಲಿ ನಡೆದ ಭಯೋತ್ಪಾದಕ ದಾಳಿಯಲ್ಲಿ ಕನಿಷ್ಠ 6 ಕಾರ್ಮಿಕರು, ಒಬ್ಬ ವೈದ್ಯ ಸಾವಿಗೀಡಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಾಂವಿಧಾನಿಕ ತಿದ್ದುಪಡಿ ಮಸೂದೆಗೆ ಪಾಕಿಸ್ತಾನದ ಸಂಸತ್ ಅಸ್ತು

ಇಸ್ಲಾಮಾಬಾದ್: ರಾತ್ರಿಯಿಡೀ ಚರ್ಚೆ ಬಳಿಕ ವಿವಾದಿತ ಸಾಂವಿಧಾನಿಕ ತಿದ್ದುಪಡಿ ಮಸೂದೆಗೆ ಪಾಕಿಸ್ತಾನದ ರಾಷ್ಟ್ರೀಯ ಸಂಸತ್ತಿನಲ್ಲಿ ಅಂಗೀಕಾರ ದೊರೆತಿದೆ. ಈ ಮೂಲಕ ಪಾಕಿಸ್ತಾನದ ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿಯ ಅಧಿಕಾರಾವಧಿಯನ್ನು 3 ವರ್ಷಕ್ಕೆ ನಿಗದಿ ಮಾಡಲಾಗಿದೆ. ನ್ಯಾಯಮೂರ್ತಿಗಳ ಅಧಿಕಾರ ಕಡಿತಗೊಳಿಸುವ ಸಂವಿಧಾನದ 26ನೇ ತಿದ್ದುಪಡಿ ಮಸೂದೆಯು ಸ್ವತಂತ್ರ ನ್ಯಾಯಾಂಗ ವ್ಯವಸ್ಥೆಯ ಅಧಿಕಾರಕ್ಕೆ ತಣ್ಣೀರೆರಚುತ್ತದೆ ಎಂದು ವಿಪಕ್ಷಗಳು ದೂರಿದ್ದವು. ಬೆಳಗಿನ ಜಾವ 5 ಗಂಟೆ ಸುಮಾರಿಗೆ 336 ಸದಸ್ಯ ಬಲದ ರಾಷ್ಟ್ರೀಯ ಸಂಸತ್ತಿನಲ್ಲಿ 225 ಮಂದಿ ತಿದ್ದುಪಡಿ ಪರ ಚಲಾಯಿಸಿದರು. ಪಾಕಿಸ್ತಾನ್ ತೆಹ್ರೀಕ್–ಎ–ಇನ್ಸಾಫ್ (ಪಿಟಿಐ) ಮತ್ತು ಸುನ್ನಿ–ಇತ್ತೆಹಾದ್ ಕೌನ್ಸಿಲ್ (ಎಸ್‌ಐಸಿ) ತಿದ್ದುಪಡಿಯನ್ನು ವಿರೋಧಿಸಿದ್ದವು. ಆದರೆ, ಪಿಟಿಐ ಬೆಂಬಲದಲ್ಲಿ ಗೆದ್ದಿದ್ದ ಆರು ಸ್ವತಂತ್ರ ಸದಸ್ಯರು ಮಸೂದೆ ಪರ ಮತ ಚಲಾಯಿಸಿದರು. ತಿದ್ದುಪಡಿಯನ್ನು ಅಂಗೀಕರಿಸಲು ಸರ್ಕಾರಕ್ಕೆ 224 ಮತಗಳ ಅಗತ್ಯವಿತ್ತು. ಭಾನುವಾರ ರಾತ್ರಿ ಸೆನೆಟ್ ಅಗತ್ಯ 3ನೇ ಎರಡರಷ್ಟು ಬಹುಮತದೊಂದಿಗೆ ತಿದ್ದುಪಡಿ ಅನುಮೋದಿಸಿತ್ತು. ಮಸೂದೆ ಪರ 65 ಮತ ಬಿದ್ದರೆ, 4 ಮತಗಳು ಮಾತ್ರ ವಿರುದ್ಧವಾಗಿ ಬಿದ್ದಿದ್ದವು. ಸಂಸತ್ತಿನ ಉಭಯ ಸದನಗಳಲ್ಲೂ ಸಂವಿಧಾನದ (26ನೇ ತಿದ್ದುಪಡಿ) ಕಾಯ್ದೆ 2024 ಅಂಗೀಕಾರವಾಗಿದೆ.

ಹುತಾತ್ಮ ಪೊಲೀಸರಿಗೆ ಗೌರವ ವಂದನೆ



ಮಡಿಕೇರಿ ಜಿಲ್ಲಾ ಪೊಲೀಸ್ ಕವಾಯತು ಮೈದಾನದಲ್ಲಿ ಹುತಾತ್ಮ ಪೊಲೀಸರ ಸ್ಮಾರಕಕ್ಕೆ ಜಿಲ್ಲಾಧಿಕಾರಿ ವೆಂಕಟ ರಾಜಾ ಹೂಗುಚ್ಛ ಸಲ್ಲಿಸಿದರು.

> ಸಮಾಜ ರಕ್ಷಣೆ ಮಾಡುವಲ್ಲಿ ಪೊಲೀಸರ ಪಾತ್ರ ಪ್ರಮುಖವಾಗಿದೆ. ಪೊಲೀಸರು ಸಮಾಜಕ್ಕೆ ನೀಡಿದ ಸಂದೇಶಗಳನ್ನು ಮರೆಯಬಾರದು. ಸಮಾಜದ ಸಮಗ್ರ ಸುರಕ್ಷತೆ ಹಾಗೂ ಭದ್ರತೆಗಾಗಿ ಜೀವದ ಹಂಗು ತೊರೆದು ಕಾರ್ಯನಿರ್ವಹಿಸುವ ಪೊಲೀಸರ ಕರ್ತವ್ಯ ನಿಷ್ಠೆ ಹಾಗೂ ನಿಸ್ವಾರ್ಥ ಸೇವೆಯನ್ನು ಸದಾ ಸ್ಮರಿಸುವಂತಾಗಬೇಕು.
> –ವೆಂಕಟ ರಾಜಾ, ಜಿಲ್ಲಾಧಿಕಾರಿ.

ಮಡಿಕೇರಿ ಅ.21–ದೇಶದಲ್ಲಿ ಶಾಂತಿ, ಕಾನೂನು ಸುವ್ಯವಸ್ಥೆ ಕಾಪಾಡುವುದು ಹಾಗೂ ಆಸ್ತಿ ರಕ್ಷಣೆ ಸಂದರ್ಭದಲ್ಲಿ ಹುತಾತ್ಮರಾದ ಪೊಲೀಸರಿಗೆ ನಗರದ ಜಿಲ್ಲಾ ಪೊಲೀಸ್ ಕವಾಯತು ಮೈದಾನದಲ್ಲಿ ಸೋಮವಾರ ಗೌರವ ವಂದನೆ ಸಲ್ಲಿಸಲಾಯಿತು.

ಪೊಲೀಸ್ ಹುತಾತ್ಮರ ದಿನಾಚರಣೆ ಕಾರ್ಯಕ್ರಮದಲ್ಲಿ ಪೊಲೀಸ್ ಕವಾಯತು ಸಿಬ್ಬಂದಿ ಮೂರು ಸುತ್ತು ರಿವಾಲಿ ಫೈರಿಂಗ್ ನಡೆಸಿದರು. ಇದೇ ವೇಳೆ ಗಣ್ಯರು ಸೇರಿದಂತೆ ಎಲ್ಲರೂ ಗೌರವ ವಂದನೆ ಮೂಲಕ ಶ್ರದ್ಧಾಂಜಲಿ ಸಲ್ಲಿಸಿದರು. ನಂತರ ಎರಡು ನಿಮಿಷ ಮೌನಾಚರಣೆ ಮಾಡಿದರು. ಬಳಿಕ ಸಿದ್ದೇಶ್ ತಂಡದವರು ವಾದ್ಯದೊಂದಿಗೆ ರಾಷ್ಟ್ರಗೀತೆ ನುಡಿಸಿದರು.

ಕೊಡಗು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಮಾತನಾಡಿ, 2023–24ನೇ ಸಾಲಿನಲ್ಲಿ ಕರ್ತವ್ಯ ನಿರ್ವಹಿಸುವ ಸಂದರ್ಭದಲ್ಲಿ ಪ್ರಾಣ ಕಳೆದುಕೊಂಡ ಪೊಲೀಸ್ ಅಧಿಕಾರಿಗಳು ಮತ್ತು ಪೇದೆಗಳ ಹೆಸರು ತಿಳಿಸಿದರು. ಕರ್ನಾಟಕದ ಐವರು ಸೇರಿದಂತೆ ಒಟ್ಟು ದೇಶದಲ್ಲಿ 216 ಮಂದಿ ಹುತಾತ್ಮರಾದ ಪೊಲೀಸರನ್ನು ಸ್ಮರಿಸಿದರು.

ಕಾರ್ಯಕ್ರಮದಲ್ಲಿ ಜಿಪಂ ಸಿಇಓ ಆನಂದ್ ಪ್ರಕಾಶ್ ಮೀನಾ, ಕೊಡಗು ವೃತ್ತ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮನೋಜ್ ಕುಮಾರ್ ತ್ರಿಪಾಠಿ, ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಕೆ.ಎಸ್.ಸುಂದರರಾಜ್, ಉಪವಿಭಾಗಾಧಿಕಾರಿ ವಿನಾಯಕ ನರ್ವಾಡೆ, ಡಿವೈಎಸ್‌ಪಿಗಳ ಪರವಾಗಿ ಮೋಹನ್ ಕುಮಾರ್, ಸಶಸ್ತ್ರ ಮೀಸಲು ಪೊಲೀಸ್ ಪಡೆಯ ಪೊಲೀಸ್ ನಿರೀಕ್ಷಕ ಚೆನ್ನನಾಯಕ, ವೈಯರ್‌ಲೆಸ್ ವಿಭಾಗದ ಇನ್ಸ್‌ಪೆಕ್ಟರ್ ಆನಂದ್, ಮಾಜಿ ಸೈನಿಕರ ಪರವಾಗಿ ಏರ್‌ಮಾರ್ಷಲ್ (ನಿವೃತ್ತ) ಕೆ.ಸಿ.ಕಾರ್ಯಪ್ಪ, ನಿವೃತ್ತ ಡಿವೈಎಸ್‌ಪಿಗಳ ಪರವಾಗಿ ಬಿ.ಎಂ.ಕುಶಾಲಪ್ಪ, ಪೊಲೀಸ್ ನಿರೀಕ್ಷಕರ ಪರವಾಗಿ ಐ.ಪಿ.ಮೇದಪ್ಪ, ಬ್ಯಾಂಡ್ ಮಾಸ್ಟರ್ ಸಿದ್ದೇಶ್, ಉಪ ಅರಣ್ಯ ಸಂರಕ್ಷಣಾಧಿಕಾರಿ ಭಾಸ್ಕರ್, ವಕೀಲರ ಸಂಘದ ಪರವಾಗಿ ನಿರಂಜನ, ಕೊಡವ ಸಮಾಜಗಳ ಪರವಾಗಿ ಮುತ್ತಪ್ಪ, ಗೌಡ ಸಮಾಜಗಳ ಪರವಾಗಿ ಸೂರ್ತಲೆ ಸೋಮಣ್ಣ, ರೋಟರಿಗಳ ಪರವಾಗಿ ಸುಬ್ರಮಣಿ, ಲಯನ್ಸ್ ಪರವಾಗಿ ಅಂಬೆಕಲ್ಲು ನವೀನ್, ಸುದಯ್ ನಾಣಯ್ಯ ಇತರರು ಹುತಾತ್ಮ ಪೊಲೀಸರ ಸ್ಮಾರಕಕ್ಕೆ ಹೂಗುಚ್ಛ ಅರ್ಪಿಸಿ, ನಮನ ಸಲ್ಲಿಸಿದರು. ಪೊಲೀಸ್ ಮುಖ್ಯ ಕಾಬೀಲರಾದ ಎಂ.ಇ.ಫಾರೂಕ್, ಎಂ.ಎಸ್. ಲೋಕೇಶ್ ಇದ್ದರು.

ಮಲಬಾರ್ ಮಲ್ಟಿಸ್ಟೇಟ್ ಆಗ್ರೋ ಕೋ–ಆಪರೇಟಿವ್ ಸೊಸೈಟಿಯಿಂದ ವಂಚನೆ

ವಿವಿಧ ಪೊಲೀಸ್ ಠಾಣೆಯಲ್ಲಿ ದೂರು ದಾಖಲು



ಕುಶಾಲನಗರದ ದಂಡಿನಪೇಟೆಯಲ್ಲಿರುವ ಮಲಬಾರ್ ಮಲ್ಟಿಸ್ಟೇಟ್ ಆಗ್ರೋ ಕೋ–ಆಪರೇಟಿವ್ ಸೊಸೈಟಿ.

ಮಡಿಕೇರಿ: ಗೋಣಿಕೊಪ್ಪ, ವಿರಾಜಪೇಟೆ, ಕುಶಾಲನಗರದಲ್ಲಿ 'ಮಲಬಾರ್ ಮಲ್ಟಿಸ್ಟೇಟ್ ಆಗ್ರೋ ಕೋ–ಆಪರೇಟಿವ್ ಸೊಸೈಟಿ' ಹೆಸರಿನಲ್ಲಿ ಕಚೇರಿ ತೆರೆದು ಸುತ್ತಮುತ್ತಲಿನ ಹಲವು ಗ್ರಾಹಕರಿಂದ ಪಿಗ್ಮಿ ಕಲೆಕ್ಷನ್, ಆರ್‌ಡಿ ಹಾಗೂ ಬಾಂಡ್ ಮುಖಾಂತರ ಹಣ ಹೂಡಿಕೆ ಮಾಡಿಕೊಂಡು ವಂಚಿಸಿ, ತಲೆಮರೆಸಿಕೊಂಡಿರುವ ಕುರಿತು ಗೋಣಿಕೊಪ್ಪ, ವಿರಾಜಪೇಟೆ ನಗರ ಹಾಗೂ ಕುಶಾಲನಗರ ಟೌನ್ ಪೊಲೀಸ್ ಠಾಣೆಗಳಲ್ಲಿ ಪ್ರಕರಣ ದಾಖಲಾಗಿದೆ.

ಪ್ರಕರಣ ಬೆಳಕಿಗೆ: ಕುಶಾಲನಗರ ಟೌನ್ ಪೊಲೀಸ್ ಠಾಣೆ ವ್ಯಾಪ್ತಿಯ ದಂಡಿನಪೇಟೆಯಲ್ಲಿರುವ ಮಲಬಾರ್ ಮಲ್ಟಿಸ್ಟೇಟ್ ಆಗ್ರೋ ಕೋ–ಆಪರೇಟಿವ್ ಸೊಸೈಟಿಯಲ್ಲಿ ಬೈಲುಕುಪ್ಪೆ ನಿವಾಸಿ ಕೆ.ಟಿ.ಚಂದ್ರಹಾಸ 2023ರ ಜೂ.1ರಿಂದ ಪಿಗ್ಮಿ ಕಟ್ಟಲು ಪ್ರಾರಂಭಿಸಿದ್ದರು. 2024ರ ಫೆಬ್ರವರಿ ವರೆಗೆ ಪಿಗ್ಮಿ ಮೊತ್ತ ಒಟ್ಟು 99,500 ರೂ.ಗಳಾಗಿತ್ತು. ಈ ಹಣವನ್ನು ಹಿಂದಿರುಗಿಸದೆ ಮಾರ್ಚ್‌ನಿಂದ ಕಚೇರಿ ಮುಚ್ಚಿದ್ದಾರೆ. ಈ ಹಿನ್ನೆಲೆಯಲ್ಲಿ ಕೆ.ಟಿ.ಚಂದ್ರಹಾಸ ಕುಶಾಲನಗರ ಟೌನ್ ಠಾಣೆಯಲ್ಲಿ ವಂಚನೆ ಹಾಗೂ ತಲೆಮರೆಸಿ ಕೊಂಡಿರುವ ದೂರು ನೀಡಿದ್ದರು.

ಪ್ರಕರಣ ದಾಖಲು: ಮಲಬಾರ್ ಮಲ್ಟಿಸ್ಟೇಟ್ ಆಗ್ರೋ ಕೋ–ಆಪರೇಟಿವ್ ಸೊಸೈಟಿ ಮುಖ್ಯಸ್ಥ ರಾಹುಲ್ ಚಕ್ರಪಾಣಿ ಹಾಗೂ ಸಿಇಓ ಸನ್ನಿ ಅಬ್ರಹಾಂ ಹಾಗೂ ಇತರರು ವಂಚನೆ ಮಾಡಿರುವ ಕುರಿತು ವಿವಿಧ ಸೆಕ್ಷನ್ ಅಡಿಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಆರಂಭಿಸಲಾಗಿದೆ.

ಸಾರ್ವಜನಿಕರು ಮಲಬಾರ್ ಮಲ್ಟಿಸ್ಟೇಟ್ ಆಗ್ರೋ ಕೋ–ಆಪರೇಟಿವ್ ಸೊಸೈಟಿಯಲ್ಲಿ ಹಣ ಹೂಡಿಕೆ ಮಾಡಿ ವಂಚನೆಗೆ ಒಳಗಾಗಿದ್ದಲ್ಲಿ ದಾಖಲಾತಿ ಗಳೊಂದಿಗೆ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸುವಂತೆ ಕೊಡಗು ಜಿಲ್ಲಾ ಪೊಲೀಸ್ ಇಲಾಖೆ ತಿಳಿಸಿದೆ.

ದೇಶದಲ್ಲಿ ಪರ್ಯಾಯ ಪಕ್ಷ ಅಧಿಕಾರಕ್ಕೆ ಬರಬೇಕು



ವಿರಾಜಪೇಟೆಯಲ್ಲಿ ನಡೆದ ಸಿಪಿಐ (ಎಂ) ಜಿಲ್ಲಾ ಸಮಿತಿ ಸಭೆಯಲ್ಲಿ ಡಾ.ದುರ್ಗಾಪ್ರಸಾದ್ ಮಾತನಾಡಿದರು.

ವಿರಾಜಪೇಟೆ, ಅ.21–ರಾಜ್ಯದಲ್ಲಿ ಯಾವುದೇ ರಾಜಕೀಯ ಪಕ್ಷಗಳು ಅಧಿಕಾರಕ್ಕೆ ಬಂದರೂ ಬಡ ಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸುತ್ತಿಲ್ಲ. ಆದ್ದರಿಂದ ದೇಶದಲ್ಲೇ ಮತ್ತೊಂದು ಪರ್ಯಾಯ ಪಕ್ಷವನ್ನು ಅಧಿಕಾರಕ್ಕೆ ತರಬೇಕಾಗಿದೆ ಎಂದು ಸಿಪಿಐ(ಎಂ) ಪಕ್ಷದ ಜಿಲ್ಲಾ ಸಮಿತಿ ಮುಖಂಡ ಡಾ.ದುರ್ಗಾಪ್ರಸಾದ್ ಹೇಳಿದರು.

ಪಟ್ಟಣದ ದೊಡ್ಡಟ್ಟಿ ಚೌಕಿಯಲ್ಲಿರುವ ಕಾರ್ಮಿಕ ಸಂಘದ ಕಚೇರಿ ಸಂಭಾಂಗಣದಲ್ಲಿ ನಡೆದ ತಮಿಳುನಾಡಿನ ಮಧುರೈಯಲ್ಲಿ ನಡೆಯುವ ಪಕ್ಷದ 24ನೇ ಮಹಾ ಅಧಿವೇಶನದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಹಿಂದೆ ಮೂರು ಪಕ್ಷಗಳಿದ್ದವು. ಆದರೆ, ಈಗ ಜೆಡಿಎಸ್ ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡಿದ್ದು, ಈಗ ಎರಡೇ ಪಕ್ಷಗಳಿರುವುದರಿಂದ ಮುಂದಿನ ಚುನಾವಣೆಗೆ ದುಡಿಯುವ ವರ್ಗ ಬಡ ಕಾರ್ಮಿಕರ ಕಮ್ಯುನಿಸ್ಟ್ ಪಕ್ಷವನ್ನು ಜನರು ಅಧಿಕಾರಕ್ಕೆ ತರುವಂತಾಗಬೇಕು ಎಂದರು.

ಪಕ್ಷದ ಜಿಲ್ಲಾ ಸಮಿತಿ ಎ.ಸಿ.ಸಾಬು ಮಾತನಾಡಿ, ಕಾರ್ಮಿಕ ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳನ್ನು ನಿಲ್ಲಿಸಬೇಕು. ಕಾರ್ಮಿಕರ ಮಕ್ಕಳು ಹೆಚ್ಚಾಗಿ ಸರ್ಕಾರಿ ಶಾಲೆಯಲ್ಲೇ ಶಿಕ್ಷಣ ಪಡೆಯುತ್ತಿದ್ದು, ಅವರಿಗೆ ಸರ್ಕಾರದ ಸೌಲಭ್ಯ ಒದಗಿಸಬೇಕು. ಗ್ಯಾರಂಟಿ ಯೋಜನೆಯಿಂದ ಬಡ ಕುಟುಂಬಗಳಿಗೆ ಸಹಕಾರಿಯಾಗಿದೆ ಅನೇಕ ಕಾರ್ಮಿಕರು ಲೈನ್ ಮನೆ ಮತ್ತು ಬಾಡಿಗೆ ಮನೆಯಲ್ಲಿದ್ದಾರೆ. ಅವರಿಗೆ ಸರ್ಕಾರ ಸೂರಿನ ವ್ಯವಸ್ಥೆ ಕಲ್ಪಿಸಬೇಕು. ಇದರ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಸಭೆಯಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೆಚ್.ಪಿ.ರಮೇಶ್, ಜಿಲ್ಲಾ ಸಮಿತಿಯ ಪದ್ಮಿನಿ, ನಗರ ಸಮಿತಿಯ ಹೆಚ್.ಶಿವಪ್ಪ, ಚಾಮಿಯಾಲದ ಹನೀಫ್, ಶಾಜಿ ರಮೇಶ್, ಕೆ.ಎಸ್.ರತೀಶ್, ಹಮೀದ್ ಇದ್ದರು.

ಕಾಡಾನೆಗಳಿಂದ ಭತ್ತ, ತೋಟದ ಬೆಳೆ ನಾಶ

ವಿರಾಜಪೇಟೆ, ಅ.21–ಸಮೀಪದ ಐಮಂಗಲ ಗ್ರಾಮದ ಕುಂಡ್ರಂಡ ಸಿ.ಪೊನ್ನಪ್ಪ ಅವರ ಭತ್ತದ ಗದ್ದೆಗೆ ಹಾಗೂ ತೋಟಕ್ಕೆ ಭಾನುವಾರ ರಾತ್ರಿ ಕಾಡಾನೆಗಳು ದಾಳಿ ನಡೆಸಿ, ಫಸಲನ್ನು ನಾಶಗೊಳಿಸಿವೆ.

ಭತ್ತ, ಅಡಕೆ, ಬಾಳೆ, ಫಸಲಿಗೆ ಬಂದಿದ್ದ ಕಾಫಿ ಗಿಡಗಳನ್ನು ನಾಶಗೊಳಿಸಿವೆ. ಇದರಿಂದ 3 ಲಕ್ಷ ರೂ. ನಷ್ಟ ಸಂಭವಿಸಿದೆ. ಕಳೆದ 15 ದಿನಗಳಿಂದ ಚೆಂಬೆಬೆಳ್ಳೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಐಮಂಗಲ ಗ್ರಾಮದಲ್ಲಿ ಕಾಡಾನೆಗಳು ಬೀಡುಬಿಟ್ಟಿದ್ದು, ಅಲ್ಲಿನ ಭದ್ರಕಾಳಿ ದೇವಸ್ಥಾನ ಮುಖ್ಯದ್ವಾರದ ಕಾಂಪೌಂಡ್ ಮತ್ತು ಗೇಟ್ ಅನ್ನು ಜಖಂಗೊಳಿಸಿವೆ.

ಕಾಡಾನೆಗಳ ಹಾವಳಿಯಿಂದ ಗ್ರಾಮಸ್ಥರು ಭಯಭೀತರಾಗಿದ್ದು, ಅರಣ್ಯ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿ ಕಂಡುಕಾಣದಂತೆ ಮನುಷ್ಯನ ಜೀವಕ್ಕೆ ಬೆಲೆಯೇ ಇಲ್ಲದಂತೆ ವರ್ತಿಸುತ್ತಿದ್ದು, ಅಧಿಕಾರಿಗಳ ವಿರುದ್ಧ ಹೋರಾಟ ನಡೆಸುವುದಾಗಿ ಗ್ರಾಮಸ್ಥರು ಎಚ್ಚರಿಸಿದ್ದಾರೆ.




ಐಮಂಗಲ ಗ್ರಾಮದಲ್ಲಿ ಕಾಡಾನೆಗಳು ಭತ್ತದ ಫಸಲನ್ನು ನಾಶಗೊಳಿಸಿರುವುದು.

ಹಾರಂಗಿ ಜಲಾಶಯಕ್ಕೆ ಬಾಗಿನ ಅರ್ಪಣೆ

ಕುಶಾಲನಗರ: ಕೊಡಗಿನಲ್ಲಿ ಈ ಬಾರಿ ಹೆಚ್ಚಿನ ಮಳೆಯಾಗಿ ಹಾರಂಗಿ ಜಲಾಶಯ ಭರ್ತಿಯಾಗಿರುವ ಹಿನ್ನೆಲೆ ಹಾಗೂ ತುಲಾ ಸಂಕ್ರಮಣ ಜಾತ್ರೆ ಅಂಗವಾಗಿ ಹಾರಂಗಿ ಕಾವೇರಿ ಪ್ರತಿಮೆಗೆ ವಿಶೇಷ ಪೂಜೆ ಸಲ್ಲಿಸಿ ಜಲಾಶಯಕ್ಕೆ ಬಾಗಿನ ಅರ್ಪಿಸಲಾಯಿತು.

ಇದೇ ವೇಳೆ ಮಾತನಾಡಿದ ಶಾಸಕ ಡಾ.ಮಂತರ್‌ಗೌಡ, ಹಾರಂಗಿ ಎಡದಂಡೆ ಮುಖ್ಯ ನಾಲೆ ಸಂಪರ್ಕಿಸುವ 6.87 ಕಿ.ಮೀ.ನಿಂದ 14.75 ಕಿಲೋ ಮೀಟರ್ ವರೆಗಿನ ಕಾಂಕ್ರೀಟ್‌ಗೆ 72 ಕೋಟಿ ರೂ. ಬಿಡುಗಡೆಯಾಗಿದೆ. ಈ ಸಂಬಂಧ ಈಗಾಗಲೇ ಟೆಂಡರ್ ಆಹ್ವಾನಿ ಸಲಾಗಿದ್ದು, ತಾಂತ್ರಿಕ ಬಿಡ್‌ಗೆ ಅನುಮೋದನೆ ದೊರೆತಿದೆ. ಜನವರಿಯಲ್ಲಿ ಕಾಮಗಾರಿಗೆ ಚಾಲನೆ ನೀಡಲಾಗುವುದು ಎಂದರು.

ಹಾರಂಗಿ ಅಚ್ಚುಕಟ್ಟು ಪ್ರದೇಶ ಸಂರಕ್ಷಣೆಗೆ ಎಲ್ಲರೂ ಮುಂದಾಗಬೇಕು. ಪ್ಲಾಸ್ಟಿಕ್ ಬಳಕೆಯನ್ನು ಆದಷ್ಟು ಕಡಿಮೆ ಮಾಡಬೇಕು. ಪರಿಸರ ಸಂರಕ್ಷಣೆ ಮಾಡಿದಲ್ಲಿ ನದಿ ಉಳಿಸಲು ಸಾಧ್ಯ ತಲಕಾವೇರಿ ತುಲಾ ಸಂಕ್ರಮಣ ನಂತರ ಹಾರಂಗಿ ಜಲಾಶಯದ ಕಾವೇರಿ ಮಾತೆಗೆ ಪ್ರತಿವರ್ಷ ವಿಶೇಷ ಪೂಜೆ ಸಲ್ಲಿಸಿಕೊಂಡು ಬರಲಾಗಿದೆ. ಆ ನಿಟ್ಟಿನಲ್ಲಿ ನಾಡಿಗೆ ಒಳಿತಾಗಲಿ ಎಂದು ಬಾಗಿನ ಅರ್ಪಿಸಲಾಗಿದೆ ಎಂದರು. ಶಾಸಕ ಎ.ಮಂಜು, ವಿಧಾನಪರಿಷತ್ ಸದಸ್ಯ ಎಂ.ಪಿ.ಸುಜಾಕುಶಾಲಪ್ಪ, ಮಾಜಿ ಸದಸ್ಯೆ ವೀಣಾ ಅಚ್ಚಯ್ಯ, ಹಾರಂಗಿ ನೀರು ಬಳಕೆದಾರರ ಸಹಕಾರ ಮಹಾಮಂಡಲ ಅಧ್ಯಕ್ಷ ಚೌಡೇಗೌಡ, ಅಧೀಕ್ಷಕ ಇಂಜಿನಿಯರ್ ರಘುಪತಿ, ಇಇ ಐ.ಕೆ. ಪುಟ್ಟಸ್ವಾಮಿ, ತಹಸೀಲ್ದಾರ್ ಕಿರಣ್ ಗೌರಯ್ಯ, ಸಹಾಯಕ ಇಂಜಿನಿಯರ್ ಕಿರಣ್ ದೇವಯ್ಯ, ಸಿದ್ದರಾಜು, ಸೌಮ್ಯ, ಸಂಧ್ಯಾ, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ವಿ.ಪಿ.ಶಶಿಧರ, ಕೂಡುಮಂಗಳೂರು ಗ್ರಾಪಂ ಅಧ್ಯಕ್ಷ ಭಾಸ್ಕರ ನಾಯ್ಕ್, ಹಾರಂಗಿ ಅಚ್ಚುಕಟ್ಟು ಪ್ರದೇಶ ವ್ಯಾಪ್ತಿಯ ಇಂಜಿನಿಯರ್‌ಗಳು ಹಾಜರಿದ್ದರು.



ಹಾರಂಗಿ ಜಲಾಶಯಕ್ಕೆ ಶಾಸಕರಾದ ಡಾ.ಮಂತರ್‌ಗೌಡ, ಎ.ಮಂಜು, ವಿಧಾನ ಪರಿಷತ್ ಸದಸ್ಯ ಎಂ.ಪಿ.ಸುಜಾ ಕುಶಾಲಪ್ಪ, ಬಾಗಿನ ಅರ್ಪಿಸಿದರು.

ಸಮಾಜಕ್ಕಾಗಿ ಪ್ರಾಣತ್ಯಾಗ ಮಾಡಿದವರನ್ನು ಸ್ಮರಿಸಬೇಕು



ಚಾಮರಾಜನಗರದ ಕವಾಯತು ಮೈದಾನದಲ್ಲಿ ನಡೆದ ದಿನಾಚರಣೆಯಲ್ಲಿ ಪೊಲೀಸ್ ಹುತಾತ್ಮರಿಗೆ ಗಣ್ಯರು ಗೌರವ ಸಲ್ಲಿಸಿದರು.

ಚಾಮರಾಜನಗರ, ಅ.21–ಸಮಾಜದ ಒಳಿತಿಗಾಗಿ ಪ್ರಾಣ ತ್ಯಾಗ ಮಾಡಿದ ಪೊಲೀಸರನ್ನು ಸ್ಮರಿಸುವುದು ಎಲ್ಲರ ಕರ್ತವ್ಯ ಎಂದು ಮಕ್ಕಳ ಸ್ನೇಹಿ ನ್ಯಾಯಾಲಯದ ನ್ಯಾಯಾಧೀಶ ಕೃಷ್ಣ ತಿಳಿಸಿದರು.

ನಗರದ ಜಿಲ್ಲಾ ಪೊಲೀಸ್ ಕವಾಯತು ಮೈದಾನದಲ್ಲಿ ಜಿಲ್ಲಾ ಪೊಲೀಸ್ ವತಿಯಿಂದ ಆಯೋಜಿಸಿದ್ದ ಪೊಲೀಸ್ ಹುತಾತ್ಮರ ದಿನಾಚರಣೆಯಲ್ಲಿ ಹುತಾತ್ಮರ ಸ್ಮಾರಕಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದ ಅವರು, ಅಧಿಕಾರ, ಅಂತಸ್ತು, ಆಸ್ತಿ, ಹುದ್ದೆಗಳಿಂದ ಹೆಚ್ಚು ಜೀವ ಮುಖ್ಯವಾಗಿರುತ್ತದೆ. ಕರ್ತವ್ಯದ ಬದ್ಧತೆಗಾಗಿ ತಮ್ಮ ಜೀವವನ್ನೇ ಮುಡಿಪಾಗಿಟ್ಟು ರಾಷ್ಟ್ರ ಹಾಗೂ ಸಮಾಜದ ಸೇವೆಗಾಗಿ ಬಲಿದಾನರಾದ ದಿವ್ಯ ಚೇತನಗಳಿಗೆ ಪ್ರತಿಯೊಬ್ಬರು ಕೃತಜ್ಞತೆ ಸಲ್ಲಿಸುವುದು ಅಗತ್ಯ ಎಂದು ಹೇಳಿದರು.

ಸಮಾಜಕ್ಕಾಗಿ ದುಡಿದವರಿಗೆ ಸಮಾಜ ಮಿಡಿಯಬೇಕಾದದ್ದು ನಾಗರಿಕ ಸಮಾಜದ ಕರ್ತವ್ಯ. ನಮಗಾಗಿ ದುಡಿದ ಅಗಲಿದ ದಿವ್ಯ ಚೇತನಗಳಿಗೆ ಗೌರವ ಸಲ್ಲಿಸಬೇಕು. ಪೊಲೀಸರ ಕರ್ತವ್ಯ ನಿಷ್ಠೆ ಹಾಗೂ ಪ್ರಜ್ಞಾ ಸ್ಫೂರ್ತಿಯ ಚಿಲುಮೆಯಾಗಿದ್ದು, ಅವರ ಸ್ಫೂರ್ತಿ ಈಗಿನ ಪೊಲೀಸರಿಗೆ ಮಾದರಿಯಾಗಿದೆ ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ.ಕವಿತಾ, ಹುತಾತ್ಮ ಪೊಲೀಸರ ನಾಮವಾಚಿಸಿದರು. ಇದಕ್ಕೂ ಮುನ್ನ ಪೊಲೀಸ್ ಹುತಾತ್ಮರ ಸ್ಮಾರಕಕ್ಕೆ ಗಣ್ಯರು ಪುಷ್ಪ ನಮನ ಸಲ್ಲಿಸಿದರು. ಸಶಸ್ತ್ರ ಪೊಲೀಸರು ಮೂರು ಬಾರಿ ಕುಶಾಲ ತೋಪು ಸಿಡಿಸಿ ಗೌರವ ಸಲ್ಲಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಶಿಲ್ಪ ನಾಗ್, ಜಿಪಂ ಸಿಇಓ ಮೋನಾ ರೋತ್, ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಟಿ. ಹೀರಲಾಲ್, ಬಿಆರ್‌ಟಿ ಹುಲಿ ಯೋಜನೆ ನಿರ್ದೇಶಕ ಬಿ.ಎಸ್.ಶ್ರೀಪತಿ, ಮಹದೇಶ್ವರ ವನ್ಯಜೀವಿ ವಿಭಾಗದ ಉಪಅರಣ್ಯ ಸಂರಕ್ಷಣಾಧಿಕಾರಿ ಡಾ.ಜಿ.ಸಂತೋಷ್ ಕುಮಾರ್ ಇತರರಿದ್ದರು.

ಪರಿಶಿಷ್ಟ ಜಾತಿ ರೈತ ಸಂಘ ಕರ್ನಾಟಕ ಸ್ಥಾಪನೆಗೆ ನಿರ್ಣಯ



ಚಾಮರಾಜನಗರ ತಾಲೂಕಿನ ದಡದಹಳ್ಳಿ ಅಂಬೇಡ್ಕರ್ ಭವನದಲ್ಲಿ ಪ.ಜಾತಿ ರೈತ ಮುಖಂಡರ ಪೂರ್ವಭಾವಿ ಸಭೆ ನಡೆಯಿತು.

ಚಾಮರಾಜನಗರ, ಅ.21–ಪರಿಶಿಷ್ಟ ಜಾತಿ ರೈತರ ಸಮಸ್ಯೆ ಹಾಗೂ ಹಕ್ಕೊತ್ತಾಯ ಈಡೇರಿಕೆಗಾಗಿ ಪರಿಶಿಷ್ಟ ಜಾತಿ ರೈತ ಸಂಘ ಕರ್ನಾಟಕ ಸ್ಥಾಪನೆಗೆ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು.

ತಾಲೂಕಿನ ದಡದಹಳ್ಳಿ ಅಂಬೇಡ್ಕರ್ ಭವನದಲ್ಲಿ ನಡೆದ ಪ.ಜಾತಿ ರೈತ ಮುಖಂಡರು ಹಾಗೂ ವಿವಿಧ ಗ್ರಾಮಗಳ ಮುಖಂಡರ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿದ್ದ ಬಹಳಷ್ಟು ಮುಖಂಡರು, ಹಳ್ಳಿಯಿಂದ ದೆಹಲಿವರೆಗೆ ಸಮುದಾಯದ ರೈತರನ್ನು ಮೂಲ ರೈತ ಸಂಘಟನೆ ಕಡೆಗಣಿಸುತ್ತಾ ಬಂದಿದೆ. ರೈತ ಸಂಘ ಎಲ್ಲರನ್ನು ಒಟ್ಟಿಗೆ ತೆಗೆದುಕೊಂಡು ಹೋಗುವ ಬದಲು ಮೇಲ್ವರ್ಗದ ಸಂಘಟನೆಯಾಗಿದೆಯೇ ಹೊರತು ಪ.ಜಾತಿ ಹಾಗೂ ಸಣ್ಣ ಹಿಡುವಳಿದಾರರ ಸಮಸ್ಯೆಗಳಿಗೆ ಯಾವುದೇ ಸ್ಪಂದನೆ ನೀಡುತ್ತಿಲ್ಲ ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು.

ಅ.26ರಂದು ಸಭೆ: ಪ.ಜಾತಿ ರೈತ ಸಂಘ ಕರ್ನಾಟಕ ಸ್ಥಾಪನೆ ಕುರಿತು ಅ.26ರಂದು ಬೆಳಗ್ಗೆ 10.30ಕ್ಕೆ ಚಂದಕವಾಡಿ ಅಂಬೇಡ್ಕರ್ ಭವನದಲ್ಲಿ ಸಭೆ ಆಯೋಜಿಸಲಾಗಿದೆ ಎಂದು ಡಾ.ಕೆ.ಶಿವಕುಮಾರ್ ತಿಳಿಸಿದರು.

ಸಭೆಯಲ್ಲಿ ಸಿದ್ದಯ್ಯನಪುರ ಯಜಮಾನ ನಾಗರಾಜು, ಮುಖಂಡರಾದ ಆಲೂರು ಮಲ್ಲಣ್ಣ, ದಡದಹಳ್ಳಿ ಗೋವಿಂದರಾಜು, ಮಹದೇವಸ್ವಾಮಿ, ಮಹೇಶ್, ಕೆಂಪಣ್ಣ, ಶಿವಣ್ಣ, ಸಿ.ಎಸ್.ಮಹದೇವಸ್ವಾಮಿ, ಸೋಮಣ್ಣ, ಬಸವಣ್ಣ, ಶಿವಬಸಯ್ಯ, ರಂಗಸ್ವಾಮಿ, ಪ್ರಭುಸ್ವಾಮಿ, ಕುಂಬಯ್ಯ, ಮುದ್ದಮಲ್ಲಯ್ಯ, ಎಸ್.ಆರ್.ಗೋವಿಂದರಾಜು, ಕುಂಬೇಶ್ವರಸ್ವಾಮಿ, ಹೆಬ್ಬಸೂರು ಸೋಮಣ್ಣ, ಮರಿಸ್ವಾಮಿ, ಗೌತಮ ಕಾಲೋನಿ ಗುರುಸ್ವಾಮಿ, ಮಹದೇವಯ್ಯ, ಮಂಜು ಭಾಗವಹಿಸಿದ್ದರು.

ನಾಗರತ್ನ ನಿಧನ



ಬೇಗೂರು, ಅ.21–ಗುಂಡ್ಲುಪೇಟೆ ತಾಲೂಕಿನ ಬೇಗೂರು ಗ್ರಾಮದ ನಾಗರತ್ನ (72) ನಿಧನರಾದರು.

ಮೃತರು ಪುತ್ರ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಬಿ.ಎಸ್ ಚೇತನ್ ಹಾಗೂ ಪತಿ ನಿವೃತ್ತ ಮುಖ್ಯ ಶಿಕ್ಷಕ ಶ್ರೀಕಂಠಮೂರ್ತಿ ಅವರನ್ನು ಅಗಲಿದ್ದಾರೆ. ಬೇಗೂರಿನ ಮೃತರ ತೋಟದಲ್ಲಿ ಅಂತ್ಯಕ್ರಿಯೆ ನಡೆಯಿತು.

ಸಂತಾಪ: ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್, ಮಾಜಿ ಶಾಸಕ ಸಿ.ಎಸ್.ನಿರಂಜನ್ ಕುಮಾರ್, ಚಾಮುಲ್ ಮಾಜಿ ಅಧ್ಯಕ್ಷ ನಂಜುಂಡ ಪ್ರಸಾದ್, ಕಾಡಾ ಮಾಜಿ ಅಧ್ಯಕ್ಷ ಎಚ್.ನಂಜಪ್ಪ, ಹೊರೆಯಾಲ ಮಹೇಶ್ ಅಂತಿಮ ದರ್ಶನ ಪಡೆದರು.

ಗಾಳಿ–ಮಳೆಗೆ ನೆಲಕಚ್ಚಿದ ಫಸಲು

ಚಾಮರಾಜನಗರದಲ್ಲಿ ಧರೆಗುರುಳಿದ ಮರ-ಗಿಡ, ಬಾಳೆ, ವಿದ್ಯುತ್ ಕಂಬಗಳು



ಧಾರಾಕಾರ ಮಳೆಯಿಂದ ಮೆಣಸಿನಕಾಯಿ ಗಿಡಗಳಿಗೆ ನೀರು ತುಂಬಿರುವುದು.



ಬಿರುಗಾಳಿ ಮಳೆಗೆ ಬಾಳೆಗಿಡ ಮುರಿದು ಬಿದ್ದಿರುವುದು.

ಚಾಮರಾಜನಗರ, ಅ.21–ಜಿಲ್ಲೆಯಲ್ಲಿ ಸುರಿಯುತ್ತಿರುವ ಬಿರುಗಾಳಿ ಸಹಿತ ಮಳೆಯಿಂದ ಬಾಳೆ, ಪಪ್ಪಾಯ, ತೆಂಗು, ಕಬ್ಬು ಬೆಳೆಗೆ ಸಾಕಷ್ಟು ಹಾನಿಯಾಗುತ್ತಿದ್ದು, ಕಳೆದ ಎರಡು ದಿನಗಳಿಂದ ಸುರಿದ ಧಾರಾಕಾರ ಹಾಗೂ ಜೋರು ಗಾಳಿಯಿಂದ ತಾಲೂಕಿನ ಚಂದಕವಾಡಿ ಹೋಬಳಿ ವ್ಯಾಪ್ತಿಯಲ್ಲಿ ಸುಮಾರು ಹತ್ತಾರು ಎಕರೆಗೂ ಹೆಚ್ಚು ಫಸಲು ನಾಶವಾಗಿದೆ.

ತಾಲೂಕಿನ ಹರದನಹಳ್ಳಿ, ವೆಂಕಟಯ್ಯನ ಛತ್ರ, ವಿ.ಸಿ.ಹೊಸೂರು, ಬಂಡಿಗೇರೆ, ಅಮಚವಾಡಿ ಗ್ರಾಮಗಳ ವ್ಯಾಪ್ತಿಯಲ್ಲಿ ಭಾನುವಾರ ರಾತ್ರಿ ಸುರಿದ ಬಿರುಗಾಳಿ ಸಹಿತ ಮಳೆಗೆ ಬಾಳೆ, ಮುಸುಕಿನ ಜೋಳ ಸೇರಿದಂತೆ ತರಕಾರಿ, ಹೂವಿನ ಬೆಳೆಗಳಿಗೆ ಹೆಚ್ಚು ಹಾನಿಯಾಗಿದೆ.

ವೆಂಕಟಯ್ಯನಛತ್ರ, ವಿ.ಸಿ.ಹೊಸೂರು ಗ್ರಾಮದ 20ಕ್ಕೂ ಹೆಚ್ಚು ಎಕರೆಯಲ್ಲಿ ಬೆಳೆದಿದ್ದ ಬಾಳೆ ಫಸಲು ನಾಶವಾಗಿದ್ದರೆ, 10 ರಿಂದ 15 ಎಕರೆಯಷ್ಟು ಮುಸುಕಿನ ಜೋಳ ಸಂಪೂರ್ಣವಾಗಿ ನೆಲಕಚ್ಚಿದೆ. ಇದರೊಂದಿಗೆ ಕಬ್ಬು, ಮೆಣಸಿನಕಾಯಿ, ಟೊಮೆಟೊ ಬೆಳೆ ಹಾನಿಯಾಗಿದೆ.

ಜೋರು ಗಾಳಿ ಪರಿಣಾಮ ತೆಂಗು, ತೇಗ, ಹುಣಸೆ, ಹೆಬ್ಬೇವು ಮರಗಳು ಧರೆಗುರುಳಿವೆ. ಅಲ್ಲದೆ, ಹಲವು ಕಡೆಗಳಲ್ಲಿ ವಿದ್ಯುತ್ ಕಂಬಗಳು ನೆಲಕ್ಕೆ ಉರುಳಿವೆ. ಕಟಾವಿಗೆ ಬಂದಿದ್ದ ಬೆಳೆಗಳು ಹಾಳಾಗಿದ್ದು, ಕೈಗೆ ಬಂದ ತುತ್ತು ಬಾಯಿಗೆ ಬಾರದಂತಾಗಿದೆ. ಲಕ್ಷಾಂತರ ರೂ. ನಷ್ಟವಾಗಿದ್ದು, ಈ ಭಾಗದ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ.

ಒಂದು ಬಾಳೆಗಿಡ ಬಿತ್ತನೆಯೊಂದಕ್ಕೆ 15ರೂ.ನಂತೆ ಸಾವಿರಾರು ಗಿಡ ಖರೀದಿಸಿ ತಂದು 2 ಎಕರೆಯಲ್ಲಿ ನಾಟಿ ಮಾಡಲಾಯಿತು. ಅಲ್ಲಿಂದ ಇಲ್ಲಿ ತನಕ ಎಕರೆಗೆ ಒಂದು ಲಕ್ಷ ರೂ. ಖರ್ಚಾಗಿದೆ. ಭಾನುವಾರ ಬಂದ ಗಾಳಿ ಮಳೆಗೆ ಫಸಲಿಗೆ ಬಂದಿದ್ದ ಬಾಳೆ ನಾಶವಾಗಿದೆ. ಇದರಿಂದ ನಮ್ಮ ಜೀವನ ಹಾಳಾಗಿದೆ ಎಂದು ರೈತರೊಬ್ಬರು ಕಣ್ಣೀರು ಹಾಕಿದರು.

ಕೃಷಿಯನ್ನೇ ನಂಬಿ ಬದುಕು ಕಟ್ಟಿಕೊಂಡಿರುವ ರೈತರ ಬಗ್ಗೆ ಜಿಲ್ಲಾಡಳಿತ, ಸರ್ಕಾರ ಗಮನ ಹರಿಸಿ, ನಷ್ಟಕ್ಕೊಳಗಾದ ರೈತರಿಗೆ ಶೀಘ್ರ ಸೂಕ್ತ ಪರಿಹಾರ ಕೊಡಿಸಿಕೊಡಬೇಕು ಎಂದು ರೈತ ಬಸವರಾಜು ಒತ್ತಾಯಿಸಿದರು.

ಬಾಳೆ ಬೆಳೆಗಾರರಿಗೆ ಬರ ಸಿಡಿಲು

ಇದು ಒಬ್ಬ ರೈತನ ಕಥೆಯಲ್ಲ, ಚಾಮರಾಜನಗರ ಜಿಲ್ಲೆಯಲ್ಲಿ ಬಾಳೆ ಬೆಳೆದಿರುವ ಎಲ್ಲಾ ರೈತರ ಕಥೆಯಾಗಿದೆ. ಹಿಂಗಾರು, ಹಂಗಾಮಿನ ಮಳೆ ಜೋರು ಗಾಳಿ ಸಹಿತ ಬಂದ ಮಳೆ ಬಾಳೆ ಬೆಳೆದ ರೈತ ಬಾಳಿಗೆ ಬರ ಸಿಡಿಲಿನಂತೆ ಬಡಿದಿದೆ. ಮಾರುಕಟ್ಟೆಯಲ್ಲಿ ಬಾಳೆ ಹಣ್ಣಿಗೆ ಉತ್ತಮ ಬೆಲೆ ಇದೆ. ಆದರೆ, ಮಳೆಯಿಂದ ಬಾಳೆ ಬೆಳೆದ ರೈತರು ಬೆಳೆ ನಷ್ಟದಿಂದ ಕಂಗೆಟ್ಟಿದ್ದಾನೆ.

ಕಾಲುಬಾಯಿ ರೋಗ ನಿವಾರಣೆಗೆ ಸಹಕರಿಸಿ

ಚಾಮರಾಜನಗರ: ಪಲ್ಸ್ ಪೋಲಿಯೋ ಮಾದರಿಯಲ್ಲಿ ಕಾಲುಬಾಯಿ ರೋಗವನ್ನು ನಿವಾರಿಸಲು ರೈತರು ಮತ್ತು ಹೈನುಗಾರರು ತಮ್ಮ ಜಾನುವಾರುಗಳಿಗೆ ಲಸಿಕೆ ಹಾಕಿಸುವ ಮೂಲಕ ಸಹಕರಿಸಬೇಕು ಎಂದು ಕಾಗಲವಾಡಿ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಕಾಗಲವಾಡಿ ಚಂದ್ರು ಹೇಳಿದರು.

ತಾಲೂಕಿನ ಕಾಗಲವಾಡಿ ಪಶು ಚಿಕಿತ್ಸಾಲಯದಲ್ಲಿ ಪಶುಪಾಲನೆ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ಹಾಗೂ ಕಾಗಲವಾಡಿ ಹಾಲು ಉತ್ಪಾದಕರ ಸಹಕಾರ ಸಂಘದ ವತಿಯಿಂದ ಆಯೋಜಿಸಿರುವ 6ನೇ ಸುತ್ತಿನ ಕಾಲುಬಾಯಿ ರೋಗ ಲಸಿಕೆ ಅಭಿಯಾನದಲ್ಲಿ ಮಾತನಾಡಿದ ಅವರು, ರಾಷ್ಟ್ರೀಯ ಜಾನುವಾರು ರೋಗ ನಿಯಂತ್ರಣ ಯೋಜನೆಯಡಿ ಪಶುಪಾಲನೆ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ಜಿಲ್ಲೆಯಾದ್ಯಂತ ಲಸಿಕೆ ಕಾರ್ಯಕ್ರಮವನ್ನು ನ.20ವರೆಗೆ ಹಮ್ಮಿಕೊಂಡಿದೆ. ಇಂತಹ ಅಭಿಯಾನವನ್ನು ರೈತರು ಸದುಪಯೋಗಪಡಿಸಿಕೊಂಡು ಕಾಲಕಾಲಕ್ಕೆ ಜಾನುವಾರುಗಳಿಗೆ ಲಸಿಕೆ ಹಾಕಿಸಿ ರೋಗ ತಡೆಗಟ್ಟಬೇಕು ಎಂದರು.

ಚಾಮುಲ್ ನಿರ್ದೇಶಕ ಹೆಚ್.ಎಸ್.ಬಸವರಾಜು, ಪಶುಪಾಲನೆ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ಡಾ.ಹನುಮೇಗೌಡ ಮಾತನಾಡಿದರು. ಚಾಮುಲ್ ನಿರ್ದೇಶಕ ಸದಾಶಿವಮೂರ್ತಿ, ಡೈರಿ ಉಪಾಧ್ಯಕ್ಷ ಮಹದೇವಸ್ವಾಮಿ, ಗ್ರಾಪಂ ಅಧ್ಯಕ್ಷೆ ಜ್ಯೋತಿ, ಉಪಾಧ್ಯಕ್ಷೆ ಲಕ್ಷ್ಮೀ, ನಿವೃತ್ತ ಅಧಿಕಾರಿ ಮಹದೇವಯ್ಯ, ಸಹಾಯಕ ನಿರ್ದೇಶಕ ಡಾ.ನಟರಾಜು, ಡಾ.ಮನೋಹರ್, ಡಾ.ಲಕ್ಷ್ಮೀ ಸಾಗರ್, ಡಾ.ನವೀನ್, ಇಂದ್ರಮ್ಮ ಹಾಜರಿದ್ದರು.



ಕಾಗಲವಾಡಿಯಲ್ಲಿ ಕಾಲುಬಾಯಿ ರೋಗ ಲಸಿಕೆ ಅಭಿಯಾನಕ್ಕೆ ಚಾಲನೆ ನೀಡಲಾಯಿತು.

ಭೋಗಾಪುರ ಗ್ರಾಪಂ ಉಪಾಧ್ಯಕ್ಷೆಯಾಗಿ ನಾಗಮ್ಮ ಆಯ್ಕೆ...



ಚಾಮರಾಜನಗರ ತಾಲೂಕಿನ ಭೋಗಾಪುರ ಗ್ರಾಪಂ ಉಪಾಧ್ಯಕ್ಷೆಯಾಗಿ ಅವಿರೋಧವಾಗಿ ಆಯ್ಕೆಯಾದ ನಾಗಮ್ಮ ಅವರನ್ನು ಸದಸ್ಯರು ಅಭಿನಂದಿಸಿದರು. ಅಧ್ಯಕ್ಷೆ ರೂಪಾ, ಚುಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್, ಕಾಂಗ್ರೆಸ್ ಮುಖಂಡರಾದ ಪು.ಶ್ರೀನಿವಾಸ ನಾಯಕ, ಎಪಿಎಂಸಿ ಮಾಜಿ ಅಧ್ಯಕ್ಷ ನಾಗೇಂದ್ರ, ತಾಪಂ ಮಾಜಿ ಅಧ್ಯಕ್ಷ ಮಹಾಲಿಂಗು, ಗ್ರಾಪಂ ಸದಸ್ಯರಾದ ಸೋಮಶೇಖರ್, ನಂಜುಂಡಸ್ವಾಮಿ, ಮಹೇಶ್, ಮಹದೇವಪ್ಪ, ನಾಗು, ಪುಟ್ಟಗೌರಮ್ಮ, ಮಂಗಳಮ್ಮ, ನಂಜುಂಡೇಗೌಡ, ರಾಜಮ್ಮ ಇದ್ದರು.

ಜಿಲ್ಲಾಧಿಕಾರಿ ಮುಡಾ ಪ್ರಭಾರ ಅಧ್ಯಕ್ಷ



ಲಕ್ಷ್ಮಿಕಾಂತರೆಡ್ಡಿ

ಮೈಸೂರು, ಅ. 21(ಆರ್‌ಕೆ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ಪ್ರಭಾರ ಅಧ್ಯಕ್ಷರನ್ನಾಗಿ ಮೈಸೂರು ಜಿಲ್ಲಾಧಿಕಾರಿ ಜಿ.ಲಕ್ಷ್ಮಿ ಕಾಂತ ರೆಡ್ಡಿ ಅವರಿಗೆ ಹೆಚ್ಚುವರಿ ಜವಾಬ್ದಾರಿ ವಹಿಸಲಾಗಿದೆ.


ಈ ಸಂಬಂಧ ನಗರಾಭಿವೃದ್ಧಿ ಇಲಾಖೆ ಅಧೀನ ಕಾರ್ಯದರ್ಶಿ ಕೆ.ಲತಾ ಇಂದು ಅಧಿಸೂಚನೆ (ಸಂಖ್ಯೆ ನಅಇ 403 ಮೈಅಪ್ರಾ 2024 (ಇ) ಹೊರಡಿಸಿದ್ದು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸ್ಥಾನಕ್ಕೆ ಕೆ. ಮರೀಗೌಡರು ನೀಡಿರುವ ರಾಜೀನಾಮೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಸರ್ಕಾರ ಅಂಗೀಕರಿಸಿದೆ ಎಂದು ತಿಳಿಸಿದ್ದಾರೆ.

ಮುಂದುವರೆದು, ಸರ್ಕಾರದ ಸುತ್ತೋಲೆ ಸಂಖ್ಯೆ ನಅಇ 415 ಬೆಮಪ್ರಾ 2011, ದಿನಾಂಕ 13–02–2012ರನ್ವಯ ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ ಇವರು ಅಧ್ಯಕ್ಷರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ಹುದ್ದೆಯ ಪ್ರಭಾರ ವಹಿಸಿಕೊಳ್ಳುವುದು ಎಂದು ಲತಾ ಅಧಿಸೂಚನೆಯಲ್ಲಿ ತಿಳಿಸಿದ್ದಾರೆ.

ಅಕ್ಟೋಬರ್ 16ರಂದು ಕೆ.ಮರೀಗೌಡರು ಮುಡಾ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದರು. ಪತ್ರವು ನಗರಾಭಿವೃದ್ಧಿ ಸಚಿವರ ಮೂಲಕ ಮುಖ್ಯಮಂತ್ರಿಗೆ ತಲುಪಿ ಅನುಮೋದನೆ ನೀಡಿದ ಬಳಿಕ ಇಲಾಖಾ ಅಧೀನ ಕಾರ್ಯದರ್ಶಿಗಳು ಇಂದು ಅಧಿಕೃತ ಅಧಿಸೂಚನೆ ಹೊರಡಿಸಿದ್ದಾರೆ. ನಾಳೆ (ಅ.22) ಬೆಳಗ್ಗೆ 10.30 ಗಂಟೆಗೆ ಲಕ್ಷ್ಮಿಕಾಂತ ರೆಡ್ಡಿ ಮುಡಾ ಕಚೇರಿಯಲ್ಲಿ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಳ್ಳುವರು. ಈಗಾಗಲೇ ಅಧ್ಯಕ್ಷರ ಕೊಠಡಿ ಬಳಿ ಕೆ. ಮರೀಗೌಡರ ನಾಮಫಲಕ ತೆರವುಗೊಳಿಸಲಾಗಿದ್ದು, ಮಂಗಳವಾರ ಪ್ರಭಾರ ಅಧ್ಯಕ್ಷರ ಫಲಕ ಅಳವಡಿಸಲಾಗುವುದು.

ಕಂದಾಯ ರಶೀದಿ ಆಧರಿಸಿ ನಿವೇಶನಗಳ ನೋಂದಣಿಗೆ ಅವಕಾಶ ಕಲ್ಪಿಸಿ

ಬೆಂಗಳೂರಲ್ಲಿ ಕಂದಾಯ ಸಚಿವ ಕೃಷ್ಣ ಬೈರೇಗೌಡರಿಗೆ ಎಫ್‌ಕೆಸಿಸಿಐ ನಿಯೋಗ ಮನವಿ



ಎಫ್‌ಕೆಸಿಸಿಐ ನಿಯೋಗವು ಸೋಮವಾರ ಬೆಂಗಳೂರಿನಲ್ಲಿ ಕಂದಾಯ ಸಚಿವ ಕೃಷ್ಣ ಬೈರೇಗೌಡರನ್ನು ಭೇಟಿ ಮಾಡಿತು. ಒಕ್ಕೂಟದ ಅಧ್ಯಕ್ಷ ಎಂ.ಜಿ.ಬಾಲಕೃಷ್ಣ, ಮಾಜಿ ಅಧ್ಯಕ್ಷ ಸುಧಾಕರ ಎಸ್.ಶೆಟ್ಟಿ, ಉಪಾಧ್ಯಕ್ಷ ಟಿ. ಸಾಯಿರಾಮ್ ಹಾಗೂ ಇತರರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಅ. 21(ಆರ್‌ಕೆ)– ಕಂದಾಯ ಪಾವತಿ ರಶೀದಿ ಆಧಾರದ ಮೇಲೆಯೇ ನಿವೇಶನಗಳ ನೋಂದಣಿಗೆ ಅವಕಾಶ ಕಲ್ಪಿಸುವಂತೆ ಫೆಡರೇಷನ್ ಆಫ್ ಕರ್ನಾಟಕ ಛೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರೀಸ್ (ಎಫ್‌ಕೆಸಿಸಿಐ) ನಿಯೋಗ ಇಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರಲ್ಲಿ ಮನವಿ ಮಾಡಿದೆ.

ಎಫ್‌ಕೆಸಿಸಿಐ ಅಧ್ಯಕ್ಷ ಎಂ.ಜಿ. ಬಾಲಕೃಷ್ಣ, ಮಾಜಿ ಅಧ್ಯಕ್ಷ ಸುಧಾಕರ ಎಸ್. ಶೆಟ್ಟಿ, ಉಪಾಧ್ಯಕ್ಷ ಸಾಯಿರಾಮ್ ನೇತೃತ್ವದ ನಿಯೋಗವು ಬೆಂಗಳೂರಿನ ಗೃಹ ಕಚೇರಿಯಲ್ಲಿ ಸಚಿವ ಕೃಷ್ಣ ಬೈರೇಗೌಡರನ್ನು ಭೇಟಿ ಮಾಡಿ ಮನವಿ ಸಲ್ಲಿಸಿತು. ನಗರಾಭಿವೃದ್ಧಿ ಪ್ರಾಧಿಕಾರಗಳಿಂದ ನಕ್ಷೆ ಮಂಜೂರು ಮಾಡಿಸಿಕೊಂಡು ನಿರ್ಮಿಸಿರುವ ಬಡಾವಣೆಗಳಲ್ಲಿನ ನಿವೇಶನಗಳ ನೋಂದಣಿ ಪ್ರಕ್ರಿಯೆಯನ್ನು ಸರ್ಕಾರ ಸ್ಥಗಿತಗೊಳಿಸಿರುವುದರಿಂದ ನಿವೇಶನ ಪಡೆದ ಲಕ್ಷಾಂತರ ಮಂದಿಗೆ ತೀವ್ರ ತೊಂದರೆ ಉಂಟಾಗಿದೆ ಎಂಬ ಅಂಶವನ್ನು ನಿಯೋಗದ ಸದಸ್ಯರು ಸಚಿವರ ಗಮನಕ್ಕೆ ತಂದರು.

ರೇರಾದಿಂದ ನೋಂದಣಿಯಾಗಿರುವ ಸಂಘ–ಸಂಸ್ಥೆಗಳು ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿಗೊಳಿಸಿದ ವಸತಿ ಬಡಾವಣೆಗಳಲ್ಲಿ ನಗರಾಭಿವೃದ್ಧಿ ಪ್ರಾಧಿಕಾರಗಳು ಶೇ. 100ರಷ್ಟು ನಿವೇಶನ ಬಿಡುಗಡೆಗೊಳಿಸಿದ್ದು, ಈಗಾಗಲೇ ಮಂಜೂರಾತಿದಾರರ ಹೆಸರಿಗೆ ನೋಂದಣಿಯಾಗಿವೆ. ಇದೀಗ ಇ–ಸ್ವತ್ತು ಮಾಡಿಸದ ಆಸ್ತಿಗಳ ಕ್ರಯಪತ್ರ ನೋಂದಣಿಯನ್ನು ತಡೆಹಿಡಿದಿದೆ. ಈ ಸಂದರ್ಭದಲ್ಲಿ ಪಂಚಾಯ್ತಿ ಖಾತೆ ಮಾಡಿಸುವುದು ಅಸಾಧ್ಯವಾಗಿರುವುದರಿಂದ ಉಳಿದ ಶೇ. 20ರಷ್ಟು ಸದಸ್ಯರಿಗೆ ನಿವೇಶನ ನೋಂದಣಿ ಬಾಕಿ ಉಳಿದಿದೆ ಎಂಬ ವಿಷಯ ಮನವರಿಕೆ ಮಾಡಿಸಲಾಯಿತು.

ಪಂಚಾಯ್ತಿಗಳು, ಸ್ಥಳೀಯ ಸಂಸ್ಥೆಗಳಿಗೆ ಪ್ರಾಧಿಕಾರಗಳು ಇಲಾಖೆಯಲ್ಲಿ ಅನುಮೋದನೆಗೊಂಡ ನಕ್ಷೆಗಳನ್ನು ಹಸ್ತಾಂತರಿಸದಿರುವುದರಿಂದ ಪಂಚಾಯ್ತಿಗಳು ಇ–ಸ್ವತ್ತು ಮಾಡುತ್ತಿಲ್ಲ. ಆದ್ದರಿಂದ ಅನುಮೋದನೆಗೊಂಡಿರುವ ಬಡಾವಣೆಗಳ ನಿವೇಶನಗಳನ್ನು ಹಿಂದಿನಂತೆಯೇ ಕಂದಾಯ ಪಾವತಿ ರಶೀದಿ ಆಧಾರದ ಮೇಲೆ ನೋಂದಣಿ ಮಾಡಿಸಲು ವ್ಯವಸ್ಥೆ ಮಾಡಬೇಕೆಂದೂ ಸದಸ್ಯರು ಮನವಿ ಮಾಡಿಕೊಂಡರು. ಸಮಸ್ಯೆ ಆಲಿಸಿದ ಕಂದಾಯ ಸಚಿವರು, ಸಕಾರಾತ್ಮಕವಾಗಿ ಸ್ಪಂದಿಸಿದರಲ್ಲದೆ, ಇಲಾಖೆ ಅಧಿಕಾರಿಗಳೊಂದಿಗೆ ಚರ್ಚಿಸಿ ಸೂಕ್ತ ಕ್ರಮ ಜರುಗಿಸುವುದಾಗಿ ಭರವಸೆ ನೀಡಿದ್ದಾರೆ.

ಮೈಸೂರು ಜೈಲ್‌ನಲ್ಲಿ ಕೈದಿಗಳಿಗೆ ದಂತ ತಪಾಸಣೆ ಶಿಬಿರ




ಮೈಸೂರು, ಅ.21(ಎಸ್‌ಪಿಎನ್)– ಮೈಸೂರು ಕೇಂದ್ರ ಕಾರಾಗೃಹ ಆವರಣದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮೈಸೂರು ಕೇಂದ್ರ ಕಾರಾಗೃಹದ ವತಿಯಿಂದ ಆಯೋಜಿಸಿದ್ದ ಕೈದಿಗಳಿಗೆ ಐದು ದಿನದ ದಂತ ತಪಾಸಣೆ ಶಿಬಿರಕ್ಕೆ ಜಿಲ್ಲಾ ದಂತ ವೈದ್ಯಕೀಯ ವಿಭಾಗದ ನೋಡಲ್ ಅಧಿಕಾರಿ ಡಾ.ಎಸ್.ಅನಿತಾ ಚಾಲನೆ ನೀಡಿದರು.

ನಂತರ ಮಾತನಾಡಿ, ಪ್ರತಿಯೊಬ್ಬರು ತಮ್ಮ ಹಲ್ಲುಗಳ ರಕ್ಷಣೆಗೆ ಮುಂದಾಗಬೇಕು. ಆ ಮೂಲಕ ದೇಹದ ಆರೋಗ್ಯ ಕಾಪಾಡಿಕೊಳ್ಳಬಹುದಾಗಿದೆ. ನಾವು ನಿತ್ಯ ಸೇವಿಸುವ ಆಹಾರವನ್ನು ಹಲ್ಲುಗಳಿಂದ ಜಗಿದು ತಿಂದು ಕರಗಿಸಬಹುದು. ಹಾಗಾಗಿ ಹಲ್ಲುಗಳ ರಕ್ಷಣೆಗೆ ಎಲ್ಲರೂ ಜಾಗೃತಿ ವಹಿಸಬೇಕು. ಇಲ್ಲದಿದ್ದರೆ ದೇಹದ ಇತರೆ ಭಾಗಗಳು ಅನಾರೋಗ್ಯಕ್ಕೆ ತುತ್ತಾಗುತ್ತವೆ ಎಂದು ತಿಳಿಸಿದರು.

ಪ್ರತಿ ದಿನ ಬೆಳಗ್ಗೆ–ಸಂಜೆ ಹಲ್ಲು ಉಜ್ಜುವ ಮೂಲಕ ತಮ್ಮ ಹಲ್ಲುಗಳ ಗುಣಮಟ್ಟ ಕಾಯ್ದುಕೊಳ್ಳಬೇಕು. ಹಲ್ಲಿನ ಸಮಸ್ಯೆ ಕಂಡು ತಕ್ಷಣ ದಂತ ವೈದ್ಯರಲ್ಲಿ ಚಿಕಿತ್ಸೆ ಪಡೆದುಕೊಳ್ಳಬೇಕು. ಈ ದಂತ ಶಿಬಿರಗಳು ಅ.25ರವರೆಗೆ ನಡೆಯಲಿದ್ದು, ಈ ಶಿಬಿರದಲ್ಲಿ 10 ಮಂದಿ ದಂತ ವೈದ್ಯರು 800 ಮಂದಿ ಕೈದಿಗಳಿಗೆ ತಪಾಸಣೆ ನಡೆಸಲಿದ್ದಾರೆ. ಈ ವೇಳೆ ದಂತಚಿಕಿತ್ಸೆಗೆ ಅಗತ್ಯವಿರುವ ರೋಗಿಗಳನ್ನು ಜಿಲ್ಲಾಸ್ಪತ್ರೆ ಅಥವಾ ಕೆ.ಆರ್.ಆಸ್ಪತ್ರೆ ದಂತ ಚಿಕಿತ್ಸಾ ವಿಭಾಗದಲ್ಲಿ ಚಿಕಿತ್ಸೆ ನೀಡಲು ವ್ಯವಸ್ಥೆ ಮಾಡಲಾಗಿದೆ ಎಂದರು

ವೇದಿಕೆಯಲ್ಲಿ ಕಾರಾಗೃಹ ಮುಖ್ಯ ಅಧೀಕ್ಷಕ ಪಿ.ಎಸ್.ರಮೇಶ್, ದಂತ ವೈದ್ಯರಾದ ಡಾ.ಸಮೀವುಲ್ಲಾ ಷರೀಫ್, ಆ.ರಾಘವೇಂದ್ರ, ಡಾ.ಕಿರಣ್, ಡಾ.ಸಂತೋಷ್ ಇದ್ದರು.

ದಸರಾದಲ್ಲಿ ಬೊಂಬೆ ಪರಂಪರೆಗೆ ಮಹತ್ವದ ಸ್ಥಾನ



ಶ್ರೀ ದುರ್ಗಾ ಫೌಂಡೇಶನ್ ಟ್ರಸ್ಟ್ ಆಯೋಜಿಸಿದ್ದ ಮನೆಮನೆ ದಸರಾ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಸ್ಪರ್ಧಿಗಳನ್ನು ಸನ್ಮಾನಿಸಲಾಯಿತು.

ಮೈಸೂರು, ಅ.21(ಎಸ್‌ಪಿಎನ್)– ನಾಡಹಬ್ಬ ದಸರಾ ಪರಂಪರೆಯಲ್ಲಿ ಮನೆಮನೆ ಗೊಂಬೆ ಪ್ರದರ್ಶನ ಅತ್ಯಂತ ಮಹತ್ವದ ಸ್ಥಾನ ಪಡೆದುಕೊಂಡಿದೆ ಎಂದು ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ ಪ್ರಕಾಶ್ ಅಭಿಪ್ರಾಯಪಟ್ಟರು.

ಮೈಸೂರು ರಾಮಾನುಜ ರಸ್ತೆಯಲ್ಲಿರುವ ನಮೋ ಯೋಗಭವನದಲ್ಲಿ ಶ್ರೀ ದುರ್ಗಾ ಫೌಂಡೇಶನ್ ಟ್ರಸ್ಟ್ ಆಯೋಜಿಸಿದ್ದ ಮನೆ ಮನೆ ದಸರಾ ಕಾರ್ಯಕ್ರಮದ ಅಂಗವಾಗಿ ದಸರಾ ಗೊಂಬೆ ಪ್ರದರ್ಶನದಲ್ಲಿ ಸ್ಪರ್ಧಿಗಳಿಗೆ ಪ್ರಮಾಣ ಪತ್ರ ವಿತರಿಸಿ ಮಾತನಾಡಿದರು.

ಮೈಸೂರು ದಸರಾ ಪರಂಪರೆಯಲ್ಲಿ ಅತ್ಯಂತ ಪವಿತ್ರವಾದುದು ದಸರಾ ಗೊಂಬೆ ಪ್ರದರ್ಶನ. ಪಟ್ಟದ ಗೊಂಬೆಗಳನ್ನು ಲಕ್ಷ್ಮಿ ನಾರಾಯಣ ಸ್ವರೂಪದಲ್ಲಿ ಪೂಜಿಸಿ, ಪುರಾಣ ಪುಣ್ಯಕಥೆಗಳನ್ನು ಗೊಂಬೆಗಳ ಮೂಲಕ ರೂಪಕವಾಗಿ ಪ್ರದರ್ಶಿಸಿ, ಈ ಪರಂಪರೆಯನ್ನು ಮುಂದಿನ ಪೀಳಿಗೆಗೂ ಪರಿಚಯಿಸುವುದೇ ಮನೆಮನೆ ದಸರಾದ ಉದ್ದೇಶ ಎಂದರು.

ಮೈಸೂರಿನ ಮನೆಗಳಲ್ಲಿ ಗೃಹಿಣಿಯರು ಗೊಂಬೆಗಳನ್ನು ಕೂರಿಸುವುದರಿಂದ ನಮ್ಮ ಪರಂಪರೆ ಮತ್ತಷ್ಟು ಗಟ್ಟಿಗೊಳ್ಳುತ್ತದೆ. ಇದನ್ನು ಮುಂದಿನ ಪೀಳಿಗೆಗೂ ಪರಿಚಯಿಸಿದಂತೆ ಎಂದರು.

ಈ ವೇಳೆ ಕೆ.ರಘುರಾಂ ವಾಜಪೇಯಿ, ಕಾಂಗ್ರೆಸ್ ಮುಖಂಡ ಎನ್.ಎಂ ನವೀನ್ ಕುಮಾರ್, ಶ್ರೀ ದುರ್ಗಾ ಫೌಂಡೇಶನ್ ಅಧ್ಯಕ್ಷೆ ರೇಖಾ ಶ್ರೀನಿವಾಸ್, ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಎನ್ಐಇ ಕಾಲೇಜಿನ ಪ್ರೊ.ಸಿ.ಕೆ.ವನಮಾಲ, ಅಂಬಾಭವಾನಿ ಮಹಿಳಾ ಸಮಾಜದ ಅಧ್ಯಕ್ಷೆ ಸವಿತಾ ಘಾಟ್ಕೆ , ಗ್ರಾಜುಯೇಟ್ ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕರಾದ ವರಲಕ್ಷ್ಮಿ ಅಜಯ್, ಚಕ್ರಪಾಣಿ, ಮಹಾನ್ ಶ್ರೇಯಸ್, ಜಯಶ್ರೀ ಶಿವರಾಂ ಇನ್ನಿತರರು ಹಾಜರಿದ್ದರು. ಶಿಬಿರದಲ್ಲಿ 80ಕ್ಕೂ ಹೆಚ್ಚು ಸ್ಪರ್ಧಿಗಳು ಸ್ಪರ್ಧೆಯಲ್ಲಿ ಭಾಗವಹಿಸಿದ್ದರು.

ಬಿಜೆಪಿ ಅಭಿಯಾನ: ಪಕ್ಷಕ್ಕೆ 10 ಕೋಟಿ ಸದಸ್ಯತ್ವ



ನವದೆಹಲಿ: ಭಾರತೀಯ ಜನತಾ ಪಕ್ಷ (ಬಿಜೆಪಿ) ಸೋಮವಾರ ತನ್ನ ಸದಸ್ಯತ್ವವನ್ನು 10 ಕೋಟಿಗೆ ಏರಿಸಿಕೊಳ್ಳುವ ಮೂಲಕ ಮಹತ್ವದ ಮೈಲಿಗಲ್ಲು ಸಾಧಿಸಿದೆ.

ಬಿಜೆಪಿ ಪಕ್ಷ ಪ್ರಸ್ತುತ ನಡೆಸುತ್ತಿರುವ ಸದಸ್ಯತ್ವ ಅಭಿಯಾನವು ಮುಂದುವರೆದಿರುವಂತೆಯೇ ಪಕ್ಷದ ಸದಸ್ಯತ್ವವು ಇದೀಗ 10 ಕೋಟಿಗೇರಿದೆ. ಪಕ್ಷದ ಸದಸ್ಯತ್ವ ಅಭಿಯಾನವು ಅಕ್ಟೋಬರ್ 11 ರಂದು ಪ್ರಾರಂಭವಾಗಿತ್ತು. ಅಂತೆಯೇ ಇದು ಅಕ್ಟೋಬರ್ ಅಂತ್ಯದವರೆಗೆ ಇರುತ್ತದೆ.

ನಂತರ ನವೆಂಬರ್ 1 ರಿಂದ 5 ರವರೆಗೆ ಪರಿಶೀಲನೆಯ ಅವಧಿ ಇರುತ್ತದೆ. ಸದಸ್ಯರು 100 ರೂಪಾಯಿಗಳನ್ನು ದೇಣಿಗೆ ನೀಡಿ ಅವರ ವಿಧಾನಸಭಾ ಕ್ಷೇತ್ರದಲ್ಲಿ 50 ಸದಸ್ಯರನ್ನು ಹೊಂದಿದ ನಂತರ ಪ್ರಮಾಣಪತ್ರಗಳನ್ನು ಸ್ವೀಕರಿಸುತ್ತಾರೆ ಎಂದು ಬಿಜೆಪಿಯ ಮೂಲಗಳು ತಿಳಿಸಿವೆ.

ಪ್ರಸ್ತುತ ಸದಸ್ಯತ್ವ ಪ್ರಕ್ರಿಯೆಯು ಮಂಡಲ್ ಮಟ್ಟದಲ್ಲಿ ಭೌತಿಕ ದಾಖಲಾತಿಗೆ ಒತ್ತು ನೀಡುತ್ತಿದೆ. ಬಳಿಕ ಇದು ಆನ್‌ಲೈನ್ ಸದಸ್ಯತ್ವಕ್ಕೆ ಪರಿವರ್ತನೆಗೊಳ್ಳುತ್ತದೆ. ಈ ಸಕ್ರಿಯ ಸದಸ್ಯತ್ವ ಅಭಿಯಾನಕ್ಕೆ ಅನುಕೂಲವಾಗುವಂತೆ ಇಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ನೇತೃತ್ವದಲ್ಲಿ ಕಾರ್ಯಾಗಾರವನ್ನೂ ಆಯೋಜಿಸಲಾಗಿದೆ. ಈ ಪ್ರಯತ್ನವು ಮಂಡಲ, ಜಿಲ್ಲೆ, ರಾಜ್ಯ ಮತ್ತು ರಾಷ್ಟ್ರಮಟ್ಟದ ಚುನಾವಣೆಗಳಿಗೆ ಕಾರಣವಾಗಲಿದ್ದು, ಜನವರಿಯಲ್ಲಿ ರಾಷ್ಟ್ರೀಯ ಅಧ್ಯಕ್ಷರ ಆಯ್ಕೆಯೊಂದಿಗೆ ಕೊನೆಗೊಳ್ಳುತ್ತದೆ ಎನ್ನಲಾಗಿದೆ.

ಮೂಲಗಳ ಪ್ರಕಾರ ವಿವಿಧ ಸಂಘಟನಾ ಹಂತಗಳಲ್ಲಿ ಪಕ್ಷದ ನಾಯಕರ ಆಯ್ಕೆ ಕುರಿತು ಚರ್ಚಿಸಲು ಇಂದು ಪಕ್ಷದ ವಿಸ್ತರಣಾ ಕಚೇರಿಯಲ್ಲಿ ಬಿಜೆಪಿ ಮಹತ್ವದ ಸಭೆ ನಡೆಸಲಿದೆ. ಕಾರ್ಯಾಗಾರವು ಪರಿಣಾಮಕಾರಿ ಚುನಾವಣಾ ನಿರ್ವಹಣೆಗಾಗಿ ಮತ್ತು ಪಕ್ಷದ ಆಂತರಿಕ ಚೌಕಟ್ಟನ್ನು ಬಲಪಡಿಸಲು ಅಗತ್ಯ ಸಾಧನಗಳು ಮತ್ತು ಕಾರ್ಯತಂತ್ರಗಳೊಂದಿಗೆ ನಾಯಕರನ್ನು ಸಬಲೀಕರಣಗೊಳಿಸುವ ಗುರಿಯನ್ನು ಹೊಂದಿರುವ ಸಾಂಸ್ಥಿಕ ಚುನಾವಣೆಗಳ ಮೇಲೆ ಕೇಂದ್ರೀಕರಿಸುತ್ತದೆ ಎನ್ನಲಾಗಿದೆ.

ಈ ಸಭೆಗೆ ಕೇಂದ್ರ ಚುನಾವಣಾ ಸಮಿತಿಯ ಪದಾಧಿಕಾರಿಗಳು, ರಾಜ್ಯ ಚುನಾವಣಾ ಪದಾಧಿಕಾರಿಗಳು, ಬಿಜೆಪಿಯ ರಾಷ್ಟ್ರೀಯ ಪದಾಧಿಕಾರಿಗಳು, ರಾಜ್ಯಾಧ್ಯಕ್ಷರು ಮತ್ತು ಸಂಘಟನಾ ಕಾರ್ಯದರ್ಶಿಗಳು ಪಾಲ್ಗೊಳ್ಳಲಿದ್ದಾರೆ.

ಸಿಎಂ ಸಿದ್ದರಾಮಯ್ಯ, ಅವರ ಪತ್ನಿ ಪಾರ್ವತಿ ಅವರಿಗೆ ಶೀಘ್ರದಲ್ಲೇ ಸಮನ್ಸ್

ಪಾರ್ವತಿಯವರು ಸಾರ್ವಜನಿಕವಾಗಿ ಕಾಣಿಸಿಕೊಳ್ಳಬೇಕಾದ ಅನಿವಾರ್ಯ ಪರಿಸ್ಥಿತಿ



ಸಿದ್ದರಾಮಯ್ಯ

ಮೈಸೂರು, ಅ.21(ಬಿಎಲ್‌ಯು) ಮುಡಾ ಹಗರಣದ ಆರೋಪ ಎದುರಿಸುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಅವರ ಪತ್ನಿ ಪಾರ್ವತಿ ಅವರಿಗೆ ಲೋಕಾಯುಕ್ತರು ಶೀಘ್ರವೇ ಸಮನ್ಸ್ ಜಾರಿ ಮಾಡುವ ಸಾಧ್ಯತೆ ಇದೆ.

ದಾಖಲಾತಿ ಸಮೇತ ವಿಚಾರಣೆಯಲ್ಲಿ ಪಾಲ್ಗೊಳ್ಳುವಂತೆ ಸಿದ್ದರಾಮಯ್ಯ ಹಾಗೂ ಪಾರ್ವತಿ ಅವರಿಗೆ ಲೋಕಾಯುಕ್ತರು ಇಷ್ಟರಲ್ಲೆ ಸಮನ್ಸ್ ನೀಡಲಿದ್ದಾರೆ ಎಂದು ತಿಳಿದು ಬಂದಿದೆ.

ಸಿದ್ದರಾಮಯ್ಯ ಪತ್ನಿ ಪಾರ್ವತಿ ಈ ತನಕ ಸಾರ್ವಜನಿಕವಾಗಿ ಎಲ್ಲೂ ಕಾಣಿಸಿಕೊಂಡಿಲ್ಲ. ಬಹಳಷ್ಟು ಜನರಿಗೆ ಪಾರ್ವತಿಯವರ ಮುಖ ಪರಿಚಯವಿಲ್ಲ.

ಆದರೆ ಈಗ ಪಾರ್ವತಿ ಅವರು ಅನಿವಾರ್ಯವಾಗಿ ವಿಚಾರಣೆಯಲ್ಲಿ ಭಾಗಿಯಾಗಬೇಕಾಗುತ್ತದೆ. ಆದರೆ ಮುಖ್ಯಮಂತ್ರಿ ಸ್ಥಾನದಲ್ಲಿರುವ ಸಿದ್ದರಾಮಯ್ಯ ಹಾಗೂ ಪಾರ್ವತಿ ಅವರನ್ನು ಲೋಕಾಯುಕ್ತರು ಕಚೇರಿಗೆ ಕರೆಸಿ ವಿಚಾರಣೆ ಮಾಡುತ್ತಾರೋ ಇಲ್ಲ ಅವರ ಮನೆ, ಕಚೇರಿಗೆ ಹೋಗಿ ವಿಚಾರಣೆ ಮಾಡುತ್ತಾರೋ ಎಂಬ ಕುತೂಹಲವಿದೆ. ಲೋಕಾಯುಕ್ತ ಸ್ವತಂತ್ರ ತನಿಖಾ ಸಂಸ್ಥೆಯಾದರೂ ಇದರ ಅಧಿಕಾರಿಗಳು ರಾಜ್ಯ ಸರ್ಕಾರದ ಅಧೀನದಲ್ಲೆ ಇರುತ್ತಾರೆ. ಲೋಕಾಯುಕ್ತ ಪೊಲೀಸರನ್ನು ವರ್ಗಾವಣೆ ಮಾಡುವ, ನಿಯೋಜಿಸುವ ಅಧಿಕಾರ ರಾಜ್ಯ ಸರ್ಕಾರಕ್ಕೆ ಇದೆ. ಇದರಿಂದ ಮುಖ್ಯಮಂತ್ರಿ ಆದವರಿಗೆ ನೋಟಿಸ್ ಜಾರಿ ಮಾಡಿ ಕಚೇರಿಗೆ ಕರೆಸಿ ವಿಚಾರಣೆ ನಡೆಸುವ ಸಂಬಂಧ ಜಿಜ್ಞಾಸೆ ಲೋಕಾಯುಕ್ತರನ್ನು ಕಾಡುತ್ತಿದೆ. ಒಂದು ವೇಳೆ ಕಚೇರಿಗೆ ಬಂದು ವಿಚಾರಣೆ ಎದುರಿಸುವಂತೆ ಸಮನ್ಸ್ ನೀಡಿದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕೆಂಗಣ್ಣಿಗೆ ಗುರಿಯಾಗುತ್ತೇವೆಯೇ ಎಂಬ ಅಂಜಿಕೆ ಲೋಕಾಯುಕ್ತರನ್ನು ಕಾಡುತ್ತಿದೆ.

ಸಿದ್ದರಾಮಯ್ಯ ಅವರ ಮನೆ ಅಥವಾ ಕಚೇರಿಗೇ ಹೋಗಿ ವಿಚಾರಣೆ ಮಾಡಿದರೆ ಪ್ರಭಾವಿಯಾದವರಿಗೆ ಒಂದು ಕಾನೂನು ಜನಸಾಮಾನ್ಯರಿಗೆ ಒಂದು ಕಾನೂನಾ ಎಂದು ಸಾರ್ವಜನಿಕವಾಗಿ ಟೀಕೆ ಎದುರಿಸಬೇಕಾಗುತ್ತದೆ ಎಂಬುದು ಲೋಕಾಯುಕ್ತರನ್ನು ಕಾಡುತ್ತಿದೆ. ಈ ಹಿನ್ನೆಲೆಯಲ್ಲಿ ಯಾವ ರೀತಿ ಮುಂದುವರೆಯಬೇಕು ಎಂದು ಲೋಕಾಯುಕ್ತ ಎಡಿಜಿಪಿ ಅವರ ಸಲಹೆಯನ್ನು ಎಸ್ಪಿ ಉದೇಶ್ ಕೇಳಿದ್ದಾರೆ ಎಂದು ತಿಳಿದು ಬಂದಿದೆ.

ಹುಸಿ ಬಾಂಬ್ ಬೆದರಿಕೆ : ದುಷ್ಕರ್ಮಿಗಳು ವಿಮಾನದಲ್ಲಿ ಪ್ರಯಾಣಿಸದಂತೆ ನಿರ್ಬಂಧಕ್ಕೆ ಸರ್ಕಾರ ನಿರ್ಧಾರ

ನವದೆಹಲಿ: ವಿಮಾನಯಾನ ಸಂಸ್ಥೆಗಳಿಗೆ ಬಾಂಬ್ ಬೆದರಿಕೆ ಹಾಕುವ ದುಷ್ಕರ್ಮಿಗಳು ವಿಮಾನದಲ್ಲಿ ಪ್ರಯಾಣಿಸದಂತೆ ನಿಯಮಗಳಿಗೆ ತಿದ್ದುಪಡಿ ತರಲು ಸರ್ಕಾರ ಮುಂದಾಗಿದೆ ಎಂದು ಕೇಂದ್ರ ನಾಗರಿಕ ವಿಮಾನಯಾನ ಸಚಿವ ಕೆ.ರಾಮಮೋಹನ್ ನಾಯ್ಡು ಸೋಮವಾರ ಹೇಳಿದ್ದಾರೆ. ಅಕ್ಟೋಬರ್ 14 ರಿಂದ ಏಳು ದಿನಗಳಲ್ಲಿ ಸುಮಾರು 100 ವಿಮಾನಗಳಿಗೆ ಬಾಂಬ್ ಬೆದರಿಕೆಗಳು ಬಂದಿವೆ. ಎಲ್ಲಾ ಬೆದರಿಕೆಗಳು ಹುಸಿ ಎಂಬುದು ನಂತರ ದೃಢಪಟ್ಟಿವೆ.

ರಾಷ್ಟ್ರ ರಾಜಧಾನಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ನಾಯ್ಡು, ನಾಗರಿಕ ವಿಮಾನಯಾನ ಸುರಕ್ಷತೆ ವಿರುದ್ಧ ಕಾನೂನುಬಾಹಿರ ಚಟುವಟಿಕೆಗಳ ನಿಗ್ರಹ ಕಾಯ್ದೆ 1982 ಮತ್ತು ವಾಯುಯಾನ ಭದ್ರತಾ ನಿಯಮಗಳಿಗೆ ತಿದ್ದುಪಡಿ ತರಲು ಯೋಜಿಸಲಾಗಿದೆ. ವಿಮಾನಗಳಿಗೆ ಬಾಂಬ್ ಬೆದರಿಕೆಯ ಪರಿಸ್ಥಿತಿ ಕುರಿತು ಗೃಹ ವ್ಯವಹಾರಗಳ ಸಚಿವಾಲಯದೊಂದಿಗೆ ನಾಗರಿಕ ವಿಮಾನಯಾನ ಸುರಕ್ಷತೆ ಬ್ಯೂರೋ ನಿರಂತರವಾಗಿ ಸಂಪರ್ಕ ಹೊಂದಿದೆ ಎಂದು ತಿಳಿಸಿದರು.

ಬೆದರಿಕೆಗಳು ಹುಸಿಯಾಗಿದ್ದರೂ, ವಿಮಾನಯಾನ ಇಲಾಖೆ ಮತ್ತು ವಿಮಾನಯಾನ ಸಂಸ್ಥೆಗಳು ಈ ವಿಷಯವನ್ನು ಲಘುವಾಗಿ ಪರಿಗಣಿಸಿಲ್ಲ. ಕಟ್ಟುನಿಟ್ಟಾದ ಶಿಷ್ಟಾಚಾರವನ್ನು ಅನುಸರಿಸುತ್ತಿವೆ. ಇಂತಹ ಬೆದರಿಕೆಗಳು ಬಂದಾಗ ಇದು ಅತ್ಯಂತ ಸೂಕ್ಷ್ಮ ಪರಿಸ್ಥಿತಿಯಾಗಿದ್ದು, ಅಂತಾರಾಷ್ಟ್ರೀಯ ಶಿಷ್ಟಾಚಾರವನ್ನು ಅನುಸರಿಸಲಾಗುವುದು ಎಂದರು.

ಕಳೆದ ವಾರ 8 ವಿಮಾನಗಳ ಪ್ರಯಾಣವನ್ನು ಬೇರೆಡೆಗೆ ತಿರುಗಿಸಲಾಗಿತ್ತು. ಪ್ರತಿಯೊಂದು ಬೆದರಿಕೆಯನ್ನು ಪ್ರತ್ಯೇಕವಾಗಿ ನಿರ್ಣಯಿಸಲಾಗುತ್ತದೆ. ನಮ್ಮ ಪ್ರತಿಕ್ರಿಯೆಯು ಸಮರ್ಥ ಮತ್ತು ಕ್ರಿಯಾತ್ಮಕವಾಗಿದೆ. ಸುರಕ್ಷತೆ ಮತ್ತು ಭದ್ರತೆ ವಿಚಾರದಲ್ಲಿ ನಾವು ರಾಜೀ ಮಾಡಿಕೊಳ್ಳುವುದಿಲ್ಲ. ಅವುಗಳಲ್ಲಿ ಬಹುತೇಕ ಹುಸಿ ಬೆದರಿಕೆಯಾಗಿದ್ದರೂ ಅವುಗಳನ್ನು ಲಘುವಾಗಿ ತೆಗೆದುಕೊಂಡಿಲ್ಲ. ಪ್ರಯಾಣಿಕರ ಜೀವ, ಭದ್ರತೆ ಪರಿಸ್ಥಿತಿ ಮತ್ತು ಶಿಷ್ಟಾಚಾರ ಪ್ರಮುಖವಾಗಿದೆ. ವಿಮಾನ ನಿಲ್ದಾಣಗಳಲ್ಲಿ ಭದ್ರತೆ ಹೆಚ್ಚಿಸಲಾಗುವುದು ಎಂದು ಸಚಿವರು ತಿಳಿಸಿದರು. ಬೆದರಿಕೆ ಹಿಂದೆ ಸಂಚು ಇದೆಯೇ ಎಂಬ ಪ್ರಶ್ನೆಗೆ ಉತ್ತರಿಸಿದ ಸಚಿವರು, ತನಿಖೆ ನಡೆಯುತ್ತಿದೆ. ನಿರ್ದಿಷ್ಟವಾದ ಯಾವುದೇ ಹೇಳಿಕೆ ನೀಡಲು ಸಾಧ್ಯವಿಲ್ಲ. ಪ್ರಯಾಣಿಕರ ಸುರಕ್ಷತೆ ಮತ್ತು ಭದ್ರತೆ ಆದ್ಯತೆಯಾಗಿದೆ ಎಂದು ಅವರು ಹೇಳಿದರು.

ಮಳೆ–ಗಾಳಿಗೆ ದಸರಾ ವಸ್ತುಪ್ರದರ್ಶನದಲ್ಲಿ ಭಾರಿ ಫುಡ್‌ಸ್ಟಾಲ್ ಕುಸಿದು ಅಪಾರ ನಷ್ಟ

ವಿದ್ಯುತ್ ತಂತಿ ಕಡಿತ; ಮುನ್ನೆಚ್ಚರಿಕೆಯಾಗಿ ವಸ್ತುಪ್ರದರ್ಶನ ಗೇಟ್ ಬಂದ್



ಮಳೆ–ಗಾಳಿಗೆ ಕುಸಿದು ಬಿದ್ದಿರುವ ಮಲ್ಲಿಗೆ ಇಡ್ಲಿ ಫುಡ್‌ಸ್ಟಾಲ್

ಎಂದಿನಂತೆ ವಸ್ತುಪ್ರದರ್ಶನ ಇರಲಿದೆ...

ಜೋರು ಗಾಳಿ–ಮಳೆಗೆ ಮಲ್ಲಿಗೆ ಇಡ್ಲಿ ಆಹಾರ ಮಳಿಗೆ ಕುಸಿದು ಬಿದ್ದಿದೆ. ಅಲ್ಲದೆ ಕೆಲವೆಡೆ ವಿದ್ಯುತ್ ತಂತಿಗಳು ತುಂಡಾಗಿದ್ದರಿಂದ ಮುನ್ನೆಚ್ಚರಿಕಾ ಕ್ರಮವಾಗಿ ದಿನದ ಮಟ್ಟಿಗೆ ವಸ್ತುಪ್ರದರ್ಶನ ಸ್ಥಗಿತಗೊಳಿಸಿದ್ದು, ನಾಳೆಯಿಂದ ಎಂದಿನಂತೆ ಮಧ್ಯಾಹ್ನ 3 ಗಂಟೆಯಿಂದ ವೀಕ್ಷಣೆಗೆ ಅವಕಾಶವಿರಲಿದೆ. ಹಾಗೆಯೇ ಮಳೆಯಿಂದ ಅಲ್ಲಲ್ಲಿ ನಿಂತಿದ್ದ ನೀರನ್ನು ಹೊರಹಾಕಿದ್ದು, ಜನರಿಗೆ ಅನುಕೂಲ ಮಾಡಿಕೊಡಲಾಗಿದೆ.

– **ಅಯೂಬ್ ಖಾನ್,** ಅಧ್ಯಕ್ಷ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ

ಮೈಸೂರು, ಅ.21(ಎಂಕೆ)– ಮೈಸೂರು ದಸರಾ ವಸ್ತುಪ್ರದರ್ಶನದಲ್ಲಿ ಭಾರಿ ಮಳೆ–ಗಾಳಿಗೆ ಬೃಹತ್ ಫುಡ್‌ಸ್ಟಾಲ್ ಕುಸಿದು ಬಿದ್ದಿದೆ. ಅದೃಷ್ಟವಶಾತ್ ಯಾವುದೇ ಪ್ರಾಣಹಾನಿಯಾಗಿಲ್ಲ.

ಮೈಸೂರು ನಗರದಾದ್ಯಂತ ಸೋಮವಾರ ಸುರಿದ ಮಳೆಯ ಅಬ್ಬರಕ್ಕೆ ದಸರಾ ವಸ್ತುಪ್ರದರ್ಶನ ಅಕ್ಷರಶಃ ನಲುಗಿದ್ದು, ವಸ್ತುಪ್ರದರ್ಶನ ಆವರಣದಲ್ಲಿದ್ದ ಮಲ್ಲಿಗೆ ಇಡ್ಲಿ ಫುಡ್‌ಸ್ಟಾಲ್ ಕುಸಿದು ಬಿದ್ದಿದೆ. ಮಳಿಗೆಯೊಳಗಿದ್ದ 15 ಕ್ಕೂ ಹೆಚ್ಚು ಕಾರ್ಮಿಕರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಹಾಗೆಯೇ ಕೆಲ ಶೆಡ್‌ಗಳಿಗೂ ಹಾನಿಯಾಗಿದ್ದು, ವಿದ್ಯುತ್ ತಂತಿಗಳು ತುಂಡಾಗಿದ್ದವು.

ವಿಷಯ ತಿಳಿದ ಕೂಡಲೇ ಸ್ಥಳಕ್ಕಾಗಮಿಸಿದ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಸಿಇಓ ರುದ್ರೇಶ್ ಹಾಗೂ ಗುತ್ತಿಗೆದಾರರು ಕುಸಿದ ಮಲ್ಲಿಗೆ ಇಡ್ಲಿ ಮಳಿಗೆ ಮಾಲೀಕರಿಂದ ಘಟನೆಯ ಮಾಹಿತಿ ಪಡೆದು, ಆರ್ಥಿಕ ನಷ್ಟಕ್ಕೆ ನೆರವಾಗುವ ಭರವಸೆ ನೀಡಿದರು.

ಗೇಟ್ ಬಂದ್: ಗಾಳಿ–ಮಳೆಯಿಂದ ಕೆಲವೆಡೆ ವಿದ್ಯುತ್ ತಂತಿಗಳು ತುಂಡಾಗಿದ್ದರಿಂದ ಮುನ್ನೆಚ್ಚರಿಕಾ ಕ್ರಮವಾಗಿ ವಿದ್ಯುತ್ ಸಂಪರ್ಕ ಕಡಿತಗೊಳಿಸಿ, ದಿನದ ಮಟ್ಟಿಗೆ ದಸರಾ ವಸ್ತುಪ್ರದರ್ಶನದ ಗೇಟ್ ಬಂದ್ ಮಾಡಲಾಯಿತು. ಅಷ್ಟರಲ್ಲಾಗಲೇ ಒಳಗಡೆ ಬಂದಿದ್ದವರು ತೀವ್ರ ನಿರಾಸೆಯೊಂದಿಗೆ ವಾಪಸ್ ತೆರಳುವಂತಾಯಿತು.

ಆರ್ಥಿಕ ನೆರವು: ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ವಸ್ತುಪ್ರದರ್ಶನ ಪ್ರಾಧಿಕಾರದ ಸಿಇಓ ರುದ್ರೇಶ್, ಮಲ್ಲಿಗೆ ಇಡ್ಲಿ ಮಳಿಗೆ ಪ್ರತ್ಯೇಕವಾಗಿದ್ದು, ಭಾರಿ ಗಾಳಿ–ಮಳೆಗೆ ಕುಸಿದು ಬಿದ್ದಿದೆ. ಅದೃಷ್ಟವಶಾತ್ ಯಾವುದೇ ಪ್ರಾಣಹಾನಿಯಾಗಿಲ್ಲ. ಮಳಿಗೆಯಲ್ಲಿದ್ದ ಅಡುಗೆ ಪದಾರ್ಥಗಳನ್ನು ಗೋಡೌನ್‌ನಲ್ಲಿರಿಸಿದ್ದೇವೆ. ಮಳಿಗೆ ಮಾಲೀಕರಿಗೆ ನಷ್ಟವಾಗಿದ್ದು, ನಾಳೆ(ಅ.22) ಅಧ್ಯಕ್ಷರ ನೇತೃತ್ವದಲ್ಲಿ ಸಭೆ ನಡೆಸಿ ಉಂಟಾಗಿರುವ ನಷ್ಟಕ್ಕೆ ಪರಿಹಾರ ಕಲ್ಪಿಸುವ ಪ್ರಯತ್ನ ಮಾಡಲಾಗುವುದು. ಅಲ್ಲದೆ ಎಲ್ಲಾ ಸ್ಟಾಲ್‌ಗಳಿಗೂ ಇನ್ಷೂರೆನ್ಸ್ ಮಾಡಿಸಿರುವುದರಿಂದ ಅನುಕೂಲವಾಗಲಿದೆ ಎಂದು ತಿಳಿಸಿದರು.

15 ಲಕ್ಷ ರೂನಷ್ಟ ಕುಸಿದಿರುವ ಮಳಿಗೆ ನಿರ್ಮಾಣ ಹಾಗೂ ಮಳಿಗೆಯಲ್ಲಿದ್ದ ಅಡುಗೆ ಪದಾರ್ಥಗಳೆಲ್ಲವೂ ಸೇರಿ ಸುಮಾರು 15 ಲಕ್ಷರೂನಷ್ಟಾಗಿದೆ ಗುತ್ತಿಗೆದಾರರು, ಪ್ರಾಧಿಕಾರ ಸಹಕಾರ ನೀಡುವ ಭರವಸೆ ನೀಡಿದ್ದಾರೆ. ಒಂದೆರಡು ದಿನಗಳಲ್ಲಿ ಮಳಿಗೆಯನ್ನು ಹೊಸದಾಗಿ ನಿರ್ಮಿಸಲಾಗುವುದು ಎಂದು ಮಳಿಗೆ ಮಾಲೀಕ ರಾಯಲ್ ಟ್ರೇಡರ್ಸ್‌ನ ನಾತಿಕ್ ಅಹಮದ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಮೂಲಸೌಕರ್ಯ ಕೊರತೆ

ವಿವಿಧ ಬಡಾವಣೆ ನಿವಾಸಿಗಳಿಂದ ಬೋಗಾದಿ ಪಪಂ ಅಧಿಕಾರಿಗಳ ವಿರುದ್ಧ ಪ್ರತಿಭಟನೆ



ಯುಜಿಡಿ ಸಮಸ್ಯೆ ನಿವಾರಣೆ, ಮೂಲಸೌಕರ್ಯ ಒದಗಿಸುವಲ್ಲಿ ವಿಫಲರಾಗಿರುವ ಇಲ್ಲಿನ ಅಧಿಕಾರಿಗಳ ವಿರುದ್ಧ ವಿವಿಧ ಬಡಾವಣೆ ನಿವಾಸಿಗಳು ರೂಪನಗರ ಉದ್ಯಾನವನದಲ್ಲಿನ ಎಸ್‌ಟಿಪಿ ಪ್ಲಾಂಟ್ ಬಳಿ ಸೋಮವಾರ ಪ್ರತಿಭಟನೆ ನಡೆಸಿದರು.

ಮೈಸೂರು, ಅ.21(ಎಸ್‌ಪಿಎನ್)– ಬೋಗಾದಿ ಪಟ್ಟಣ ಪಂಚಾಯ್ತಿ ವ್ಯಾಪ್ತಿಯ ಬಡಾವಣೆಯಲ್ಲಿನ ಯುಜಿಡಿ ಸಮಸ್ಯೆ, ಮೂಲಸೌಕರ್ಯ ಒದಗಿಸುವಲ್ಲಿ ವಿಫಲರಾಗಿರುವ ಇಲ್ಲಿನ ಅಧಿಕಾರಿಗಳ ವಿರುದ್ಧ ರೂಪನಗರ, ರವಿಶಂಕರ, ಕಾವೇರಿ ಗ್ರಾಮೀಣ ಬ್ಯಾಂಕ್ ಬಡಾವಣೆ ನಿವಾಸಿಗಳು ರೂಪನಗರ ಉದ್ಯಾನವನದಲ್ಲಿನ ಎಸ್‌ಟಿಪಿ ಪ್ಲಾಂಟ್ ಬಳಿ ಸೋಮವಾರ ಪ್ರತಿಭಟನೆ ನಡೆಸಿದರು.

ಪ್ರತಿಭಟನೆಯಲ್ಲಿ ಪಟ್ಟಣ ಪಂಚಾಯ್ತಿ ಅಧಿಕಾರಿಗಳ ವಿರುದ್ಧ ಫಲಕಗಳನ್ನು ಪ್ರದರ್ಶಿಸಿ, ವಿವಿಧ ಘೋಷಣೆಗಳನ್ನು ಕೂಗಿದರು. ನಂತರ ಮಾತನಾಡಿದ ಪ್ರತಿಭಟನಾಕಾರರು, ಪಟ್ಟಣ ಪಂಚಾಯ್ತಿ ವ್ಯಾಪ್ತಿಯ ಬಡಾವಣೆಗಳಲ್ಲಿ ಯುಜಿಡಿ ನಿರ್ವಹಣೆ ಸರಿಯಿಲ್ಲ. ಮನೆಮನೆ ಕಸ ಸಂಗ್ರಹಕ್ಕೆ ಸರಿಯಾದ ವೇಳೆಗೆ ಪೌರಕಾರ್ಮಿಕರು ಬರುತ್ತಿಲ್ಲ. ಇತರೆ ಮೂಲಭೂತ ಸಮಸ್ಯೆ ಬಗೆಹರಿಸುವಂತೆ ಅಧಿಕಾರಿಗಳಲ್ಲಿ ಹಲವು ಬಾರಿ ಮನವಿ ಮಾಡಿದರೂ ಇಲ್ಲಿನ ಯಾವುದೇ ಕಾಮಗಾರಿಗೆ ಅನುದಾನ ಇಲ್ಲ ಎಂಬ ಸಬೂಬು ಹೇಳಿ ತಪ್ಪಿಸಿಕೊಳ್ಳುತ್ತಿದ್ದಾರೆ ಎಂದು ಆರೋಪಿಸಿದರು.

ಕೆಜಿಬಿ ಬಡಾವಣೆಯಲ್ಲಿನ ಯುಜಿಡಿ ಸಮಸ್ಯೆಯಿಂದಾಗಿ ಈ ಕೊಳಚೆ ನೀರು ರೂಪನಗರದ ಪಾರ್ಕ್‌ನಲ್ಲಿನ ಎಸ್‌ಟಿಪಿ ಪ್ಲಾಂಟ್ ತುಂಬಿಕೊಂಡು ಪಾರ್ಕ್‌ಗೆ ಹೊಂದಿಕೊಂಡಂತಿರುವ ರಸ್ತೆಗೆ ಉಕ್ಕಿ ಹರಿಯುತ್ತಿದೆ. ಇದರಿಂದ ಸಾಂಕ್ರಾಮಿಕ ರೋಗಗಳು ಹರಡುವ ಭೀತಿ ಎದುರಾಗಿದೆ. ಇದು ಸುತ್ತಮುತ್ತಲ ಬಡಾವಣೆಗಳಾದ ರೂಪನಗರ, ರವಿಶಂಕರ ಬಡಾವಣೆ ಸೇರಿದಂತೆ ಇತರೆ ಬಡಾವಣೆ ಜನರಿಗೂ ಹರಡುವ ಸಾಧ್ಯತೆ ಇದ್ದು, ಈ ಸಮಸ್ಯೆ ಬಗೆಹರಿಸಲು ಇಲ್ಲಿನ ಅಧಿಕಾರಿಗಳು ವಿಫಲರಾಗಿದ್ದಾರೆ ಎಂದು ಆರೋಪಿಸಿದರು.

ಈ ಸಮಸ್ಯೆ ಬಗೆಹರಿಸುವಂತೆ ಪಟ್ಟಣ ಪಂಚಾಯ್ತಿ ಅಧಿಕಾರಿಗಳು ಕಳೆದ ಮೂರು ವರ್ಷಗಳಿಂದ ದೂರು ನೀಡುತ್ತಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಹಾಗಾಗಿ ಮೂಲ ಸೌಕರ್ಯ ಒದಗಿಸಲು ವಿಫಲರಾಗಿರುವ ಅಧಿಕಾರಿಗಳ ವಿರುದ್ಧ ಪ್ರತಿಭಟನೆ ಅನಿವಾರ್ಯ ಎಂದರು. ಈ ವೇಳೆ ಸಾಮಾಜಿಕ ಹೋರಾಟಗಾರರಾದ ಕೆ.ವಿನಯ್ ಕುಮಾರ್, ಚೇತನಗೌಡ, ಕೇಬಲ್ ಮಹೇಶ್, ಲೋಕೇಶ್, ರವಿಶಂಕರ್ ಬಡಾವಣೆಯ ಪ್ರಕಾಶ್, ಗೌರಮ್ಮ ಪುರುಷೋತ್ತಮ್, ಪ್ರಮೋದ್, ಸಹನ, ತಾಯಮ್ಮ ಸೇರಿದಂತೆ ಇತರರಿದ್ದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಸೋಮವಾರ ಮೈಸೂರಿಗೆ ಆಗಮಿಸುವ ಹಿನ್ನೆಲೆಯಲ್ಲಿ ಬೋಗಾದಿ ಪಟ್ಟಣ ಪಂಚಾಯ್ತಿ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಲು ಪೊಲೀಸ್ ಇಲಾಖೆ ಅನುಮತಿ ನೀಡಿಲ್ಲ. ಹಾಗಾಗಿ ಮಂಗಳವಾರ ಬೋಗಾದಿ ಪಟ್ಟಣ ಪಂಚಾಯ್ತಿ ಮುಂಭಾಗ ಸಮಸ್ಯೆ ಬಗೆಹರಿಸುವವರೆಗೂ ಪ್ರತಿಭಟನೆ ನಡೆಸುತ್ತೇವೆ.

– ರೂಪನಗರ, ರವಿಶಂಕರನಗರ ನಿವಾಸಿಗಳು

ಮಾದಾಪುರದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಉದ್ಘಾಟನೆ

ಪ್ರತಿಯೊಬ್ಬರೂ ಆರೋಗ್ಯ, ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿ: ಶಾಸಕ ಅನಿಲ್ ಚಿಕ್ಕಮಾದು



ಮಾದಾಪುರದಲ್ಲಿ ನೂತನ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಶಾಸಕ ಅನಿಲ್ ಉದ್ಘಾಟಿಸಿದರು.

ಹೆಚ್.ಡಿ.ಕೋಟೆ, ಅ.21– ಪ್ರತಿಯೊಬ್ಬರೂ ಆರೋಗ್ಯ, ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಬೇಕು ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ತಾಲೂಕಿನ ಮಾದಾಪುರದಲ್ಲಿ ಆರೋಗ್ಯ ಇಲಾಖೆಯಿಂದ 1.80 ಕೋಟಿ ರೂ. ವೆಚ್ಚದಲ್ಲಿ ಸುಸಜ್ಜಿತವಾಗಿ ನಿರ್ಮಿಸಿರುವ ನೂತನ ಪ್ರಾಥಮಿಕ ಆರೋಗ್ಯ ಕೇಂದ್ರ ಉದ್ಘಾಟಿಸಿ ಮಾತನಾಡಿದ ಅವರು, ಮಾದಾಪುರ ಹಾಗೂ ಸುತ್ತಮುತ್ತಲ ಗ್ರಾಮಗಳ ಜನತೆಯ ಆರೋಗ್ಯ ಹಿತದೃಷ್ಟಿಯಿಂದ ಒಂದು ಸುಸಜ್ಜಿತ ಆಸ್ಪತ್ರೆ ನಿರ್ಮಾಣ ಮಾಡಬೇಕು ಎಂಬ ನಿಟ್ಟಿನಲ್ಲಿ ನೂತನ ಆಸ್ಪತ್ರೆ ನಿರ್ಮಾಣ ಮಾಡಲಾಗಿದೆ. ಮುಂದಿನ ದಿನಗಳಲ್ಲಿ ಆಸ್ಪತ್ರೆಯಲ್ಲಿ ಉತ್ತಮ ಚಿಕಿತ್ಸೆ ದೊರಕಿಸಿಕೊಡುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗುತ್ತದೆ ಎಂದರು.

ಜಿಲ್ಲಾ ಆರೋಗ್ಯಾಧಿಕಾರಿ ಕುಮಾರ ಸ್ವಾಮಿ ಮಾತನಾಡಿ, ಕಳೆದ ಒಂದು ವರ್ಷದ ಅವಧಿಯಲ್ಲಿ ತಾಲೂಕಿಗೆ ಅವಶ್ಯವಿದ್ದ ರೇಡಿಯೋಲಜಿ ಬೇಡಿಕೆಯನ್ನು ಈಡೇರಿಸಲಾಗಿದೆ. ಕಳೆದ 10 ತಿಂಗಳ ಅವಧಿಯಲ್ಲಿ 1200ಕ್ಕೂ ಹೆಚ್ಚಿನ ಹೆರಿಗೆಯನ್ನು ಯಾವುದೇ ತೊಂದರೆ ಇಲ್ಲದಂತೆ ಮಾಡಿಸಲಾಗಿದೆ. ಅಲ್ಲದೇ ಆರೋಗ್ಯ ಯೋಜನೆಯಡಿ ಮನೆ ಮನೆಗೆ ತೆರಳಿ ರಕ್ತದೊತ್ತಡ ಮತ್ತು ಮಧುಮೇಹ ತಪಾಸಣೆ ಮಾಡಲು ನಿರ್ಧರಿಸಲಾಗಿದೆ. ಮುಂದಿನ ದಿನಗಳಲ್ಲಿ ಯೋಜನೆ ಪ್ರಾರಂಭವಾಗಲಿದೆ ಎಂದರು.

ತಾಲೂಕು ಆರೋಗ್ಯಾಧಿಕಾರಿ ಟಿ.ರವಿಕುಮಾರ್ ಮಾತನಾಡಿ, ಮೈಸೂರು–ಮಾನಂದವಾಡಿ ರಸ್ತೆಯಲ್ಲಿರುವ ಮಾದಾಪುರ ಗ್ರಾಮ ವ್ಯಾಪ್ತಿಯಲ್ಲಿ 9 ಸಾವಿರಕ್ಕೂ ಹೆಚ್ಚಿನ ಜನಸಂಖ್ಯೆ ಇರುವ ಹಿನ್ನೆಲೆಯಲ್ಲಿ ಈ ಭಾಗಕ್ಕೆ ಒಂದು ಉತ್ತಮ ಆಸ್ಪತ್ರೆ ಅಗತ್ಯವಿದ್ದ ಕಾರಣ 1.80 ಕೋಟಿ ರೂ. ವೆಚ್ಚದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ನಿರ್ಮಿಸಲಾಗಿದ್ದು, ಶಸ್ತ್ರಚಿಕಿತ್ಸಾ ಕೊಠಡಿ, ಪುರುಷರ ವಾರ್ಡ್, ಮಹಿಳೆಯರ ವಾರ್ಡ್, ಹೆರಿಗೆ ಕೊಠಡಿ, 3 ಹಾಸಿಗೆಯುಳ್ಳ ಪ್ರತ್ಯೇಕ ವಾರ್ಡ್‌ಗಳುಳ್ಳ ಕೊಠಡಿಗಳನ್ನು ನಿರ್ಮಿಸ ಲಾಗಿದೆ. ಕಚೇರಿ, ಲ್ಯಾಬ್, ಶೌಚಾಲಯ ಸೇರಿದಂತೆ ಉತ್ತಮ ರೀತಿ ಆಸ್ಪತ್ರೆ ನಿರ್ಮಾಣಗೊಂಡಿದ್ದು ಉತ್ತಮ ಸೇವೆ ನೀಡಲಿದೆ. ಈ ಆಸ್ಪತ್ರೆಗೆ ಸಿಬ್ಬಂದಿಗಳ ಕೊರತೆ ಇದ್ದು, ಅದನ್ನು ಮುಂದಿನ ದಿನಗಳಲ್ಲಿ ಶಾಸಕ ಅನಿಲ್ ಅವರು ಸರ್ಕಾರದ ಗಮನ ಸೆಳೆದು ಭರ್ತಿ ಮಾಡಿಸಬೇಕು ಎಂದು ಮನವಿ ಮಾಡಿದರು.

ಈ ವೇಳೆ ತಹಸೀಲ್ದಾರ್ ಶ್ರೀನಿವಾಸ್, ಇಓ ಧರಣೇಶ್, ಇನ್ಸ್‌ಪೆಕ್ಟರ್ ಶಬ್ಬೀರ್ ಹುಸೇನ್, ಡಾ.ಚಂದ್ರಕಲಾ, ಮಾದಾಪುರ ಗ್ರಾಪಂ ಅಧ್ಯಕ್ಷ ಮಹೇಶ್ ನಾಯಕ್, ಉಪಾಧ್ಯಕ್ಷೆ ಮಂಗಳಮ್ಮ, ಹೈರಿಗೆ ಗ್ರಾಪಂ ಅಧ್ಯಕ್ಷೆ ಜಯ ನಾಗರಾಜು, ಉಪಾಧ್ಯಕ್ಷ ಶ್ರೀಧರ್, ಮುಖಂಡರಾದ ಮಲ್ಲೇಶ್, ನಾಗೇಶ್, ಚಿಕ್ಕನಾಯಕ, ಜವರಯ್ಯ, ಕಾಳಪ್ಪ, ಅನಿತಾ, ಶಿವಮಲ್ಲು, ಸುಧಾ, ಚನ್ನಸ್ವಾಮಿ, ರಾಜನಾಯಕ, ಮಾದಪ್ಪ, ಮಲ್ಲು, ರವಿಕುಮಾರ್, ಶಿವಣ್ಣ, ದೇವಮಣಿ, ದಿನೇಶ್, ಮಂಚಯ್ಯ, ಮುದ್ದುಮಲ್ಲೇಶ್, ಮಾದಯ್ಯನಾಯಕ, ಲಿಂಗನಾಯಕ, ದಿನೇಶ್, ಮಹೇಶ, ರಂಗಯ್ಯ, ಸಣ್ಣಸ್ವಾಮಿ ನಾಯಕ, ರಮೇಶ್ ನಾಯಕ, ನಂಜನಾಯ್ಕ, ಸಣ್ಣಮಲ್ಲ ನಾಯಕ, ನಿಂಗರಾಜು, ಶಿವಣ್ಣ, ಲಿಂಗನಾಯಕ, ಗ್ರಾಮದ ಮುಖಂಡರು, ಆಸ್ಪತ್ರೆ ಸಿಬ್ಬಂದಿ ವರ್ಗ, ಅಧಿಕಾರಿ ವರ್ಗ ಹಾಜರಿದ್ದರು.

> ಜಿಲ್‌ಆರ್ ವತಿಯಿಂದ ಮಾದಾಪುರ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಉಚಿತವಾಗಿ ಸುಸಜ್ಜಿತ ಆಂಬುಲೆನ್ಸ್ ನೀಡಲಾಗುವುದು. ಅಲ್ಲದೇ ಗ್ರಾಮದಲ್ಲಿ ಸರ್ಕಾರ ಆಸ್ಪತ್ರೆ ನಿರ್ಮಿಸಿರುವ ಹಿನ್ನೆಲೆಯಲ್ಲಿ ಈ ಭಾಗದ ಜನತೆ ಆಂಬುಲೆನ್ಸ್ ಹಾಗೂ ಆಸ್ಪತ್ರೆಯನ್ನು ಸದುಪಯೋಗ ಪಡಿಸಿಕೊಳ್ಳಬೇಕು.
> - ಅನಿಲ್ ಚಿಕ್ಕಮಾದು, ಶಾಸಕ.

ಹುಣಸೂರಲ್ಲಿ ಹೆಲ್ಮೆಟ್ ಜಾಗೃತಿ ಜಾಥಾ



ಹುಣಸೂರಿನಲ್ಲಿ ಪೊಲೀಸರು ಹೆಲ್ಮೆಟ್ ಬಗ್ಗೆ ಜಾಗೃತಿ ಮೂಡಿಸಿದರು.

ಹುಣಸೂರು, ಅ.21– ನಗರ ಗ್ರಾಮಾಂತರ ಠಾಣೆ ಪೊಲೀಸರು ಹುಣಸೂರು ನಗರ ಹಾಗೂ ಗ್ರಾಮಾಂತರ ಪ್ರದೇಶ ವ್ಯಾಪ್ತಿಯಲ್ಲಿ ಬೈಕ್ ಜಾಥಾ ಮೂಲಕ ಹೆಲ್ಮೆಟ್ ಬಗ್ಗೆ ಸಾರ್ವಜನಿಕರಿಗೆ ಜಾಗೃತಿ ಮೂಡಿಸಿದರು. ನಗರದ ಡಿವೈಎಸ್‌ಪಿ ಕಚೇರಿ ಆವರಣದಲ್ಲಿ ಬೈಕ್ ಜಾಥಾಕ್ಕೆ ಡಿವೈಎಸ್‌ಪಿ ಗೋಪಾಲ ಕೃಷ್ಣ ಹಾಗೂ ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಹೆಚ್.ಆರ್.ಕೃಷ್ಣಕುಮಾರ್ ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಿದರು.

ದ್ವಿಚಕ್ರ ವಾಹನ ಸವಾರರು ಕಡ್ಡಾಯವಾಗಿ ಹೆಲ್ಮೆಟ್ ಧರಿಸುವ ಜೊತೆಗೆ ಸಂಚಾರಿ ನಿಯಮಗಳನ್ನು ಪಾಲಿಸಿದಲ್ಲಿ ಸಾಕಷ್ಟು ಸಾವು–ನೋವುಗಳನ್ನು ತಪ್ಪಿಸಬಹುದಾಗಿದೆ ಎಂದು ಡಿವೈಎಸ್‌ಪಿ ಗೋಪಾಲಕೃಷ್ಣ ತಿಳಿಸಿದರು. ಗ್ರಾಮಾಂತರ ಠಾಣೆ ಇನ್ಸ್‌ಪೆಕ್ಟರ್ ಮುನಿಯಪ್ಪ ಸಂಚಾರ ನಿಯಮ ಪಾಲಿಸುವ ಹಾಗೂ ಹೆಲ್ಮೆಟ್ ಧರಿಸುವುದಾಗಿ ಪ್ರಮಾಣ ವಚನ ಬೋಧಿಸಿದರು. ಹೆಲ್ಮೆಟ್ ಧರಿಸಿದ್ದ 50ಕ್ಕೂ ಹೆಚ್ಚು ಪೊಲೀಸರಿದ್ದ ಜಾಥಾ ನಗರದ ಕಲ್ಪತರು ಸರ್ಕಲ್, ಸಂವಿಧಾನ ವೃತ್ತ, ಕೋಟೆ ವೃತ್ತ, ಜೆಎಲ್‌ಬಿ ರಸ್ತೆ ವಿಶ್ವೇಶ್ವರಯ್ಯ ವೃತ್ತ, ಟಿಎಪಿಸಿಎಂಎಸ್ ರಸ್ತೆ, ಅರಸು ಪುತ್ಥಳಿ, ಬೈಪಾಸ್ ರಸ್ತೆ, ಕಲ್ಕುಣಿಕೆ ನಗರ, ಕಲ್ಕುಣಿಕೆ ವೃತ್ತದ ಮೂಲಕ ಕಟ್ಟೆಮಳಲವಾಡಿಗೆ ತೆರಳಿ ಅಲ್ಲಿ ಮಾನವ ಸರಪಳಿ ನಿರ್ಮಿಸಿ, ಸಂಚಾರ ನಿಯಮಗಳ ಜಾಗೃತಿ ಕುರಿತ ಕರಪತ್ರ ವಿತರಿಸಿದರು. ಜಾಥಾದಲ್ಲಿ ಇನ್ಸ್‌ಪೆಕ್ಟರ್‌ಗಳಾದ ಸಂತೋಷ್ ಕಶ್ಯಪ್, ಮುನಿಸ್ವಾಮಿ, ಎಸ್‌ಐಗಳಾದ ತಿಮ್ಮರಾಜನಾಯಕ, ಪಾಂಡು, ರಾಮು, ಜಮೀರ್ ಅಹಮದ್, ರಾಧಾ ಸೇರಿದಂತೆ 50ಕ್ಕೂ ಹೆಚ್ಚು ಪೊಲೀಸರಿದ್ದರು.

ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷರಿಗೆ ಸನ್ಮಾನ



ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಎಸ್‌ಎಂಆರ್ ಪ್ರಕಾಶ ಅವರನ್ನು ಸನ್ಮಾನಿಸಲಾಯಿತು.

ತಿ.ನರಸೀಪುರ, ಅ.21– ಪಟ್ಟಣದ ಗುರು ಮಲ್ಲೇಶ್ವರ ವಿದ್ಯಾಸಂಸ್ಥೆ ಆವರಣದಲ್ಲಿ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಎಸ್‌ಎಂಆರ್ ಪ್ರಕಾಶ ಅವರನ್ನು ಅವರ ಅಭಿಮಾನಿಗಳು ಸನ್ಮಾನಿಸಿದರು.

ತಾಲೂಕಿನ ವಾಟಾಳು ಮಠದ ಪೀಠಾಧ್ಯಕ್ಷ ಡಾ.ಸಿದ್ದಲಿಂಗಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಮಹಾಸಭಾ ಅಧ್ಯಕ್ಷ ಪ್ರಕಾಶ್ ಸರಳ ಸಜ್ಜನಿಕೆ ವ್ಯಕ್ತಿಯಾಗಿರುವುದರಿಂದ ಸಮುದಾಯದ ಬಂಧುಗಳು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದ್ದಾರೆ. ಮುಂದಿನ ದಿನಗಳಲ್ಲಿ ಅವರಿಗೆ ಹೆಚ್ಚಿನ ಅಧಿಕಾರ ಸಿಗುವಂತಾಗಲಿ ಎಂದು ಆಶೀರ್ವದಿಸಿದರು.

ಇದೇ ವೇಳೆ ಸಮಾಜದ ಬಡ ವಿದ್ಯಾರ್ಥಿಗಳಿಗೆ ನೆರವಾಗುವ ನಿಟ್ಟಿನಲ್ಲಿ ವೀರಶೈವ ಲಿಂಗಾಯತ ಸಮುದಾಯದ ಹಾಸ್ಟೆಲ್ ತೆರೆದು ಅನುಕೂಲ ಕಲ್ಪಿಸಬೇಕು ಎಂದು ತಿಳಿಸಿದರು. ಈ ವೇಳೆ ಮಾಡ್ರಹಳ್ಳಿ ಮಠದ ಶ್ರೀಶಾಂತ ಮಲ್ಲಿಕಾರ್ಜುನಸ್ವಾಮೀಜಿ, ಮುಡುಕನಪುರ ಮಠಾಧ್ಯಕ್ಷ ಶ್ರೀಷಡಕ್ಷರಿ ದೇಶಿಕೇಂದ್ರ ಸ್ವಾಮೀಜಿ, ವಕೀಲರ ಸಂಘದ ಅಧ್ಯಕ್ಷ ತೊಟ್ಟವಾಡಿ ಮಹದೇವಸ್ವಾಮಿ, ಡೈರಿ ಅಧ್ಯಕ್ಷ ಡಿ.ಎಲ್.ಮಹದೇವಪ್ಪ, ವೀರಶೈವ ಮಹಾಸಭಾ ನಿರ್ದೇಶಕರಾದ ಸುಗಂಧರಾಜು, ಹೊಸೂರುಂಡಿ ತೊಂಟೇಶ್, ಸುರೇಶ್, ಕುಮಾರ್, ಕುರುಬೂರು ಶಿವಶಂಕರ್, ಪುರಸಭಾ ಸದಸ್ಯ ಎಸ್.ಕೆ.ಕಿರಣ್, ಪರಶಿವಮೂರ್ತಿ, ಮುಖಂಡರಾದ ನಿಲಸೋಗೆ ಶೇಖರಪ್ಪ, ನಂಜುಂಡಸ್ವಾಮಿ, ಮಹದೇವ್ ಪ್ರಸಾದ್, ಕಸಬಾ ಪಿಎಸಿಎಸ್ ಅಧ್ಯಕ್ಷ ಮಲ್ಲಣ್ಣ, ಆರ್.ಮಣಿಕಂಠ ರಾಜ್‌ಗೌಡ, ಖಾಸಗಿ ಬಸ್ ಏಜೆಂಟ್ ಸಂಘದ ಅಧ್ಯಕ್ಷ ಶ್ರೀನಿವಾಸ್, ಬಾಬು ಜಗಜೀವನ ರಾಂ ಸಂಘದ ಅಧ್ಯಕ್ಷ ಪುಟ್ಟಯ್ಯ, ಉಪನ್ಯಾಸಕ ಮೂಗೂರು ಕುಮಾರಸ್ವಾಮಿ, ಕರೋಹಟ್ಟಿ ಪ್ರಭುಸ್ವಾಮಿ, ಮೆಡಿಕಲ್ ಕುಮಾರ್, ಅಂಗಡಿ ನಾಗೇಶ್, ಅಕ್ಕಿ ನಾಗಪ್ಪ, ಕೆಇಬಿ ಸಿದ್ದಲಿಂಗಸ್ವಾಮಿ, ಪುರಸಭೆ ಮಾಜಿ ಸದಸ್ಯ ಲೋಕೇಶ್, ಹಿರಿಯೂರು ನವೀನ, ವಕೀಲ ಜ್ಞಾನೇಂದ್ರಮೂರ್ತಿ, ಕಿರುಗಸೂರು ಮಹದೇವಸ್ವಾಮಿ, ನಿವೃತ್ತ ಶಿಕ್ಷಕ ಶಂಭು ದೇವನಪುರ ಪುಟ್ಟಬುದ್ದಿ ಮತ್ತಿತರರಿದ್ದರು.

ಭಾರತೀಯ ಜೀವ ವಿಮಾ ಪ್ರತಿನಿಧಿಗಳಿಂದ ಪ್ರತಿಭಟನೆ



ನಂಜನಗೂಡಿನಲ್ಲಿ ತಾಲೂಕು ಜೀವ ವಿಮಾ ಪ್ರತಿನಿಧಿಗಳ ಒಕ್ಕೂಟದಿಂದ ಪ್ರತಿಭಟನೆ ನಡೆಸಲಾಯಿತು.

ನಂಜನಗೂಡು, ಅ.21– ಜೀವವಿಮಾ ಪ್ರತಿನಿಧಿಗಳು ಹಾಗೂ ಪಾಲಿಸಿದಾರರಿಗೆ ಕೇಂದ್ರ ಜೀವ ವಿಮಾ ನಿಗಮ ಮತ್ತು ಐಆರ್‌ಡಿಎ ಇಲ್ಲಸಲ್ಲದ ನೀತಿ, ನಿಯಮಗಳನ್ನು ಜಾರಿಗೊಳಿಸಿ ಸಮಸ್ಯೆ ಸೃಷ್ಟಿಸುತ್ತಿವೆ ಎಂದು ಆರೋಪಿಸಿ ತಾಲೂಕು ಜೀವ ವಿಮಾ ಪ್ರತಿನಿಧಿಗಳ ಒಕ್ಕೂಟದಿಂದ ನಗರದಲ್ಲಿ ಸೋಮವಾರ ಪ್ರತಿಭಟನೆ ನಡೆಸಲಾಯಿತು.

ನಗರದ ಜೀವ ವಿಮಾ ಕಚೇರಿ ಮುಂಭಾಗ ಜಮಾಯಿಸಿದ ಜೀವ ವಿಮಾ ಪ್ರತಿನಿಧಿಗಳ ಒಕ್ಕೂಟದ ಸದಸ್ಯರು ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ತಾಲೂಕು ಜೀವ ವಿಮಾ ಪ್ರತಿನಿಧಿಗಳ ಒಕ್ಕೂಟ ಅಧ್ಯಕ್ಷ ಕೆಂಪೇಗೌಡ ಮಾತನಾಡಿ, ಪಾಲಿಸಿದಾರರು ಮತ್ತು ಪ್ರತಿನಿಧಿಗಳು ಎಲ್‌ಐಸಿಯ ಬೆನ್ನೆಲುಬು ಎನ್ನಲಾಗುತ್ತಿತ್ತು. ಆದರೆ ಇದೀಗ ತದ್ವಿರುದ್ಧವಾಗಿದೆ. ಕೇಂದ್ರ ಜೀವ ವಿಮಾ ನಿಗಮ ಮತ್ತು ಐಆರ್‌ಡಿಎ ಕೆಲ ತಪ್ಪು ನಿಯಮಗಳನ್ನು ಜಾರಿಗೊಳಿಸಿದ ಪರಿಣಾಮ ಸಾಕಷ್ಟು ಸಮಸ್ಯೆಗಳನ್ನು ಎದುರಿಸುವಂತಾಗಿದೆ. 1 ಲಕ್ಷ ಮೊತ್ತದ ಪಾಲಿಸಿದಾರರಿಗೆ ಇದುವರೆಗೂ ಒಂದು ಲಕ್ಷಕ್ಕೂ ಅಧಿಕ ಬೋನಸ್ ಹಣ ಸಿಗುತ್ತಿತ್ತು. ಈಗ ಏಕಾಏಕಿ 40% ಹಣ ಕಡಿತಗೊಳಿಸಿದ್ದಾರೆ. ಗ್ರಾಮೀಣ ಜನರಿಗೆ 1 ಲಕ್ಷಕ್ಕೆ ವಿಮೆ ಪಾಲಿಸಿ ಮಾಡಲಾಗುತ್ತಿತ್ತು. ಈಗ 2 ಲಕ್ಷದ ಪಾಲಿಸಿ ಪಡೆಯುವುದು ಕಡ್ಡಾಯ ಮಾಡಿದ್ದಾರೆ. ಪಾಲಿಸಿದಾರರಿಗೆ 55 ವರ್ಷ ವಯೋಮಿತಿ ನಿಗದಿಗೊಳಿಸಲಾಗಿತ್ತು. ಇದೀಗ 50 ವರ್ಷ ವಯೋಮಿತಿವರೆಗೆ ಮಾತ್ರ ಪಾಲಿಸಿ ಸ್ಥಗಿತಗೊಳಿಸಲಾಗಿದೆ. ಸಾಕಷ್ಟು ದ್ವಂದ್ವ ನಿಲುವುಗಳನ್ನು ಕೇಂದ್ರ ಎಲ್‌ಐಸಿ ಮತ್ತು ಐಆರ್‌ಡಿಎ ಜಾರಿ ಮಾಡಿದ ಪರಿಣಾಮ ಪ್ರತಿನಿಧಿಗಳು ಮತ್ತು ಪಾಲಿಸಿದಾರರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಕೂಡಲೇ ಪಾಲಿಸಿದಾರರಿಗೆ ಅನಾನುಕೂಲಕರ ನೀತಿ, ನಿಯಮಗಳನ್ನು ರದ್ದುಗೊಳಿಸಿ ಹಿಂದಿನಂತೆ ಯಥಾಸ್ಥಿತಿ ಕಾರ್ಯ ನಿರ್ವಹಿಸುವಂತೆ ಅನುವು ಮಾಡಿಕೊಡಲು ಕೇಂದ್ರ ಎಲ್‌ಐಸಿ ಮತ್ತು ಐಆರ್‌ಡಿಎ ಮುಂದಾಗಬೇಕು ಎಂದು ಮನವಿ ಮಾಡಿದರು.

ಪ್ರತಿಭಟನೆಯಲ್ಲಿ ಜೀವ ವಿಮಾ ಪ್ರತಿನಿಧಿಗಳಾದ ನಾಗೇಂದ್ರ, ಆಶಾ.ಕೆ.ದಾಸ್, ಶ್ರೀಧರ್ ರಾವ್, ಪ್ರಸಾದ್, ಮಹದೇವಯ್ಯ, ಇಂದ್ರ, ಶೈಲಜಾ, ಪೂರ್ಣಿಮಾ, ಕೃಷ್ಣಮೂರ್ತಿ, ರವಿ, ನಾಗರಾಜು, ಶಾಂತಪ್ಪ, ಶಿವಣ್ಣ, ನಿಜಲಿಂಗಪ್ಪ, ರಾಜು, ಕಾವ್ಯ, ಗುರುಸಿದ್ದಾಚಾರಿ, ಕೃಷ್ಣ, ಈರೇಗೌಡ, ನಾಗರಾಜ್, ಸೋಮಶೇಖರ್, ಮಹೇಶ್, ನರಸಿಂಹೇಗೌಡ, ಜೆ. ಮಹದೇವ, ವೆಂಕಟರಾಜು, ಶಿವಕುಮಾರ್, ಮಹದೇವಸ್ವಾಮಿ ಉಪಸ್ಥಿತರಿದ್ದರು.

ಹುಣಸೂರಲ್ಲಿ ಕಾಯಕ ಪ್ರಶಸ್ತಿ ಪುರಸ್ಕಾರ ಸಮಾರಂಭ



ಕಾರ್ಯಕ್ರಮವನ್ನು ದರ್ಶನ್‌ಪುಟ್ಟಣ್ಣಯ್ಯ ಉದ್ಘಾಟಿಸಿದರು.

ಹುಣಸೂರು, ಅ.21– ಈ ಹಿಂದೆ ಎಲ್ಲರೂ ಹೆಚ್ಚಾಗಿ ವ್ಯವಸಾಯ ಮಾಡುತ್ತಿದ್ದರು. ಅದರಿಂದ ದೇಶ ಆರ್ಥಿಕವಾಗಿ ಸಧೃಡವಾಗಿತ್ತು ಎಂದು ಶಾಸಕ ದರ್ಶನ್ ಪುಟ್ಟಣ್ಣಯ್ಯ ತಿಳಿಸಿದರು.

ನಗರದ ಅಂಬೇಡ್ಕರ್ ಭವನದಲ್ಲಿ ರೈತ ಸಂಘದ ಜಾಗೃತಿ ಮತ್ತು ಕಾಯಕ ಪ್ರಶಸ್ತಿ ಪುರಸ್ಕಾರ ಸಮಾರಂಭದಲ್ಲಿ ಮೊದಲಿಗೆ ರೈತ ಗೀತೆ ಹಾಡಲಾಯಿತು. ಈ ವೇಳೆ ನೆರೆದಿದ್ದ ರೈತ ಸಂಘದ ಸದಸ್ಯರು ಹಸಿರು ಟವಲ್ ಅನ್ನು ಗಾಳಿಯಲ್ಲಿ ಬೀಸುವ ಮೂಲಕ ವಿಶೇಷ ಗೌರವ ಸಲ್ಲಿಸಿದರು. ನಂತರ ಜ್ಯೋತಿ ಬೆಳಗಿಸಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಈ ಹಿಂದೆ ಬಹುತೇಕ ಎಲ್ಲರೂ ವ್ಯವಸಾಯ ಮಾಡುತ್ತಿದ್ದರಿಂದ ದೇಶ ಆರ್ಥಿಕವಾಗಿ ಸೃಢವಾಗಿತ್ತು. ನಂತರದ ದಿನಗಳಲ್ಲಿ ರೈತಾಪಿ ವರ್ಗ ಹರಿದು ಹಂಚಿ ಹೋಗಿದ್ದರಿಂದ ಕೃಷಿ ಚಟುವಟಿಕೆ ಕಡಿಮೆಯಾಗಿ ಹಲವು ಸಮಸ್ಯೆಗಳಿಂದ ಪ್ರಸ್ತುತ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದರು.

ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಮಾತನಾಡಿ, ರಾಜ್ಯದಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್ ಸರ್ಕಾರ ಚುನಾವಣಾ ಪೂರ್ವದಲ್ಲಿ ನೀಡಿದ ಭರವಸೆಯಂತೆ ಭೂ ಸುಧಾರಣಾ ತಿದ್ದುಪಡಿ ಕಾಯ್ದೆಯನ್ನು ವಾಪಸ್ ಪಡೆದಿಲ್ಲ. ಗೋಹತ್ಯೆ ನಿಷೇಧ ಕಾಯ್ದೆಯನ್ನು ಮುಂದುವರೆಸಲಾಗುತ್ತಿದೆ. ಅಲ್ಲದೇ ಕೇಂದ್ರ ಸರ್ಕಾರದ ವಿದ್ಯುತ್ ನೀತಿಯನ್ನು ತರಲು ಹುನ್ನಾರ ನಡೆಸುತ್ತಿದ್ದು, ರೈತರು ಹೊಸ ವಿದ್ಯುತ್ ಸಂಪರ್ಕ ಪಡೆಯಲು ಲಕ್ಷಾಂತರ ರೂ. ಹೊರೆ ಅನುಭವಿಸುವ ನೀತಿ ರೂಪಿಸಿದೆ. ಜೊತೆಗೆ ಕೃಷಿ ಉತ್ಪನ್ನಗಳಿಗೆ ಸ್ವಾಮಿನಾಥನ್ ವರದಿಯನ್ವಯ ಕನಿಷ್ಠ ಬೆಂಬಲ ಬೆಲೆಯನ್ನು ಕಾನೂನಿನಡಿ ಖಾತ್ರಿಗೊಳಿಸುವುದಾಗಿ ಮತ್ತು ವಿದ್ಯುತ್ ಕ್ಷೇತ್ರವನ್ನು ಖಾಸಗೀಕರಣಗೊಳಿಸುವುದಿಲ್ಲ. ರೈತಪರ ನೀತಿಗಳನ್ನು ಜಾರಿಗೆ ತರುವುದಾಗಿ ಹೇಳಿ ಇದೀಗ ರೈತ ವಿರೋಧಿ ನೀತಿಗಳನ್ನು ಹಿಂಬಾಗಿಲಿನಿಂದ ಒಂದೊಂದಾಗಿ ಜಾರಿಗೆ ತರುವ ಮೂಲಕ ಸಂಪೂರ್ಣವಾಗಿ ರೈತರನ್ನು ನಿರ್ಲಕ್ಷ್ಯ ಮಾಡುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಡಿವೈಎಸ್‌ಪಿ ಗೋಪಾಲಕೃಷ್ಣ, ಕೆ.ಆರ್.ನಗರದ ಚಂದಗಾಲ ಆಸ್ಪತ್ರೆಯ ಡಾ.ಮಮತಾ, ವಾಯು ಸೇನೆಯ ನಿವೃತ್ತ ಇಂಜಿನಿಯರ್ ಸುನೀಲ್ ಕುಮಾರ್, ಹಿರಿಯ ಹೋರಾಟಗಾರ ರಾಮಕೃಷ್ಣೆಗೌಡ, ಅರಣ್ಯ ಇಲಾಖೆಯ ರಮೇಶ್ ಅವರನ್ನು ಸನ್ಮಾನಿಸಲಾಯಿತು. ರಾಜ್ಯ ಮಹಿಳಾ ಘಟಕದ ಪ್ರಧಾನ ಕಾರ್ಯದರ್ಶಿ ನೇತ್ರಾವತಿ, ಸರ್ವೋದಯ ಕರ್ನಾಟಕ ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರಸನ್ನ.ಎಸ್.ಗೌಡ, ಜಿಲ್ಲಾಧ್ಯಕ್ಷ ಕುಮಾರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಸವರಾಜು, ಉಪಾಧ್ಯಕ್ಷ ಪಳನಿಸ್ವಾಮಿ, ಮುಖಂಡರಾದ ಮರಂಕಯ್ಯ, ಜಯಪ್ಪಗೌಡ, ತಾಲೂಕು ಅಧ್ಯಕ್ಷ ಚಿಕ್ಕಣ್ಣ, ಕಾರ್ಯದರ್ಶಿ ರಾಮೇಗೌಡ, ತಂಬಾಕು ಬೆಳೆಗಾರರ ಕ್ಷೇಮಾಭಿವೃದ್ಧಿ ಸಂಘದ ಗೌರವಾಧ್ಯಕ್ಷ ಚಂದ್ರೇಗೌಡ, ಸೋಮಣ್ಣ, ಪ್ರಗತಿಪರ ಸಂಘಟನೆಯ ರಾಮಕೃಷ್ಣ ಸೇರಿದಂತೆ ಇತರರಿದ್ದರು.

ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಶತಾಬ್ದಿ ಅಂಗವಾಗಿ ಪಥ ಸಂಚಲನ



ಸರಗೂರಿನಲ್ಲಿ ರಾಷ್ಟ್ರೀಯ ಸ್ವಯಂ ಸೇವಕರು ಪಥಸಂಚಲನ ನಡೆಸಿದರು.

ಸರಗೂರು, ಅ.21– ಪಟ್ಟಣದ ಜಯಚಾಮರಾಜೇಂದ್ರ ಕ್ರೀಡಾಂಗಣದಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಶತಾಬ್ದಿ ವರ್ಷದ ಅಂಗವಾಗಿ ವಿಜಯ ದಶಮಿ ಉತ್ಸವ ಮತ್ತು ಪಥ ಸಂಚಲನ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಕರ್ನಾಟಕ ದಕ್ಷಿಣ ಪ್ರಾಂತ ಕಾಲೇಜು ವಿದ್ಯಾರ್ಥಿ ಪ್ರಮುಖ ಉಮೇಶ್ ಮುಖ್ಯ ಭಾಷಣಕಾರರಾಗಿ ಮಾತನಾಡಿ, ದೇಶದ ಅತೀ ದೊಡ್ಡ ಸಂಘಟನೆಯಾದ ರಾಷ್ಟ್ರೀಯ ಸ್ವಯಂ ಸೇವಕ ಸಂಘ ದೇಶ ಸೇವೆಗೆ ಜಾತಿ ಭೇದ, ಮೇಲು–ಕೀಳುಗಳನ್ನು ತೊಡೆದು ಸಂಘಟಿತವಾಗಿ ಕೆಲಸ ಮಾಡುತ್ತಿದೆ ಎಂದರು.

ಸಂಘದ 100ನೇ ವರ್ಷದ ಪ್ರಯುಕ್ತ ಪಂಚ ಪರಿವರ್ತನೆಯ ನೂತನ ಕಾರ್ಯವನ್ನು ಪಂಚ ಬಿಂದುಗಳಾದ ಪರಿಸರ ಸಂರಕ್ಷಣೆ, ಕುಟುಂಬ ಪ್ರಬೋಧನ, ಸಾಮಾಜಿಕ ಸಾಮರಸ್ಯ, ಸ್ವದೇಶಿ ಜಾಗರಣ ಹಾಗೂ ನಾಗರಿಕ ಶಿಷ್ಟಾಚಾರ ಈ ವಿಷಯಗಳನ್ನು ಸಮಾಜದೊಳಗೆ ತರುವ ಕೆಲಸ ಮಾಡುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಸರಗೂರು ಹಾಗೂ ಹೆಗ್ಗಡದೇವನಕೋಟೆ ತಾಲೂಕು ಸಂಘಚಾಲಕ್ ಶ್ರೀವತ್ಸ, ಸ್ವಯಂ ಸೇವಕರಾದ ರಮೇಶ್, ಮೋಹನ್, ನೂರಾಳಸ್ವಾಮಿ, ಶ್ರೀನಾಥ್, ನಾಗರಾಜು, ಮಹೇಶ್, ಚನ್ನಪ್ಪ, ಹರೀಂದ್ರ, ಪೂರ್ಣೇಶ್, ಗುರುಸ್ವಾಮಿ, ನವೀನ್, ನಾಗೇಶ್, ರವಿ, ಕಿರಣ್, ಮಹಾದೇವ, ತಾಲೂಕಿನ ಎಲ್ಲಾ ಸ್ವಯಂ ಸೇವಕರು ಹಾಗೂ ಸಂಘದ ಹಿತೈಷಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ನಂತರ ಜಯಚಾಮರಾಜೇಂದ್ರ ಕ್ರೀಡಾಂಗಣದಿಂದ ಪ್ರಾರಂಭವಾದ ಪಥಸಂಲನ ಪಟ್ಟಣದ ಬಸವೇಶ್ವರ ರಸ್ತೆ ಮೂಲಕ ನರಸಿಂಹ ಸ್ವಾಮಿ ದೇವಸ್ಥಾನದ 1ನೇ ಮುಖ್ಯ ರಸ್ತೆ, ಮಾಸ್ತಮ್ಮ ದೇವಸ್ಥಾನದಿಂದ ಎರಡನೇ ಮುಖ್ಯ ರಸ್ತೆಯ ಮೂಲಕ ಸಾಗಿತು. ಭಗವಧ್ವಜದ ಸಮೇತ ನೂರಾರು ಕಾರ್ಯಕರ್ತರು ಭಾಗವಹಿಸಿದ್ದರು.

‘ಉದ್ಯೋಗ ಖಾತ್ರಿ ನಡಿಗೆ ಸಬಲತೆಯೆಡೆಗೆ’ ಅಭಿಯಾನ



ಕೋತ್ತೆಗಾಲದಲ್ಲಿ ನರೇಗಾ ಯೋಜನೆಯ ಕ್ಯೂಆರ್ ಕೋಡ್ ಬಳಸಿ ಬೇಡಿಕೆ ಸಲ್ಲಿಸುವ ಪ್ರಕ್ರಿಯೆಗೆ ಚಾಲನೆ ನೀಡಲಾಯಿತು.

ಹುಣಸೂರು, ಅ.21– 2025–26ನೇ ಸಾಲಿನ ನರೇಗಾ ಕ್ರಿಯಾ ಯೋಜನೆ ಸೌಲಭ್ಯ ಪಡೆಯಲು ಕ್ಯೂಆರ್ ಕೋಡ್ ಬಳಸಿ ತಮ್ಮ ಮೊಬೈಲ್ ಮೂಲಕವೇ ಬೇಡಿಕೆ ಸಲ್ಲಿಸಬಹುದಾಗಿದೆ ಎಂದು ಜಿಲ್ಲಾ ಐಇಸಿ ಸಂಯೋಜಕಿ ರಮ್ಯ ತಿಳಿಸಿದರು.

ತಾಲೂಕಿನ ಕೊತ್ತೇಗಾಲ ಗ್ರಾಪಂನಲ್ಲಿ ಉದ್ಯೋಗ ಖಾತ್ರಿ ನಡಿಗೆ ಸಬಲತೆಯೆಡೆಗೆ ಅಭಿಯಾನದ ಅಂಗವಾಗಿ ನಡೆದ ಅರಿವು ಮತ್ತು ಜಾಥಾದಲ್ಲಿ ಮಾಹಿತಿ ನೀಡಿದ ಅವರು, ಈ ಸಾಲಿನಿಂದಲೇ ಫಲಾನುಭವಿಗಳಿಂದ ವೈಯಕ್ತಿಕ ಕಾಮಗಾರಿಗಳಿಗೆ ಬೇಡಿಕೆ ಸಂಗ್ರಹಿಸಲಾಗುತ್ತಿದೆ. ಅದರ ಅಂಗವಾಗಿ ಪ್ರತಿ ಗ್ರಾಪಂನಲ್ಲೂ ಐಇಸಿ ಚಟುವಟಿಕೆ ಮೂಲಕ ಜನರಿಗೆ ಯೋಜನೆ ಕುರಿತು ಮಾಹಿತಿ ನೀಡಲಾಗುತ್ತಿದೆ ಎಂದರು.

ತಾಲೂಕು ಐಇಸಿ ಸಂಯೋಜಕಿ ಪುಷ್ಪ ಯೋಜನೆಯ ವೈಯಕ್ತಿಕ ಕಾಮಗಾರಿಗಳು ಮತ್ತು ಅದರ ಸೌಲಭ್ಯದಿಂದಾಗುವ ಅನುಕೂಲತೆಗಳ ಬಗ್ಗೆ ಅರಿವು ಮೂಡಿಸಿದರು. ಅದರಂತೆ ಪ್ರತಿ ಮನೆಗಳಲ್ಲಿ ಬಚ್ಚಲು ಗುಂಡಿ ನಿರ್ಮಾಣದ ಮೂಲಕ ಸ್ವಚ್ಛತೆ ಮತ್ತು ಆರೋಗ್ಯಕರ ವಾತಾವರಣ ನಿರ್ಮಿಸಿಕೊಳ್ಳುವಂತೆ ಹಾಗೂ ಬೂದು ನೀರು ಮುಕ್ತ ಗ್ರಾಮವನ್ನಾಗಿಸಲು ಸಾರ್ವಜನಿಕರು ಸಹಕರಿಸಬೇಕು. ಕೂಲಿ ಕೆಲಸಕ್ಕೆ ಬೇಡಿಕೆ ಸಲ್ಲಿಸಲು ಹಾಗೂ ಇತರೆ ವಿಚಾರದ ಕುರಿತು ಹೆಚ್ಚಿನ ಮಾಹಿತಿಗಾಗಿ ಹಾಗೂ ಕುಡಿಯುವ ನೀರಿನ ಕುರಿತು ದೂರಗಳಿದ್ದರೆ ಉಚಿತ ಸಹಾಯವಾಣಿ 8277506000 ಕರೆ ಮಾಡುವಂತೆ ತಿಳಿಸಿದರು.

ಇದೇ ವೇಳೆ ಪ್ರಾತ್ಯಕ್ಷಿಕೆ ಮೂಲಕ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡುವ ಬಗ್ಗೆ ತಿಳುವಳಿಕೆ ನೀಡಲಾಯಿತು. ನಂತರ ಗ್ರಾಮದ ಮನೆ ಮನೆಗೆ ತೆರಳಿ ಯೋಜನೆ ಕುರಿತು ಮಾಹಿತಿ ನೀಡಿ ಬೇಡಿಕೆ ಪಡೆದುಕೊಳ್ಳಲಾಯಿತು.

ಈ ವೇಳೆ ಗ್ರಾಪಂ ಅಧ್ಯಕ್ಷ ಜಿ. ರವಿಕುಮಾರ್, ಉಪಾಧ್ಯಕ್ಷ ಗೌರಮ್ಮಣಿ, ಕಾರ್ಯದರ್ಶಿ ಆನಂದ್, ಆರೋಗ್ಯ ಇಲಾಖೆಯ ಸುರೇಶ್, ಮಹಿಳಾ ಸಂರಕ್ಷಣಾಕಾರಿ ಜಯಂತಿ, ಸದಸ್ಯರಾದ ಜಯರಾಮೇಗೌಡ, ಪದ್ಮ ಕರಿಯಪ್ಪ, ನರೇಗಾ ಶ್ರೀಧರ್, ಆಶಾ, ಅಂಗನವಾಡಿ ಕಾರ್ಯಕರ್ತರು, ಪಂಚಾಯಿತಿ ಸಿಬ್ಬಂದಿ, ಗ್ರಾಮಸ್ಥರು ಪಾಲ್ಗೊಂಡಿದ್ದರು.

ಇಎಸ್‌ಐ ಆಸ್ಪತ್ರೆ ಅಧಿಕಾರಿ ವಿರುದ್ಧ ದೂರು

ನಂಜನಗೂಡು, ಅ.21– ನಗರದ ಕಾರ್ಮಿಕರ ರಾಜ್ಯವಿಮಾ (ಇಎಸ್‌ಐ) ಆಸ್ಪತ್ರೆ ಫಾರ್ಮಸಿ ಅಧಿಕಾರಿ ಎಸ್.ಟಿ.ಗಣೇಶ್ ಕರ್ತವ್ಯದ ವೇಳೆ ಮದ್ಯಪಾನ ಮಾಡಿ, ಮಹಿಳಾ ಸಿಬ್ಬಂದಿಗಳೊಂದಿಗೆ ಅನುಚಿತವಾಗಿ ವರ್ತಿಸುತ್ತಿದ್ದಾರೆ ಎಂದು ಆರೋಪಿಸಿ ರಾಜ್ಯ ವಿಮಾ ಇಲಾಖೆಯ ನಿರ್ದೇಶಕರಿಗೆ ಆಸ್ಪತ್ರೆ ವೈದ್ಯಾಧಿಕಾರಿ ದೀಪಕ್ ದೂರು ನೀಡಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕರ್ತವ್ಯ ನಿರ್ವಹಣೆ ವೇಳೆ ಅಶ್ಲೀಲವಾಗಿ ನಿಂದಿಸುವುದು, ಅಶ್ಲೀಲವಾಗಿ ಮೊಬೈಲ್‌ನಲ್ಲಿ ಸಂದೇಶ ಕಳಿಹಿಸಿರುವುದಾಗಿ ಆಸ್ಪತ್ರೆ ಮಹಿಳಾ ಸಿಬ್ಬಂದಿಗಳು ನನಗೆ ಮೌಖಿಕ ವಾಗಿ ದೂರು ನೀಡಿ, ಹಿರಿಯ ಅಧಿಕಾರಿ ಗಳ ಗಮನಕ್ಕೆ ತಂದಿದ್ದಾರೆ. ಈ ಹಿನ್ನಲೆಯಲ್ಲಿ ಎಸ್.ಟಿ.ಗಣೇಶ್ ಅವರ ವಿರುದ್ಧ ಕ್ರಮ ಕೈಗೊಳ್ಳುವಂತೆ ರಾಜ್ಯ ವಿಮಾ ಇಲಾಖೆ ನಿರ್ದೇಶಕರಿಗೆ ದೂರು ನೀಡಲಾಗಿದೆ ಎಂದರು.

ಮೂಲ ಸೌಲಭ್ಯ ವಂಚಿತ ತಿ.ನರಸೀಪುರ ಪುರಸಭೆ

ಮುಖ್ಯಾಧಿಕಾರಿ ವಿರುದ್ಧ ಕ್ರಮಕ್ಕೆ ಆಗ್ರಹ

ತಿ.ನರಸೀಪುರ, ಅ.21– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ತವರು ಕ್ಷೇತ್ರ ವರುಣ ಹಾಗೂ ತಿ.ನರಸೀಪುರ ವಿಧಾನ ಸಭಾ ಕ್ಷೇತ್ರಕ್ಕೊಳಪಟ್ಟ ಪುರಸಭೆ ಮುಖ್ಯಾಧಿಕಾರಿಗಳ ಬೇಜವಾಬ್ದಾರಿಯಿಂದ ಕನಿಷ್ಠ ಮೂಲ ಸೌಲಭ್ಯಗಳಿಂದ ವಂಚಿತ ವಾಗಿದೆ ಎಂದು ಪುರಸಭೆ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಹಾಗೂ ಕಾಂಗ್ರೆಸ್ ಮುಖಂಡ ರಾಘವೇಂದ್ರ ಆರೋಪಿಸಿದ್ದಾರೆ.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲಾ ಕೇಂದ್ರಕ್ಕೆ ತಿ.ನರಸೀಪುರ ಕೇವಲ 30 ಕಿಮೀ ದೂರದಲ್ಲಿದ್ದು, ತಿ.ನರಸೀಪುರ ಹಾಗೂ ವರುಣ ಕ್ಷೇತ್ರ ಚಾಮರಾಜನಗರ ಲೋಕಸಭಾ ಕ್ಷೇತ್ರಕ್ಕೆ ಹಂಚಿಕೆಯಾಗಿದೆಯಾದರೂ ಇಬ್ಬರು ಮಹಾನ್ ರಾಜಕಾರಣಿಗಳು ಪಟ್ಟಣ ಅಭಿವೃದ್ಧಿಗೆ ಸಾಕಷ್ಟು ಅನುದಾನ ಬಿಡುಗಡೆ ಮಾಡಿದ್ದಾರೆ. ಆದರೆ ಪುರಸಭೆ ಮುಖ್ಯಾಧಿಕಾರಿಯ ಸರ್ವಾಧಿಕಾರಿ ಧೋರಣೆಯಿಂದ ಯಾವುದೇ ಅಭಿವೃದ್ಧಿ ಕೆಲಸ ಸಮರ್ಪಕವಾಗಿ ಆಗದಿರುವುದು ಬೇಸರದ ಸಂಗತಿ ಎಂದರು.

ಸಿಎಂ ವಿಶೇಷಾಧಿಕಾರಿ ಡಾ.ಕೆ.ವೈಷ್ಣವಿ ಅವರು ಪತ್ರಿಕೆಯಲ್ಲಿ ಮಾಂಸ ಮಾರುಕಟ್ಟೆ ಅವ್ಯವಸ್ಥೆ ಬಗ್ಗೆ ವರದಿ ಪ್ರಕಟವಾಗಿದ್ದನ್ನು ಗಮನಿಸಿ ಮಾಹಿತಿ ಕೇಳಿದ ವೇಳೆ ಮುಖ್ಯಾಧಿಕಾರಿಗಳು 10 ಲಕ್ಷ ಹಣ ಮಂಜೂರು ಮಾಡಿ ಕಾಮಗಾರಿ ಮಾಡಿದ್ದರೂ ಅದನ್ನು ಮರೆಮಾಚಿ ತಪ್ಪು ಮಾಹಿತಿ ನೀಡಿದ್ದಾರೆ. 2022–23ರ ನಗರೋತ್ಥಾನ ಯೋಜನೆಯಡಿ ಪಟ್ಟಣದ ಪ್ರಮುಖ ರಸ್ತೆಗಳ ಅಭಿವೃದ್ಧಿಗೆ 5 ಕೋಟಿ ರೂ.ಅನುದಾನ ಮಂಜೂರು ಮಾಡಿ ಟೆಂಡರ್ ಕರೆದು ಕೆಲಸ ಆರಂಭಿಸಲಾಗಿತ್ತು. ಆದರೆ ಗುತ್ತಿಗೆದಾರ ಕೆಲಸ ಪೂರ್ಣಗೊಳಿಸದ ಹಿನ್ನೆಲೆಯಲ್ಲಿ ಗುತ್ತಿಗೆದಾರನನ್ನು ಕಪ್ಪು ಪಟ್ಟಿಗೆ ಸೇರಿಸಬೇಕಿದ್ದ ಮುಖ್ಯಾಧಿಕಾರಿಯವರು ಉದ್ದೇಶಪೂರ್ವಕವಾಗಿ ಅದನ್ನು ಮರೆಮಾಚಿ ಮತ್ತದೇ ರಸ್ತೆಗಳಿಗೆ ಎಸ್‌ಎಫ್‌ಸಿ ವಿಶೇಷ ಅನುದಾನದಡಿ ಕೋಟ್ಯಾಂತರ ರೂ. ಮಂಜೂರು ಮಾಡಿಸಿ ಒಂದೇ ಸ್ಥಳಕ್ಕೆ 2 ಯೋಜನೆಯಡಿ ಬಿಲ್ ತಯಾರಿಸಿ ಸರ್ಕಾರಕ್ಕೆ ವಂಚಿಸಿ ಅಧಿಕಾರ ದುರುಪಯೋಗಪಡಿಸಿಕೊಂಡಿದ್ದಾರೆ ಎಂದು ಆರೋಪಿಸಿದರು. ಪಟ್ಟಣದ ಸಾರ್ವಜನಿಕ ಸ್ಮಶಾನ ಅಭಿವೃದ್ಧಿಗೆ 2 ಹಂತದಲ್ಲಿ ಬಿಡುಗಡೆಯಾದ 15.15 ಲಕ್ಷ ರೂ. ಹಾಗೂ 7,84,000 ರೂ.ಗಳನ್ನು ಕಾಮಗಾರಿ ಸಮರ್ಪಕವಾಗಿ ಮಾಡದೇ ಸ್ಮಶಾನ ಅಭಿವೃದ್ಧಿಯಲ್ಲೂ ಅವ್ಯವಹಾರ ನಡೆಸಿದ್ದು, ಪಟ್ಟಣದ ಅಭಿವೃದ್ಧಿಗೆ ಮೀಸಲಾದ ಹಣವನ್ನು ದುರುಪಯೋಗ ಪಡಿಸಿಕೊಂಡಿರುವ ಮುಖ್ಯಾಧಿಕಾರಿ ಬಿ.ಕೆ.ವಸಂತಕುಮಾರಿ ವಿರುದ್ಧ ಸೂಕ್ತ ಕ್ರಮ ಜರುಗಿಸುವಂತೆ ಆಗ್ರಹಿಸಿದರು.



ಪವರ್ ಸ್ಟೇಷನ್ ಬೇರೆಡೆಗೆ ಸ್ಥಳಾಂತರಿಸಿ

ತಿ.ನರಸೀಪುರ ಸರ್ಕಾರಿ ಆಸ್ಪತ್ರೆ ರಸ್ತೆಯಲ್ಲಿರುವ ವಿದ್ಯುತ್ ಪ್ರಸರಣಾ ವಿಭಾಗವು ಪಟ್ಟಣದ ಹೃದಯ ಭಾಗದಲ್ಲಿರುವುದರಿಂದ ಸುತ್ತಮುತ್ತ ವಾಸಿಸುವ ನಿವಾಸಿಗಳಿಗೆ ತೊಂದರೆಯಾಗುತ್ತಿದೆ. ಆದ್ದರಿಂದ ಕೂಡಲೇ ಪವರ್ ಸ್ಟೇಷನ್ ಅನ್ನು ಬೇರೆಡೆಗೆ ಸ್ಥಳಾಂತರಿಸಬೇಕಿದೆ. ಪಟ್ಟಣದಲ್ಲಿ ವಿದ್ಯುತ್ ಚಿತಾಗಾರ ಇಲ್ಲದ ಕಾರಣ ಇದನ್ನು ನಿರ್ಮಿಸಿಕೊಡಬೇಕೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಎಂಎಲ್‌ಸಿ ಡಾ.ಯತೀಂದ್ರ ಹಾಗೂ ಸಂಸದ ಸುನೀಲ್ ಬೋಸ್ ಅವರಿಗೆ ಮನವಿ ಮಾಡಿದರು. ಪಟ್ಟಣದ ಲಿಂಕ್ ರಸ್ತೆಗೆ ಹೊಂದಿಕೊಂಡಿರುವ ಅನಧಿಕೃತ ಮಾಂಸ ಮಾರಾಟದ ಅಂಗಡಿಗಳನ್ನು ಪುರಸಭೆ ನಿರ್ಮಿಸಿರುವ ಮಾಂಸದ ಮಾರುಕಟ್ಟೆ ಮಳಿಗೆಗಳಿಗೆ ಸ್ಥಳಾಂತರಿಸುವ ಮೂಲಕ ಪ.ಜಾತಿ/ಪಂಗಡಕ್ಕೆ ಸೇರಿದ ಜನತೆಯೇ ಹೆಚ್ಚಾಗಿ ವಾಸ ಮಾಡುವ, ಹಿಂದುಳಿದ ಸಮುದಾಯಗಳ ಜನರೇ ಹೆಚ್ಚಾಗಿ ವಾಸಿಸುವ ಜನರಿಗೆ ಅನುಕೂಲ ಕಲ್ಪಿಸಿಕೊಡಬೇಕು. ಹಾಲಿ ಮಾಂಸ ಮಾರಾಟ ಮಾಡುತ್ತಿರುವ ಸ್ಥಳವನ್ನು ಆಯುಷ್ಮಾನ್ ಆರೋಗ್ಯ ಯೋಜನೆಯಡಿ ಸಾರ್ವಜನಿಕರಿಗೆ ಆರೋಗ್ಯ ಸೇವೆಗಾಗಿ ಆಸ್ಪತ್ರೆ ನಿರ್ಮಿಸುವ ಸಂಬಂಧ ಆರೋಗ್ಯ ಇಲಾಖೆಗೆ ಹಸ್ತಾಂತರಿಸಲು ಸಂಬಂಧ ಪಟ್ಟವರಿಗೆ ಸೂಕ್ತ ಆದೇಶ ನೀಡುವಂತೆ ಅವರು ಮುಖ್ಯಮಂತ್ರಿ ಅವರಲ್ಲಿ ಮನವಿ ಮಾಡಿದರು.

ಪತ್ನಿ ನಾಪತ್ತೆ, ಪತಿ ದೂರು



ಚುಂಚನಕಟ್ಟೆ ಅ.21– ತಾಲೂಕಿನ ದೊಡ್ಡ ಹನಸೋಗೆ ಗ್ರಾಮದ ನಿವಾಸಿ ನವೀನ್ ನಾಯಕ ತಮ್ಮ ಪತ್ನಿ ಆಶಾ(32) ಕಾಣೆಯಾಗಿರುವ ಸಂಬಂಧ ಸಾಲಿಗ್ರಾಮ ಠಾಣೆಗೆ ದೂರು ನೀಡಿದ್ದಾರೆ. ತಮ್ಮ ಪತ್ನಿ ಸ್ಕೂಟಿಯು ಗ್ರಾಮದ ಸೇತುವೆ ಬಳಿ ನಿಂತಿದೆ. ನಾನು ತಕ್ಷಣ ಗ್ರಾಮದಲ್ಲಿ ಸ್ನೇಹಿತರು, ಸಂಬಂಧಿಕರು ಎಲ್ಲಾ ಕಡೆ ಹುಡುಕಿದರೂ ಪತ್ನಿ ಪತ್ತೆಯಾಗಿಲ್ಲ ಎಂದು ಠಾಣೆಯಲ್ಲಿ ದೂರಿನಲ್ಲಿ ತಿಳಿಸಿದ್ದಾರೆ.

ಭೈರನಾಯಕ ನಿಧನ



ಸರಗೂರು, ಅ.21– ಪಟ್ಟಣದ ನಾಯಕ ಸಮಾಜದ ಚಿಕ್ಕ ಯಜಮಾನ ಭೈರನಾಯಕ(50) ಸೋಮವಾರ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರಿ, ಪುತ್ರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಪಟ್ಟಣದ ನಾಯಕ ಸಮಾಜದ ರುದ್ರಭೂಮಿಯಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಇಡಿ, ಲೋಕಾಯುಕ್ತ ತನಿಖೆ: ಮುಡಾದಲ್ಲಿ ದೈನಂದಿನ ಕೆಲಸ ಸ್ಥಗಿತ

ಮುಡಾ ಕಚೇರಿ ಮುಂದೆ ಸಾರ್ವಜನಿಕರ ಪ್ರತಿಭಟನೆ



ಇಡಿ ಹಾಗೂ ಲೋಕಾಯುಕ್ತ ತನಿಖೆಯಿಂದ ಸಾರ್ವಜನಿಕರ ಕೆಲಸ ಕಾರ್ಯಗಳು ನಡೆಯುತ್ತಿಲ್ಲವೆಂದು ಮುಡಾ ಕಚೇರಿ ಮುಂದೆ ಸೋಮವಾರ ಜನರು ಪ್ರತಿಭಟನೆ ನಡೆಸಿದರು.

ಮೈಸೂರು, ಅ.21(ಬಿಎಲ್‌ಯು)– ಇಡಿ ಹಾಗೂ ಲೋಕಾಯುಕ್ತ ನಿರಂತರ ತನಿಖೆಯಿಂದ ನಿವೇಶನಗಳ ಖಾತೆ, ಮನೆ ನಕ್ಷೆ ಮಂಜೂರು ಸೇರಿದಂತೆ ಯಾವುದೇ ಕೆಲಸ ಕಾರ್ಯಗಳು ನಡೆಯುತ್ತಿಲ್ಲ ಎಂದು ಸಾರ್ವಜನಿಕರು ಇಂದು ಮುಡಾ ಕಚೇರಿ ಮುಂದೆ ಪ್ರತಿಭಟನೆ ನಡೆಸಿದರು.

ಮುಡಾದಲ್ಲಿ ಪ್ರತಿ ದಿನ ಲೋಕಾಯುಕ್ತರು ಹಾಗೂ ಇಡಿ ಅಧಿಕಾರಿಗಳು ತನಿಖೆ ನಡೆಸುತ್ತಿದ್ದಾರೆ. ಪೊಲೀಸ್ ಹಾಗೂ ಸಿಆರ್ ಪಿಎಫ್ ಸಿಬ್ಬಂದಿಗಳನ್ನು ನಿಯೋಜಿಸಿ ಸಾರ್ವಜನಿಕರನ್ನು ಒಳಗೆ ಬಿಡುತ್ತಿಲ್ಲ.

ತನಿಖಾ ಕಾರ್ಯಕ್ಕೆ ಅಡ್ಡಿಯಾಗಲಿದೆ ಎಂಬ ಕಾರಣದಿಂದ ಸಾರ್ವಜನಿಕರನ್ನು ಒಳಗೆ ಬಿಡದೆ ಕಚೇರಿಗೆ ಸರ್ಪಗಾವಲು ಹಾಕಲಾಗಿದೆ ಇದರಿಂದ ನಿವೇಶನಗಳ ಖಾತೆ, ಮನೆ ನಕ್ಷೆ ಮಂಜೂರು ಸೇರಿದಂತೆ ಹಲವು ಕೆಲಸ ಕಾರ್ಯಗಳು ಆಗುತ್ತಿಲ್ಲ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದರು.

ಮೈಸೂರಿನವರೇ ಆದ ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿರುವುದು ನಮಗೆ ಹೆಮ್ಮೆಯ ವಿಚಾರ. ಆದರೆ ಅವರ ವಿಚಾರದ ಪ್ರಕರಣದ ತನಿಖೆ ಕಾರಣ ಮುಡಾದಲ್ಲಿ ಸಾರ್ವಜನಿಕರ ಕೆಲಸ ಕಾರ್ಯಗಳು ನಡೆಯುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸುಮಾರು ಎರಡು ತಿಂಗಳಿಂದ ಮುಡಾದಲ್ಲಿ ಸಾರ್ವಜನಿಕರ ಕೆಲಸ ಕಾರ್ಯ ನಡೆಯುತ್ತಿಲ್ಲ ಇದರಿಂದ ಪ್ರತಿ ದಿನ ನಾವು ಮುಡಾಗೆ ಎಡತಾಕುವುದಾಗಿದೆ ಎಂದು ಶಿವಕುಮಾರ್ ಎಂಬುವರು ಆಕ್ರೋಶ ವ್ಯಕ್ತಪಡಿಸಿದರು.

ಇಡಿ ಅಥವಾ ಲೋಕಾಯುಕ್ತರು ತನಿಖೆ ಮಾಡಿದರೆ ನಮ್ಮ ಅಭ್ಯಂತರವಿಲ್ಲ. ಆದರೆ ಸಾರ್ವಜನಿಕರ ಕೆಲಸಗಳಿಗೆ ತೊಂದರೆ ಆಗದಂತೆ ತನಿಖೆ ಮಾಡಲಿ. ಅದು ಬಿಟ್ಟು ತನಿಖೆ ನೆಪದಲ್ಲಿ ಜನರಿಗೆ ತೊಂದರೆ ಕೊಡುವುದು ಎಷ್ಟು ಸರಿ ಎಂದು ಪ್ರಶ್ನಿಸಿದರು.

ಮುಡಾ ಆಯುಕ್ತರಿಗೆ ನಾವು ಮನವಿ ಮಾಡೋಣವೆಂದರೆ ಪ್ರವೇಶ ದ್ವಾರದಲ್ಲೇ ತಡೆಯಲಾಗುತ್ತಿದೆ. ಇದರಿಂದ ನಮ್ಮ ಗೋಳನ್ನು ಯಾರ ಬಳಿ ಹೇಳೋಣ ಎಂದು ಪ್ರಶ್ನಿಸಿದರು.

ಯಾವುದೇ ತನಿಖೆಯನ್ನಾದರೂ ನಡೆಸಿಕೊಳ್ಳಲಿ. ಆದರೆ ಸಾರ್ವಜನಿಕರ ಕೆಲಸ ಕಾರ್ಯಗಳಿಗೆ ಅಡ್ಡಿಪಡಿಸಬಾರದು. ಇದು ಹೀಗೆ ಮುಂದುವರೆದರೆ ಸಾರ್ವಜನಿಕರೆಲ್ಲಾ ಸೇರಿ ತೀವ್ರ ರೀತಿ ಹೋರಾಟ ಮಾಡಬೇಕಾಗುತ್ತದೆ ಎಂದು ಪ್ರತಿಭಟನಾಕಾರರು ಎಚ್ಚರಿಸಿದರು.

ಇಡಿ ತನಿಖೆ ನಂತರ ಬಿಕೋ ಎನ್ನುತ್ತಿರುವ ಮುಡಾ ಕಚೇರಿ



ಮುಡಾದಲ್ಲಿ 41 ಗಂಟೆಗಳ ಕಾಲ ಇಡಿಯವರು ತನಿಖೆ ನಡೆಸಿ ನಿರ್ಗಮಿಸಿದರೂ ಮುಡಾ ಕಚೇರಿ ಬಿಕೋ ಎನ್ನುತ್ತಿದೆ. ಮುಡಾ ಕಚೇರಿಯ ಯಾವುದೇ ಕೋಣೆಗೆ ಹೋದರೂ ಅಲ್ಲಿ ಖಾಲಿ ಖಾಲಿ ಕಾಣಿಸುತ್ತಿದೆ. ಅಧಿಕಾರಿ ಹಾಗೂ ಸಿಬ್ಬಂದಿ ಆಸನಗಳು ಖಾಲಿಯಾಗಿವೆ. ಮಧ್ಯಾಹ್ನವಾದರೂ ಮುಡಾ ಕಚೇರಿ ಭಣಗುಟ್ಟುತ್ತಿತ್ತು. ಇಡಿ ಅಧಿಕಾರಿಗಳು ಕೇಳುತ್ತಿದ್ದ ದಾಖಲೆ ಒದಗಿಸಲು ಅಧಿಕಾರಿಗಳು ಹಾಗೂ ಸಿಬ್ಬಂದಿ ಓಡಾಡಿದ್ದು, ಇಂದು ವಿಶ್ರಾಂತಿಗೆ ಜಾರಿದ್ದಾರೋ ಎಂಬಂತಿತ್ತು ಇಂದಿನ ಮುಡಾ ಕಚೇರಿ ಸ್ಥಿತಿ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ವಿಶ್ವಂ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ವೆಟ್ಟೈಯನ್ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಜಿಗ್ರಾ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಮಾರ್ಟಿನ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮಾರ್ಟಿನ್ (ಕ)	4 ಪ್ರದರ್ಶನಗಳು
ರಾಜಕಮಲ್	
ಭೈರಾದೇವಿ (ಕ)	4 ಪ್ರದರ್ಶನಗಳು
ಸಂಗಂ	
ಮಾರ್ಟಿನ್ (ಕ)	4 ಪ್ರದರ್ಶನಗಳು
ಲಿಡೋ	
ಕೃಷ್ಣಂ ಪ್ರಣಯ ಸಖಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಸಿಂಹರೂಪಿಣಿ (ಕ)	4 ಪ್ರದರ್ಶನಗಳು
ಪ್ರಭಾ	
ಭೀಮ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ವೆಟ್ಟೈಯನ್ (ತ): ಬೆ.9.55ಕ್ಕೆ, ಸಂ.4ಕ್ಕೆ, ರಾ.10.05ಕ್ಕೆ, ಮಾರ್ಟಿನ್ (ಕ): ಮ.1.05ಕ್ಕೆ, ರಾ.7.10ಕ್ಕೆ.
ಸ್ಕ್ರೀನ್ 2	ಜಿಗ್ರಾ (ಹಿಂ): ಬೆ.10.15ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಮಾರ್ಟಿನ್ (ಕ): ಮ.1.15ಕ್ಕೆ, ಬ್ಲ್ಯಾಕ್ (ತ): ಸಂ.4.30ಕ್ಕೆ
ಸ್ಕ್ರೀನ್ 3	ಮಾರ್ಟಿನ್ (ಕ): ಬೆ.10.10ಕ್ಕೆ, ರಾ.7ಕ್ಕೆ, ಇಬ್ಬನಿ ತಬ್ಬಿದ ಇಳೆಯಲಿ (ಕ): ಮ.1.15ಕ್ಕೆ, ಅನ್ನ (ಕ): ಸಂ.4.30ಕ್ಕೆ, ವಿಕ್ಕಿ ವಿದ್ಯಾ ಕಾ ಹೂ ವಾಲ ವೀಡಿಯೋ (ಹಿಂ): ರಾ.10ಕ್ಕೆ.
ಸ್ಕ್ರೀನ್ 4	ಮಾರ್ಟಿನ್ (ಕ): ಬೆ.9ಕ್ಕೆ, ಸಂ.4ಕ್ಕೆ, ರಾ.10ಕ್ಕೆ, ವೆಟ್ಟೈಯನ್ (ತ): ಮ.12.50ಕ್ಕೆ, ಸಂ.6.55ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ದೇವರ 1 (ತೆ): ಮ.12.20ಕ್ಕೆ, ವೆಟ್ಟೈಯನ್ (ತ): ಮ.3.35ಕ್ಕೆ, ಸಂ.6.40ಕ್ಕೆ, ಮಾರ್ಟಿನ್ (ಕ): ರಾ.9.45ಕ್ಕೆ.
ಸ್ಕ್ರೀನ್ 2	ವೆಟ್ಟೈಯನ್ (ತ): ಬೆ.10ಕ್ಕೆ, ಮಾರ್ಟಿನ್ (ಕ): ಮ.1ಕ್ಕೆ, ಮ.3.30ಕ್ಕೆ, ಸಂ.6.40ಕ್ಕೆ, ರಾ.9.30ಕ್ಕೆ
ಸ್ಕ್ರೀನ್ 3	ಮಾರ್ಟಿನ್ (ಕ): ಬೆ.9ಕ್ಕೆ, ಬೆ.11.50ಕ್ಕೆ, ಮ.2.40ಕ್ಕೆ, ಸಂ.5.30ಕ್ಕೆ, ವೆಟ್ಟೈಯನ್ (ತ): ರಾ.8.20ಕ್ಕೆ.
ಸ್ಕ್ರೀನ್ 4	ವೆಟ್ಟೈಯನ್ (ಕ): ಮ.12.25ಕ್ಕೆ, ವೆಟ್ಟೈಯನ್ (ತ): ಮ.3.30ಕ್ಕೆ, ಸಂ.6.35ಕ್ಕೆ, ರಾ.9.40ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಸಿದ್ದರಾಮಯ್ಯ ವಿರುದ್ಧದ ಮುಡಾ ಹಗರಣ

ಹಿಂದಿನ ಮೈಸೂರು ಎಡಿಸಿ ಪಾಲಯ್ಯಗೆ ಮತ್ತೆ ಸಮನ್ಸ್



ಪಾಲಯ್ಯ

ಮೈಸೂರು, ಅ.21(ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಮುಡಾ ಹಗರಣದಲ್ಲಿ ಹಿಂದೆ ಮೈಸೂರು ಜಿಲ್ಲೆ ಅಪರ ಜಿಲ್ಲಾಧಿಕಾರಿ(ಎಡಿಸಿ) ಯಾಗಿ ಅನ್ಯಕ್ರಾಂತಕ್ಕೆ ಸಹಿ ಮಾಡಿದ್ದ ಪಾಲಯ್ಯ ಲೋಕಾಯುಕ್ತ ವಿಚಾರಣೆಗೆ ಹಾಜರಾಗದ ಕಾರಣ ಎರಡನೇ ಬಾರಿಗೆ ಸಮನ್ಸ್ ನೀಡಲಾಗಿದೆ ಎಂದು ತಿಳಿದು ಬಂದಿದೆ.

ಮೈಸೂರಿನ ಕೆಸರೆ ಗ್ರಾಮದ ಸರ್ವೆ ನಂಬರ್ 464 ರ 3.16 ಎಕರೆ ಭೂಮಿ ಅನ್ಯಕ್ರಾಂತ ಆದೇಶಕ್ಕೆ ಅಂದು 2004 ರಲ್ಲಿ ಅಪರ ಜಿಲ್ಲಾಧಿಕಾರಿಯಾಗಿದ್ದ ಪಾಲಯ್ಯ ಸಹಿ ಮಾಡಿದ್ದರು.

ಈಗಾಗಲೇ ಆ ಭೂಮಿಯಲ್ಲಿ ಮುಡಾ ಬಡಾವಣೆ ನಿರ್ಮಾಣ ಮಾಡಿ ಫಲಾನುಭವಿಗಳಿಗೆ ನಿವೇಶನ ಮಂಜೂರು ಮಾಡಿದೆ. ಆದರೂ ಆ ಭೂಮಿಯನ್ನು ಅಂದಿನ ಜಿಲ್ಲಾಧಿಕಾರಿ ಆಗಿದ್ದ ಹಾಲಿ ರಾಯಚೂರು ಸಂಸದ ಕುಮಾರ್ ನಾಯಕ್ ಕೃಷಿ ಭೂಮಿ ಎಂದು ಅನ್ಯಕ್ರಾಂತ ಮಾಡಿ ಸಹಿ ಮಾಡಿದ್ದರು. ಇವರ ಜೊತೆಗೆ ಪಾಲಯ್ಯ ಕೂಡ ಸಹಿ ಹಾಕಿದ್ದರು.

ಈ ಹಿನ್ನೆಲೆ ಕುಮಾರ್ ನಾಯಕ್ ಜೊತೆಗೆ ಪಾಲಯ್ಯ ಅವರಿಗೆ ಲೋಕಾಯುಕ್ತರು ಸಮನ್ಸ್ ಜಾರಿ ಮಾಡಿದ್ದರು. ಮೊನ್ನೆ ಕುಮಾರ್ ನಾಯಕ್ ಲೋಕಾಯುಕ್ತ ಮುಂದೆ ವಿಚಾರಣೆಗೆ ಹಾಜರಾಗಿದ್ದರು. ಆದರೆ ಪಾಲಯ್ಯ ಗೈರಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಪಾಲಯ್ಯರಿಗೆ ಲೋಕಾಯುಕ್ತರು ಎರಡನೇ ಬಾರಿಗೆ ಸಮನ್ಸ್ ಜಾರಿ ಮಾಡಿದ್ದಾರೆ. ಈಗ ಪಾಲಯ್ಯ ವಿಚಾರಣೆಯಲ್ಲಿ ಭಾಗಿಯಾಗುತ್ತಾರೆಯೇ ಎಂಬುದನ್ನು ಕಾದು ನೋಡಬೇಕಿದೆ.

ಸಿದ್ದರಾಮಯ್ಯ ವಿರುದ್ಧದ ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ದಾಖಲಾತಿಗಳಿಗೆ ಸಹಿ ಮಾಡಿರುವ ಎಲ್ಲಾ ನಿವೃತ್ತ ಹಾಗೂ ಹಾಲಿ ಅಧಿಕಾರಿಗಳಿಗೆ ಲೋಕಾಯುಕ್ತರು ಸಮನ್ಸ್ ನೀಡಿ ವಿಚಾರಣೆ ಮಾಡುತ್ತಿದ್ದಾರೆ. ಈ ಮೂಲಕ ಲೋಕಾಯುಕ್ತರ ತನಿಖೆ ಚುರುಕುಗೊಂಡಿದ್ದು, ಹಲವು ಆಯಾಮ ಪಡೆಯುತ್ತಿದೆ.

ಮುಡಾ ನಿವೇಶನ ಹಂಚಿಕೆ ಹಗರಣ

ಮಾಜಿ ಅಧ್ಯಕ್ಷರು, ನಿವೃತ್ತ ಸಿಬ್ಬಂದಿ ತನಿಖೆಗೆ ಇಡಿ ನಿರ್ಧಾರ

ಬೆಂಗಳೂರು, ಅ.21(ಕೆಎಂಶಿ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಬಿಡಿ ನಿವೇಶನಗಳ ಹಂಚಿಕೆಗೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ(ಇಡಿ), ಪ್ರಾಧಿಕಾರದ ಮಾಜಿ ಅಧ್ಯಕ್ಷರೂ ಹಾಗೂ ಸಂಸ್ಥೆಯ 12ಕ್ಕೂ ಹೆಚ್ಚು ವಿವಿಧ ಶ್ರೇಣಿಯ ಅಧಿಕಾರಿಗಳಿಗೆ ನೋಟಿಸ್ ನೀಡಿ ವಿಚಾರಣೆಗೆ ಒಳಪಡಿಸಲು ಉದ್ದೇಶಿಸಿದೆಯಂತೆ.

ಪ್ರಾಧಿಕಾರದಲ್ಲಿ 2004ರಿಂದ ಇದುವರೆಗೂ ಬಿಡಿ ನಿವೇಶನಗಳ ಹಂಚಿಕೆಗೆ ಸಂಬಂಧಿಸಿದಂತೆ ನಡೆದಿರುವ ಅವ್ಯವಹಾರಗಳ ಬಗ್ಗೆ ಇಡಿ ಈಗಾಗಲೇ ಮುಡಾ ಹಾಗೂ ತಾಲೂಕು ಕಚೇರಿಗಳ ಮೇಲೆ ದಾಳಿ ನಡೆಸಿ ಮಹತ್ತರ ದಾಖಲೆಗಳನ್ನು ವಶಪಡಿಸಿಕೊಂಡಿದೆ.

ತಮಗೆ ದೊರೆತಿರುವ ಮಾಹಿತಿ ಆಧಾರದ ಮೇಲೆ ಮಾಜಿ ಅಧ್ಯಕ್ಷರು, ನಿವೃತ್ತ ಐಎಎಸ್ ಅಧಿಕಾರಿಗಳು, ಹಾಲಿ ಐಎಎಸ್ ಅಧಿಕಾರಿಗಳು, ಮೂವರು ಕೆಎಎಸ್ ಅಧಿಕಾರಿಗಳು ಸೇರಿದಂತೆ ಮುಡಾ, ಕಂದಾಯ ಹಾಗೂ ನೋಂದಣಿ ಇಲಾಖೆಯ ಅಧಿಕಾರಿಗಳಿಗೆ ನೋಟಿಸ್ ಜಾರಿ ಮಾಡಲಿದೆ ಎಂದು ಉನ್ನತ ಮೂಲಗಳು ತಿಳಿಸಿವೆ.

ಅವರಿಂದ ವಿವರಣೆ ಪಡೆದ ನಂತರ ಮುಡಾದಲ್ಲಿ ಹಸ್ತಕ್ಷೇಪ ಮಾಡಿರುವ ಜನಪ್ರತಿನಿಧಿಗಳನ್ನು ವಿಚಾರಣೆಗೆ ಒಳಪಡಿಸಲು ಉದ್ದೇಶಿಸಿದೆ. ದಾಳಿ ಸಂದರ್ಭದಲ್ಲಿ ತನಿಖೆಗೆ ಅಗತ್ಯವಿರುವ ಎಲ್ಲಾ ದಾಖಲೆಗಳನ್ನು ವಶಪಡಿಸಿಕೊಳ್ಳುವಲ್ಲಿ ಇಡಿ ಯಶಸ್ವಿಯಾಗಿದೆ.

2013ರಿಂದ 2018 ಹಾಗೂ ಕಳೆದ ಒಂದು ವರ್ಷ ನಾಲ್ಕು ತಿಂಗಳ ಅವಧಿಯಲ್ಲಿನ ಕಡತಗಳು ಇಡಿಗೆ ಈ ಮೊದಲು ಲಭ್ಯವಾಗಿರಲಿಲ್ಲ. ನಂತರದ ಪರಿಶೀಲನೆ ವೇಳೆ ಅಧಿಕಾರಿಗಳಿಗೆ ಬಿಸಿ ಮುಟ್ಟಿಸಿ, ಆಧುನಿಕ ತಂತ್ರಜ್ಞಾನ ಬಳಸಿ ಮೂಲ ದಾಖಲೆಗಳ ಪ್ರತಿ ತೆಗೆದುಕೊಳ್ಳುವಲ್ಲಿ ಇ.ಡಿ. ಯಶಸ್ವಿಯಾಗಿದೆ.

ದಾಖಲೆಗಳ ಪರಿಶೀಲನೆ ವೇಳೆ ಅಧಿಕಾರಿಗಳು ಕೆಲವೊಮ್ಮೆ ಕಾನೂನನ್ನು ಗಾಳಿಗೆ ತೂರಿ ನಿವೇಶನಗಳನ್ನು ಹಂಚಿಕೆ ಮಾಡಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ.

ಅದರಲ್ಲೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕುಟುಂಬ ಪಡೆದಿದ್ದ 14 ಬಿಡಿ ನಿವೇಶನಗಳಿಗೆ ಸಂಬಂಧಿಸಿದಂತೆ ಬಹುತೇಕ ದಾಖಲೆಗಳನ್ನು ಇಡಿ ವಶಪಡಿಸಿಕೊಂಡಿದೆ.

ಮುಡಾ ಅಷ್ಟೇ ಅಲ್ಲ, ಸ್ಥಳೀಯ ತಹಸೀಲ್ದಾರ್ ಹಾಗೂ ನೋಂದಣಿ ಕಚೇರಿಯಲ್ಲೂ ಭೂಸ್ವಾಧೀನ ಮತ್ತು ನೋಂದಣಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ಇಡಿ ವಶ ಪಡಿಸಿಕೊಂಡಿದೆ.

ಹಾಸನಾಂಬ ಉತ್ಸವಕ್ಕೆ ಕ್ಷಣಗಣನೆ

ಜಿಲ್ಲಾ ಖಜಾನೆಯಿಂದ ದೇವಾಲಯಕ್ಕೆ ಒಡವೆಗಳ ರವಾನೆ

ಹಾಸನ: ವರ್ಷಕ್ಕೊಮ್ಮೆ ಮಾತ್ರ ದರ್ಶನ ಭಾಗ್ಯ ಕರುಣಿಸುವ ಹಾಸನದ ಅಧಿದೇವತೆ ಹಾಸನಾಂಬೆಯ ಜಾತ್ರಾ ಮಹೋತ್ಸವ ಇದೇ ಅ.24– ನ.3ರವರೆಗೆ ನಡೆಯಲಿದೆ.

ಜಾತ್ರೆಯ ಪೂರ್ವ ಸಿದ್ಧತಾ ಕಾರ್ಯ ಬಹುತೇಕ ಮುಗಿದಿದೆ. ಒಂದು ವರ್ಷದಿಂದ ಜಿಲ್ಲಾ ಖಜಾನೆಯಲ್ಲಿ ಭದ್ರಪಡಿಸಿದ್ದ ಒಡವೆಗಳನ್ನು ಇಂದು ಬಿಗಿ ಪೊಲೀಸ್ ಭದ್ರತೆಯ ನಡುವೆ ದೇವಾಲಯಕ್ಕೆ ತರಲಾಯಿತು. ದೇವಿಯ ಗರ್ಭಗುಡಿ ಬಾಗಿಲು ತೆರೆದ ಮಾರನೇ ದಿನ ಹಾಸನಾಂಬೆಗೆ ಆಭರಣ ಧಾರಣೆ ಮಾಡಲಾಗುತ್ತದೆ.

ಒಡವೆಗಳನ್ನು ತರುವ ಮುನ್ನ ಖಜಾನೆ ಮುಂದೆ ಅರ್ಚಕರು ಪೂಜೆ ಸಲ್ಲಿಸಿದರು. ಬಳಿಕ ಒಡವೆಗಳನ್ನು ಪಲ್ಲಕ್ಕಿ ಮೇಲಿರಿಸಿ ಬೆಳ್ಳಿ ರಥದ ಮೂಲಕ ಮೆರವಣಿಗೆ ಮಾಡಿಕೊಂಡು ದೇವಾಲಯಕ್ಕೆ ತರಲಾಯಿತು. ಮೆರವಣಿಗೆಗೂ ಮುನ್ನ ಹಾಸನಾಂಬ ದೇವಾಲಯದ ಪ್ರಧಾನ ಅರ್ಚಕ ನಾಗರಾಜ್ ಹಾಗೂ ಉಪವಿಭಾಗಾಧಿಕಾರಿಗಳು, ತಹಸೀಲ್ದಾರ್ ಸಮ್ಮುಖದಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು.

ದಸರಾ ವಸ್ತು ಪ್ರದರ್ಶನ ಆವರಣದಲ್ಲಿ ಮಾದಕ ವಸ್ತುಗಳ ಬಗ್ಗೆ ಜಾಗೃತಿ ಮಳಿಗೆ ಉದ್ಘಾಟನೆ



ಮಾದಕ ಪದಾರ್ಥದಿಂದಾಗುವ ದುಷ್ಪರಿಣಾಮದ ಜಾಗೃತಿ ಮಳಿಗೆ ಉದ್ಘಾಟನೆ

ಮೈಸೂರು, ಅ.21(ಎಂಕೆ)– ಮದ್ಯ ಮತ್ತು ಮಾದಕ ವಸ್ತುಗಳ ದುಷ್ಪರಿಣಾಮಗಳ ಬಗ್ಗೆ ಸಮಾಜದಲ್ಲಿ ಅರಿವು ಮೂಡಿಸುವುದು ಮುಖ್ಯವಾಗಿದ್ದು, ಈ ನಿಟ್ಟಿನಲ್ಲಿ ಪ್ರತಿಯೊಬ್ಬರೂ ತಮ್ಮ ಜವಾಬ್ದಾರಿಯನ್ನು ಅರಿತು ಜಾಗೃತರಾಗಬೇಕು ಎಂದು ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ತಿಳಿಸಿದರು.

ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ ಮದ್ಯ ಮತ್ತು ಮಾದಕವಸ್ತುಗಳ ಬಗ್ಗೆ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿಯು ನಿರ್ಮಿಸಿರುವ ಜಾಗೃತಿ ಮಳಿಗೆಯನ್ನು ಉದ್ಘಾಟಿಸಿ ಮಾತನಾಡಿದ ಅವರು ಸಾರ್ವಜನಿಕರು ಹಾಗೂ ವಿಶೇಷವಾಗಿ ದೇಶದ ಮುಂದಿನ ಜವಾಬ್ದಾರಿಯುತ ಪ್ರಜೆಗಳಾಗುವ ವಿದ್ಯಾರ್ಥಿಗಳಲ್ಲಿ ಮದ್ಯ ಮತ್ತು ಮಾದಕವಸ್ತುಗಳ ದುಷ್ಪರಿಣಾಮಗಳ ಕುರಿತು ಜಾಗೃತಿ, ಪ್ರಸ್ತುತ ಮುಖ್ಯವಾದ ವಿಶೇಷವಾಗಿದೆ ಎಂದು ಹೇಳಿದರು.

ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿಯ ಜಾಗೃತಿ ಮಳಿಗೆ ಬಹಳ ಅರ್ಥಪೂರ್ಣವಾಗಿ ಮೂಡಿಬಂದಿದೆ. ಮಳಿಗೆಯಲ್ಲಿ ಅನಾವರಣಗೊಳಿಸಿರುವ ವಿಷಯಗಳು, ರಾಷ್ಟ್ರಪಿತ ಮಹಾತ್ಮ ಗಾಂಧೀಜೀ ಸೇರಿದಂತೆ ಸಮಾಜದಲ್ಲಿ ಉತ್ತುಂಗ ಸ್ಥಾನದಲ್ಲಿರುವ ಗಣ್ಯರ ಜಾಗೃತಿ ಸಂದೇಶ, ಸಮಾಜದಲ್ಲಿ ಗಟ್ಟಿಯಾಗಿ ಬೇರೂರಲು ಪ್ರಯತ್ನಿಸುತ್ತಿರು ದುಷ್ಟ ಚಟಗಳನ್ನು ನಿಯಂತ್ರಿಸುವ ಸಂಬಂಧ ಒಳ್ಳೆಯ ಕಾರ್ಯವಾಗಿದೆ ಎಂದರು.

ಮೈಸೂರು ದಸರಾ ಪ್ರಯುಕ್ತ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ ಆಯೋಜಿಸಿರುವ ವಸ್ತು ಪ್ರದರ್ಶನವನ್ನು ವೀಕ್ಷಣೆಗೆ ಬರುವ ಪ್ರತಿಯೊಬ್ಬರೂ, ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿಯ ಮಳಿಗೆ ಭೇಟಿ ನೀಡಬೇಕು ಮತ್ತು ಇಲ್ಲಿ ಅನಾವರಣಗೊಳಿಸಿರುವ ಮಾಹಿತಿಯನ್ನು ತಮ್ಮ ಕುಟುಂಬಸ್ಥರು, ಸ್ನೇಹಿತರು, ನೆರೆಹೊರೆಯವರೊಂದಿಗೆ ಮಾಹಿತಿಯನ್ನು ಹಂಚಿಕೊಳ್ಳುವುದರಿಂದ ಮದ್ಯ ಮತ್ತು ಮಾದಕ ವಸ್ತುಗಳಿಂದ ಕುಟುಂಬ ಮತ್ತು ಸಮಾಜದ ಮೇಲಾಗುವ ದುಷ್ಪರಿಣಾಮದ ಬಗ್ಗೆ ಜಾಗೃತಿ ಮಾಡಿಸಲು ಸಹಕಾರಿಯಾಗಲಿದೆ ಎಂದು ಹೇಳಿದರು.

ಇದೇ ವೇಳೆ, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷರಾದ ಅಯೂಬ್ ಖಾನ್ ಅವರು ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಪ್ರಕಟಿಸಿರುವ ಮದ್ಯ ಮತ್ತು ಮಾದಕವಸ್ತುಗಳ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸುವ ಪುಸ್ತಕ ಮತ್ತು ಮಡಕೆ ಪತ್ರವನ್ನು ಬಿಡುಗಡೆಗೊಳಿಸಿದರು.

ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಕಾರ್ಯದರ್ಶಿ ಮಹೇಶ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಾಯಕ ನಿರ್ದೇಶಕ ಹರೀಶ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

ವಿಶ್ವ ಅರವಳಿಕೆ ದಿನಾಚರಣೆ

ಅನಸ್ತೇಶಿಯ ವಿಭಾಗದ ಮುಖ್ಯಸ್ಥೆ ಡಾ.ವಿಜಯಲಕ್ಷ್ಮಿಗೆ ಸನ್ಮಾನ




ಮೈಸೂರು, ಅ.21(ಎಂಕೆ)– ಮೈಸೂರು ರಾಮಕೃಷ್ಣನಗರದಲ್ಲಿರುವ ಸುಯೋಗ್ ಇನ್‌ಸ್ಟಿಟ್ಯೂಷನ್ ಆಫ್ ಅಲೈಡ್ ಹೆಲ್ತ್ ಸೈನ್ಸ್‌ನ ಅರಿವಳಿಕೆ ವಿಭಾಗ ಹಾಗೂ ಆಪರೇಷನ್ ಥಿಯೇಟರ್ ಟೆಕ್ನಾಲಜಿ ಮೈಸೂರು ವತಿಯಿಂದ ನಡೆದ ವಿಶ್ವ ಅರವಳಿಕೆ ದಿನಾಚರಣೆ ಕಾರ್ಯಕ್ರಮದಲ್ಲಿ ಇಂಡಿಯನ್ ಸೊಸೈಟಿ ಆಫ್ ಅನಸ್ತೇಶಿಯಾ ವಿಭಾಗದ ಅಧ್ಯಕ್ಷರು ಹಾಗೂ ಮೈಸೂರ್ ಮೆಡಿಕಲ್ ಕಾಲೇಜಿನ ಅನಸ್ತೇಶಿಯ ವಿಭಾಗದ ಮುಖ್ಯಸ್ಥರಾದ ಡಾ.ಬಿ.ಸಿ. ವಿಜಯಲಕ್ಷ್ಮಿ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಈ ವೇಳೆ ಸುಯೋಗ ಆಸ್ಪತ್ರೆಯ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ, ಸುಯೋಗ್ ಗ್ರೂಪ್ ಆಫ್ ಮೆಡಿಕಲ್ ಇನ್‌ಸ್ಟಿಟ್ಯೂಷನ್‌ನ ಸಿಇಓ ಡಾ.ಆರ್.ರಾಜೇಂದ್ರ ಪ್ರಸಾದ್, ವ್ಯವಸ್ಥಾಪಕ ನಿರ್ದೇಶಕ ಡಾ.ಎನ್.ಎಸ್.ರಾಮೇಗೌಡ, ಟ್ರಸ್ಟಿ ಶ್ರೀಮತಿ ಸುಧಾ ಯೋಗಣ್ಣ, ಡಾ.ಸೀಮಾ ಯೋಗಣ್ಣ, ಡಾ.ಲಿಂಗರಾಜು, ಡಾ.ಮಹೇಶ್ ಬಾಬು, ಡಾ.ಸಿಂಧು ಮತ್ತಿತರರಿದ್ದರು.

ಮಳೆ, ಇಳುವರಿ ಕೊರತೆ, ಯುದ್ಧದ ಹಿನ್ನೆಲೆಯಲ್ಲಿ

ಅಡುಗೆ ಎಣ್ಣೆ ಸೇರಿದಂತೆ ದೈನಂದಿನ ಬಳಕೆ ಪದಾರ್ಥಗಳ ಬೆಲೆ ಏರಿಕೆ



ಮೈಸೂರು, ಅ.21(ಎಂಕೆ)– ನಿರಂತರ ಮಳೆ, ಇಳುವರಿ ಕೊರತೆ, ಇಸ್ರೇಲ್–ಇರಾನ್ ನಡುವಿನ ಯುದ್ಧದ ಪರಿಣಾಮ ಅಡುಗೆ ಎಣ್ಣೆ ಸೇರಿದಂತೆ ದಿನಸಿ ಪದಾರ್ಥ, ಹಣ್ಣು–ತರಕಾರಿ ಬೆಲೆ ಏರಿಕೆಯಾಗಿದ್ದು, ಗ್ರಾಹಕರು ಸಂಕಷ್ಟ ಎದುರಿಸುವಂತಾಗಿದೆ.

ಕಳೆದೊಂದು ತಿಂಗಳ ಅವಧಿಯಲ್ಲಿ ಬಹುತೇಕ ಎಲ್ಲಾ ಬಗೆಯ ಅಡುಗೆ ಎಣ್ಣೆ, ದಿನಸಿ ಪದಾರ್ಥಗಳು ಹಾಗೂ ಹಣ್ಣು–ತರಕಾರಿ ಬೆಲೆಗಳಲ್ಲಿ ಸುಮಾರು 30 ರೂ.ವರೆಗೆ ಏರಿಕೆಯಾಗಿದ್ದು, ಗ್ರಾಹಕರ ಜೇಬಿಗೆ ಕತ್ತರಿ ಬಿದ್ದಿದೆ. ತಿಂಗಳ ಹಿಂದೆಯಷ್ಟೇ ಲೀಟರ್‌ಗೆ 108 ರೂ. ಇದ್ದ ಸನ್‌ಪ್ಯೂರ್(ಸನ್‌ಫ್ಲವರ್ ಆಯಿಲ್), ಈಗ 132 ರೂಗಳಾಗಿದ್ದು 24 ರೂ. ಏರಿಕೆಯಾಗಿದೆ.

ಹಾಗೆಯೇ ಫ್ರೀಡಂ ರಿಫೈನ್ಡ್ ಸನ್‌ಫ್ಲವರ್ ಆಯಿಲ್ ಲೀಟರ್‌ಗೆ 110 ರೂ. ನಿಂದ 130 ರೂ., ಫಾರ್ಚೂನ್ 110 ರೂ.ನಿಂದ 135 ರೂ., ಗೋಲ್ಡ್‌ವಿನ್ನರ್ 115 ರೂ.ನಿಂದ 135 ರೂ., ಪಾಮ್ ಆಯಿಲ್ 90 ರೂ.ನಿಂದ 120 ರೂ., ದೀಪದ ಎಣ್ಣೆ 100 ರೂ.ನಿಂದ 130 ರೂ., ಆರ್‌ಜಿ ತುಪ್ಪ 150 ರೂ.ನಿಂದ 170 ರೂ. ಹಾಗೂ ವನಸ್ಪತಿ ತುಪ್ಪ ಕೆಜಿಗೆ 100 ರಿಂದ 140 ರೂ.ಗೆ ಏರಿಕೆಯಾಗಿದೆ.

ದಿನಸಿ ಪದಾರ್ಥಗಳಲ್ಲಿ ತೊಗರಿಬೇಳೆ ಕೆಜಿಗೆ 165–185 ರೂ., ಉದ್ದಿನಬೇಳೆ 140 ರೂ., ಹೆಸರುಬೇಳೆ 118–120 ರೂ., ಹೆಸರುಕಾಳು 112–115 ರೂ., ಕಡಲೆಕಾಳು 100 ರೂ., ಹುರುಳಿಕಾಳು 80 ರೂ., ಗುಂಟೂರು ಮೆಣಸಿನಕಾಯಿ ಕೆಜಿಗೆ 180 ರೂ. ಇದ್ದರೆ, ಬ್ಯಾಡಗಿ 330 ರೂ. ಹಾಗೂ ಹೆಚ್ಚು ಖಾರದ ಒಣ ಮೆಣಸಿಕಾಯಿ ಕೆಜಿ 240 ರೂ.ಗೆ ಮಾರಾಟ ಮಾಡಲಾಗುತ್ತಿದೆ.

ದುಬಾರಿ ಹಣ್ಣು: ಆರೋಗ್ಯ ಕಾಪಾಡಿಕೊಳ್ಳಲು ಬೇಕಾದ ಹಣ್ಣುಗಳ ಬೆಲೆಯಲ್ಲೂ ಏರಿಕೆ ಕಂಡಿದೆ. ಸೇಬು(ಗಾತ್ರಕ್ಕೆ ಅನುಗುಣವಾಗಿ) ಕೆಜಿಗೆ 140–200 ರೂ., ದಾಳಿಂಬೆ 200–280 ರೂ., ದ್ರಾಕ್ಷಿ 200 ರೂ., ಕಪ್ಪುದ್ರಾಕ್ಷಿ 200–230 ರೂ., ಕಿತ್ತಳೆಯಲ್ಲಿ ನಾಗಪುರ ಕಿತ್ತಳೆ ಕೆಜಿಗೆ 100 ರೂ. ಇದ್ದರೆ, ಸಿಟ್ರಸ್ ಕಿತ್ತಳೆ 200 ರೂ. ಆಗಿದೆ. ಅದೇ ರೀತಿ ಅನಾನಸ್ 100 ರೂ., ಮೊಸಂಬಿ 100–120 ರೂ., ಸಪೋಟ 120 ರೂ., ಬಟರ್‌ಫ್ರೂಟ್ಸ್ 380 ರೂ., ಕಿವಿ ಫ್ರೂಟ್ಸ್ 120–160 ರೂ. ಆಗಿದೆ ಎಂದು ದೇವರಾಜ ಮಾರುಕಟ್ಟೆ ವೈವೈವಿ ಫ್ರೂಟ್‌ಸ್ಟಾಲ್‌ನ ಯೂನಸ್ ತಿಳಿಸಿದರೆ, ಏಲಕ್ಕಿ ಬಾಳೆಹಣ್ಣು ಕೆಜಿಗೆ 80 ರೂ., ರಸಬಾಳೆ 120 ರೂ. ಹಾಗೂ ಪಚ್ಚಬಾಳೆ 30 ರೂ. ಇದೆ ಎಂದು ಬಾಳೆಹಣ್ಣಿನ ವ್ಯಾಪಾರಿ ಶಿವಕುಮಾರ್ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ನಿರಂತರವಾಗಿ ಮಳೆ ಸುರಿಯುತ್ತಿದೆ. ಇನ್ನೂ ಫಸಲು ಬಂದಿಲ್ಲ. ಅಲ್ಲದೆ ತೈಲ ರಾಷ್ಟ್ರಗಳಲ್ಲಿ ಯುದ್ಧ ನಡೆಯುತ್ತಿದೆ. ಇದೆಲ್ಲದರ ಕಾರಣಕ್ಕೆ ಅಡುಗೆ ಎಣ್ಣೆ, ಹಣ್ಣು–ತರಕಾರಿ ಬೆಲೆ ಏರಿಕೆಯಾಗಿದೆ. ನವರಾತ್ರಿ, ದೀಪಾವಳಿ ಇನ್ನಿತರೆ ಸಾಲು ಸಾಲು ಹಬ್ಬಗಳಿಂದ ಬೆಲೆ ಏರಿಕೆಯಾದರೂ ಕೊಳ್ಳುವವರ ಸಂಖ್ಯೆ ಕಡಿಮೆಯಾಗಿಲ್ಲ ಎಂದು ಕೆಲ ವ್ಯಾಪಾರಸ್ಥರು ಮಾಹಿತಿ ನೀಡಿದರು.

ಗ್ರಾಹಕರ ಜೇಬಿಗೆ ಕತ್ತರಿ ಇಟ್ಟ ತರಕಾರಿ: ಅಡುಗೆ ಎಣ್ಣೆ, ದಿನಸಿ ಪದಾರ್ಥಗಳಲ್ಲಿ ಬೆಲೆ ಏರಿಕೆಯಂತೆ ತರಕಾರಿಗಳ ಬೆಲೆಯಲ್ಲೂ ಏರಿಕೆಯಾಗಿದ್ದು ಗ್ರಾಹಕರ ಜೇಬಿಗೆ ಕತ್ತರಿ ಬಿದ್ದಿದೆ. ನಿತ್ಯ ಬಳಕೆಯ ಟೊಮೆಟೊ ಕೆಜಿಗೆ 40–60 ರೂ.ಗಳಾಗಿದ್ದರೆ, ಈರುಳ್ಳಿ ಸಹ 40–60 ರೂ.ಗೆ ಏರಿದೆ. ಎರಡ್ಮೂರು ತಿಂಗಳ ಹಿಂದೆ 100 ರೂ.ಗೆ 3–4 ಕೆಜಿ ಸಿಗುತ್ತಿದ್ದ ಈರುಳ್ಳಿ ಬೆಲೆಯಲ್ಲಿ 20 ರಿಂದ 30 ರೂ.ಹೆಚ್ಚಾಗಿದೆ.

ಊಟಿ ಬೀನ್ಸ್ ಕೆಜಿಗೆ 100–120 ರೂ., ನಾಟಿ ಬೀನ್ಸ್ 80 ರೂ., ಕ್ಯಾರೆಟ್ 40–50 ರೂ., ಬೀಟ್ರೂಟ್ 40–50 ರೂ., ಗೆಡ್ಡೆಕೋಸು 50–60 ರೂ., ಬೆಂಡೆಕಾಯಿ 30–50 ರೂ., ತೊಂಡೆಕಾಯಿ 35–40 ರೂ., ಹೂಕೋಸ್ 40 ರೂ., ಎಲೆಕೋಸು 30 ರೂ., ಬದನೆಕಾಯಿ 50–60 ರೂ., ನುಗ್ಗೆಕಾಯಿ 120 ರೂ. ಇದೆ. ಹಾಗೆಯೇ ಬೆಳ್ಳುಳ್ಳಿ 300–400 ರೂ., ಶುಂಠಿ 100–120 ರೂ., ಆಲೂಗಡ್ಡೆ 30–40 ರೂ., ನಿಂಬೆಹಣ್ಣು 10 ರೂ.ಗೆ ಎರಡು(ಗಾತ್ರಕ್ಕೆ ಅನುಗುಣವಾಗಿ), ಕೊತ್ತಂಬರಿ ಸೊಪ್ಪು ಒಂದು ದೊಡ್ಡ ಕಟ್ಟಿಗೆ 20 ರೂ., ಪುದಿನ ಸೊಪ್ಪು ಕಟ್ಟಿಗೆ 10 ರೂ.ನಂತೆ ಮಾರಾಟವಾಗುತ್ತಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಅಭಿನಂದನೆ



ಭಾನುವಾರ ನಡೆದ ಕೆಆರ್. ಬ್ಯಾಂಕ್ ನಿರ್ದೇಶಕರ ಚುನಾವಣೆಯಲ್ಲಿ ವಿಜೇತರಾದ ನಂ.ಸಿದ್ದಪ್ಪನವರ ತಂಡದ ನಿರ್ದೇಶಕರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ, ಅಭಿನಂದಿಸಿದರು. ಈ ಸಂದರ್ಭದಲ್ಲಿ ನಂ.ಸಿದ್ದಪ್ಪ, ಪ್ರತಿಧ್ವನಿ ಪ್ರಸಾದ್, ಜ್ಯೋತಿ ಪ್ರತಿಧ್ವನಿಪ್ರಸಾದ್, ಬಸವರಾಜ್ ಬಸಪ್ಪ ಅರುಣ್ ಸಿದ್ದಪ್ಪ ಶಿವಪ್ರಕಾಶ್, ಭಾಸ್ಕರ್, ಗಣೇಶ್, ಮೂರ್ತಿ ಇತರರು ಉಪಸ್ಥಿತರಿದ್ದರು.

UPS Service
Great exchange offer 20% discount
AMC available
Kuvempunagar, Mysuru
9901200444

SITE FOR SALE
50x80 North face, 40 feet road, Roopa Nagar, 3600 per sq feet.
30x40 site for sale in Vishwaprajna attached layout, Halekesare, Mysore. Price: Rs. 38 Lakhs.
Call: 88846 16461 / 87922 35466

HIRING
* SALES EXECUTIVE
* ACCOUNTANT (with min. 1 year experience)
* DELIVERY BOY
Mob: 9008435544
Mail: spectifysolutions@gmail.com

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯ ಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಜಮೀನಿನ ಸ್ವತ್ತನ್ನು ನನ್ನ ಕಕ್ಷಿದಾರರಾದ ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಮೈದನಹಳ್ಳಿ ಗ್ರಾಮದಲ್ಲಿ ವಾಸವಾಗಿರುವ **ಶ್ರೀ ನಾಗರಾಜು** ಬಿನ್ ಲೇಟ್ ತಮ್ಮಣ್ಣೇಗೌಡ ರವರು ಸದರಿ ಷೆಡ್ಯೂಲ್ ಜಮೀನಿನ ವಾಾಲೀಕರಾದ ಮೈಸೂರು ಸಿಟಿ, ವಿ.ವಿ. ಮೊಹಲ್ಲಾ, ಗೋಕುಲಂ ಪಾರ್ಕ್ ರಸ್ತೆ, ಗೋಕುಲಂ, ಮನೆ ನಂ. 3051/1 ರಲ್ಲಿ ವಾಸವಾಗಿರುವ **ಶ್ರೀ. ಎನ್. ರಾಜು** ಬಿನ್ ಲೇಟ್ ಕೃಷ್ಣ ಭಟ್ ರವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ. ಆದ ಕಾರಣ ಈ ಕೆಳಗೆ ನಮೂದಿಸಿರುವ ಷೆಡ್ಯೂಲ್ ಜಮೀನಿನ ವಿಚಾರದಲ್ಲಿ ಮೇಲೆ ತಿಳಿಸಿದ ವ್ಯಕ್ತಿಯಲ್ಲದೆ ಬೇರೆ ಯಾರಿಗಾದರೂ, ಯಾವುದೇ ರೀತಿಯ ಹಕ್ಕಾಗಲೀ, ಹಿತಾಸಕ್ತಿಯಾಗಲೀ, ಭಾಗಾಂಶವಾಗಲೀ ಅಥವಾ ಋಣಗಳಾಗಲೀ ಇದ್ದಲ್ಲಿ ನನ್ನನ್ನು ಮೊಬೈಲ್ ನಂ. **99162 24750** ರ ಮೂಲಕವಾಗಲೀ ಅಥವಾ ಖುದ್ದಾಗಿ ನನ್ನ ಕಛೇರಿಯ ವಿಳಾಸದಲ್ಲಾಗಲೀ ಈ ದಿನದಿಂದ ಏಳು (7) **ದಿನಗಳ** ಒಳಗಾಗಿ ಸಂಭಂದಪಟ್ಟ ದಾಖಲಾತಿಗಳೊಡನೆ ಸಂಪರ್ಕಿಸುವುದು. ಇಲ್ಲವಾದರೆ ಈ ಕೆಳಗೆ ನಮೂದಿಸಿರುವ ಷೆಡ್ಯೂಲ್ ಜಮೀನಿನ ಸ್ವತ್ತಿಗೆ ಸಂಭಂದಪಟ್ಟಂತೆ ಮೇಲೆ ತಿಳಿಸಿದ ವ್ಯಕ್ತಿಯನ್ನು ಹೊರತು ಪಡಿಸಿ ಬೇರೆ ಯಾರಿಗೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿಯಾಗಲೀ ಇಲ್ಲವೆಂದೇ ಪರಿಗಣಿಸಿ ನನ್ನ ಕಕ್ಷಿದಾರರು ಈ ಕೆಳಗೆ ನಮೂದಿಸಿರುವ ಷೆಡ್ಯೂಲ್ ಸ್ವತ್ತನ್ನು ಖರೀದಿಸುತ್ತಾರೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಆನಂದೂರು ಗ್ರಾಮಕ್ಕೆ ಸೇರಿದ ಸರ್ವೆ ನಂ. 394 ರಲ್ಲಿ ವಿಸ್ತೀರ್ಣ 3 ಎಕರೆ 36 ಗುಂಟೆ ಖುಷ್ಕಿ ಜಮೀನು.

ಸಹಿ/– ಡಿ.ಬಿ. ಪ್ರವೀಣ್ ವಕೀಲರು
#178/1, 1ನೇ ಮಹಡಿ, 11ನೇ ಮೇನ್, 5ನೇ ಕ್ರಾಸ್, ಜವರೇಗೌಡ ಪಾರ್ಕ್ ಹತ್ತಿರ, ಸರಸ್ವತಿಪುರಂ, ಮೈಸೂರು.
ಮೊ ನಂ. 9916224750
ಸ್ಥಳ: ಮೈಸೂರು ದಿನಾಂಕ: 21/10/2024

ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ



ಶ್ರೀಮತಿ ಎಂ.ಚಂದ್ರಕಲಾ

ಇವರು ದಿ:11-10-2024 ಶುಕ್ರವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧ ಉತ್ತರ ಕ್ರಿಯಾದಿ ಕಾರ್ಯವನ್ನು ದಿನಾಂಕ 22-10-2024 ಮಂಗಳವಾರ ಮಧ್ಯಾಹ್ನ 12 ಗಂಟೆಗೆ ನಮ್ಮ ಸ್ವಗೃಹ 5ನೇ ಕ್ರಾಸ್, ಕುರುಬಾರಳ್ಳಿ, ಮೈಸೂರು ಇಲ್ಲಿ ನಡೆಸುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತರು : ಶ್ರೀ ಎಂ.ರಮೇಶ್, ಮಗಳು ಮತ್ತು ಕುಟುಂಬರ್ಗದವರು.
ಭೋಜನ: ಸಂಜೆ 7.30ಕ್ಕೆ

ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ



ಶ್ರೀಮಾನ್ ಎಂ.ಮಹದೇವು
ನಿವೃತ್ತ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು

ಇವರು ದಿ:12–10–2024 ಶನಿವಾರ ವಿಜಯದಶಮಿಯಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾದ ಉತ್ತರ ಕ್ರಿಯಾದಿ ಕಾರ್ಯಗಳನ್ನು ದಿನಾಂಕ 22–10–2024ನೇ ಮಂಗಳವಾರದಂದು ಸಂಜೆ 6–30ಕ್ಕೆ ನಮ್ಮ ಸ್ವಗೃಹ #8. ಮಲ್ಲಿಗೆ ರಸ್ತೆ, ಸಿ.ಐ.ಟಿ.ಬಿ ಎರಡನೇ ಹಂತ, ವಿಶ್ವೇಶ್ವರ ನಗರ, ಮೈಸೂರು–8. ಇಲ್ಲಿ ನಡೆಸಲು ನಿಶ್ಚಯಿಸಿರುವುದರಿಂದ ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ತಿಳಿದು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ಕೋರುವ.

ದುಃಖತಪ್ತರು : ಕುಟುಂಬವರ್ಗದವರು ಹಾಗೂ ಬಂಧುಮಿತ್ರರು

3ನೇ ವರ್ಷದ ಪುಣ್ಯಸ್ಮರಣೆ



ಶ್ರೀ. ಬೋರಪ್ಪರವರು
(ಪ್ರಧಾನ ಕಾರ್ಯದರ್ಶಿ, ಶ್ರೀ. ಸಿದ್ದಪ್ಪಾಜಿ ದೇವಸ್ಥಾನ ಟ್ರಸ್ಟ್)
ಕುಂಬಾರಗೇರಿ, ಲಷ್ಕರ್ ಮೊಹಲ್ಲಾ, ಮೈಸೂರು
ದುಃಖತಪ್ತರು: ಸ್ನೇಹ ಬಳಗ



WE ARE HIRING

SHAH | Hero

SALES	SERVICE	SPARES	ACCOUNTS
Showroom Manager	Service Managers	Spares Manager	Accountant (Tally)
Rural Network Manager	Front Line Supervisors		
Marketing Manager			
Dealer Sales Executive			

REQUIREMENTS	EXPERIENCE	SALARY/MONTH
Managerial Positions	Minimum 5 years	30,000 + Incentives
Executive & Other Positions	Minimum 2 years	18,000 + Incentives

WORK LOCATIONS
Nazarbad | Kantharaja Urs Road | Kuvempunagar | JP Nagar

Walk-in Interview on 23-10-2024 from 10 am - 1 pm
or Send your Resume to 97422-97450
T&C Apply*

Shah Mobikes Pvt. Ltd., Lokaranjan Mahal Road, Nazarbad, Mysore.

ಮೈಸೂರು ಮಿತ್ರ – ಓದುಗರ ಗಮನಕ್ಕೆ

45

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು

ದೀಪಾವಳಿ ಹಬ್ಬದ ಪ್ರಯುಕ್ತ!
ಪರಿಶುದ್ಧ ರೇಷ್ಮೆ ಸೀರೆ ಮತ್ತು ಉತ್ಪನ್ನಗಳ
ಪ್ರದರ್ಶನ ಮತ್ತು ಮಾರಾಟ



LAST 6 DAYS

ಸಿಲ್ಕ್ ಇಂಡಿಯ® 2024

ಭಾರತದ ಎಲ್ಲಾ ರಾಜ್ಯಗಳಿಂದ ಪರಿಶುದ್ಧ ರೇಷ್ಮೆ ಸೀರೆಗಳು ಹಾಗೂ ರೇಷ್ಮೆ ಉತ್ಪನ್ನಗಳು

ಬಿಹಾರ್ : ತಸ್ಸರ್ ರೇಷ್ಮೆ ಸೀರೆಗಳು, ಸ್ಟೋಲ್ಸ್, ಶಾಲುಗಳು, ಕರ್ನಾಟಕ : ಕ್ರೇಪ್, ಶಿಫಾನ್ ಮತ್ತು ಜಾರ್ಜೆಟ್ ಸಿಲ್ಕ್ ಸೀರೆಗಳು, ಆರಿಣಿ ತಮಿಳುನಾಡು : ಕಾಂಚಿಪುರಂ ಸಿಲ್ಕ್ ಮತ್ತು ಮದುವೆ ಸೀರೆಗಳು, ಆಂಧ್ರ ಪ್ರದೇಶ : ಧರ್ಮಾವರಂ ಸೀರೆಗಳು, ಉಪ್ಪಡಾ ಮತ್ತು ಗೊಡ್ವಾಲ್ ಸೀರೆಗಳು, ಮಂಗಲಗಿರಿ ಹಾಗೂ ಪೋಚಂಪಲ್ಲಿ ಸೀರೆಗಳು ಉತ್ತರ ಪ್ರದೇಶ : ಬನಾರಸ್ ಮತ್ತು ಜಮ್‌ದಾನಿ, ಜಮಾವರ್ ರೇಷ್ಮೆ, ಟೆಂಪಲ್ ಬಾರ್ಡರ್‌ಉಳ್ಳ ಮುಲ್‌ಬಾರಿ ಸಿಲ್ಕ್, ಲಕ್ನೋ ಚಿಕಾನ್ ಕಸೂತಿ, ಮಹಾರಾಷ್ಟ್ರ : ಪೈಥಾಣಿ ಸೀರೆ, ಡಿಸೈನರ್ ಎಂಬ್ರಾಯಿಡರಿ ಸೀರೆ ಮತ್ತು ಡ್ರೆಸ್, ಪಂಜಾಬ್ : ಪಟಿಯಾಲ ಡ್ರೆಸ್ ಮೆಟೀರಿಯಲ್ಸ್ ಒರಿಸ್ಸಾ : ಸಂಬಲ್‌ಪುರಿ, ಇಕ್ಕತ್, ಬೋಂಕೈ ಸೀರೆಗಳು, ಹ್ಯಾಂಡ್‌ಲೂಮ್ ಸಿಲ್ಕ್ ಕಾಟನ್ ಚತ್ತೀಸ್‌ಘಡ್ : ರಾ ಸಿಲ್ಕ್ ಮತ್ತು ಕೋಸಾ ಸೀರೆಗಳು, ಮಧ್ಯ ಪ್ರದೇಶ : ಮಹೇಶ್ವರಿ ಮತ್ತು ಚಂದೇರಿ ಸಿಲ್ಕ್ ಪಶ್ಚಿಮ ಬಂಗಾಳ : ಢಾಕ ಸೀರೆಗಳು, ಬಲ್‌ಚೂರಿ ರೇಷ್ಮೆ, ಕಲ್ಕೋತ್ತಾ ರೇಷ್ಮೆ ಸೀರೆಗಳು ಮತ್ತು ಕಾಂತ ಎಂಬ್ರಾಯಿಡರಿ ಸೀರೆಗಳು, ಅಸ್ಸಾಂ : ಮುಗಾ ಮತ್ತು ಎರ್ರಿ ರೇಷ್ಮೆ ಸೀರೆಗಳು, ಜಮ್ಮು ಮತ್ತು ಕಾಶ್ಮೀರ : ಚಿನಾನ್, ಟೆಡ್ಡಿ ರೇಷ್ಮೆ ಸೀರೆಗಳು, ಪಶ್ಮೀನಾ ಸೀರೆಗಳು, ಸ್ಟೋಲ್ಸ್, ಶಾಲುಗಳು ರಾಜಾಸ್ಥಾನ್ : ಕೋಟಾ ಸಿಲ್ಕ್, ಕೈ ಅಚ್ಚಿನ ಸೀರೆಗಳು ...

18 ರಿಂದ 27 ಅಕ್ಟೋಬರ್ 2024 ರವರೆಗೆ | ಸಮಯ : ಬೆಳಗ್ಗೆ 10.30 ರಿಂದ ಸಂಜೆ 8.30 ರವರೆಗೆ

ನಂಜರಾಜ ಬಹದ್ದೂರ್ ಛತ್ರ
ವಿನೋಬಾ ರಸ್ತೆ, ಮೈಸೂರು

Entry Free | All Credit & Debit Cards Accepted | Contact : 98977 09954, 99008 03345
(Registered with O/o D.C (H) Ministry of Textiles, Govt. of India)

ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರ

ದೊಡ್ಡಕೆರೆ ಮೈದಾನ, ಇಂದಿರಾನಗರ, ಮೈಸೂರು–570010.
ದೂರವಾಣಿ (ಕಛೇರಿ): 0821–2523626
e-mail::exhibitionauthority@gmail.com
ಸಂಖ್ಯೆ/ಕವಪ್ರಾ/ಮುಕಾನಿ/2024–25 ದಿನಾಂಕ: 18.10.2024

ಪ್ರಕಟಣೆ

ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ವಾಹನ ನಿಲುಗಡೆ ಪ್ರದೇಶ ಶ್ರೀ ಡಿ ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣ ಕುಸ್ತಿ ಅಖಾಡದ ಮುಂಭಾಗ ಹಾಗೂ ಹಿಂಭಾಗ ಪ್ರಾದೇಶದಲ್ಲಿ ಪ್ರವಾಸಿಗರಿಗೆ ನಿಲುಗಡೆ ಮಾಡುವ ವಾಹನಗಳ ಮೇಲೆ ಶುಲ್ಕ ವಸೂಲು ಮಾಡುವ ಗುತ್ತಿಗೆ ಹಕ್ಕನ್ನು ಪಡೆದುಕೊಳ್ಳಲು "ಇ" ಪ್ರಕ್ಯೂರ್‌ಮೆಂಟ್ ಮುಖಾಂತರ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್‌ನ ಮೊತ್ತ ರೂ.20,00,000/–(18% ಜಿ.ಎಸ್.ಟಿ ಸೇರಿದಂತೆ) ಗಳಲಾಗಿದ್ದು, ಟೆಂಡರ್ ಅನ್ನು ದಿ: 26.10.2024ರಂದು ಸಂಜೆ: 04:00 ಗಂಟೆಯವರೆಗೆ ಸಲ್ಲಿಸಬಹುದಾಗಿದೆ. ಸದರಿ ಟೆಂಡರ್‌ಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳುಬೇಕಾದಲ್ಲಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸುವುದು ಮತ್ತು ವೆಬ್‌ಸೈಟ್ https://kppp.karnataka.gov.in ನಲ್ಲಿ ಮಾಹಿತಿ ಪಡೆಯಬಹುದು.

ಸಹಿ/– ಟೆಂಡರ್ ಆಹ್ವಾನಿಸುವ ಪ್ರಾಧಿಕಾರ ಹಾಗೂ
ಸಹಾಯಕ ಕಾರ್ಯಪಾಲಕ ಅಭಿಯಂತರರು (ಸಿವಿಲ್),

DIPR/DDMYS-697/KSMCA-473/2024-25

ಕರ್ನಾಟಕ ಸರ್ಕಾರ
ಜಿಲ್ಲಾ ನಗರಾಭಿವೃದ್ಧಿಕೋಶ, ಜಿಲ್ಲಾಧಿಕಾರಿಗಳ ಕಾರ್ಯಾಲಯ, ಹಾಸನ ಜಿಲ್ಲೆ, ಹಾಸನ.

ದೂ.ಸಂಖ್ಯೆ:08172–234839 E-mail: pdhassandudc@gmail.com
ನಂ:ಮುನಿಸಿ(3)ಸಿ.ಆರ್/63/2024–25 ದಿನಾಂಕ 18–10–2024

: ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ :

(ಇಂಡೆಂಟ್ ನಂಬರ್: DMA/2024-25/SE3890, ದಿನಾಂಕ 18-10-2024) ಜಿಲ್ಲಾಧಿಕಾರಿಯವರ ಕಛೇರಿ, ಹಾಸನ ಇಲ್ಲಿ ಕಛೇರಿ ನಿರ್ವಹಣೆಗೆ ಈ ಕೆಳಕಂಡ ಹುದ್ದೆಗಳನ್ನು ಹೊರಗುತ್ತಿಗೆ ಮೂಲಕ ಒದಗಿಸುವ ಬಗ್ಗೆ ಅರ್ಹ ಸಂಸ್ಥೆಯವರಿಂದ ಟೆಂಡರ್ ದಸ್ತಾವೇಜಿನಲ್ಲಿ ನಮೂದಿಸಿರುವ ಷರತ್ತುಗಳಿಗೊಳಪಟ್ಟು ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿದೆ. ಕ್ರ.ಸಂ.1)ಕಾಮಗಾರಿ ವಿವರ: ಜಿಲ್ಲಾಧಿಕಾರಿಯವರ ಕಛೇರಿಯಲ್ಲಿ 8 ಡೇಟಾ ಎಂಟ್ರಿ ಆಪರೇಟರ್, 1 ಡ್ರೈವರ್, 3 ಗ್ರೂಪ್ ಡಿ ಹುದ್ದೆಗಳನ್ನು ಹೊರಗುತ್ತಿಗೆ ಮೂಲಕ ತೆಗೆದುಕೊಳ್ಳುವ ಬಗ್ಗೆ. ಇಂಡೆಂಟ್ ನಂಬರ್ DMA/2024-25/SE3890, ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ): 34.04 ಇ.ಎಂ.ಡಿ(ರೂ.ಗಳಲ್ಲಿ): 85,000 ಇ–ಪ್ರೊಕ್ಯೂರ್‌ಮೆಂಟ್‌ನಂತೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 04–11–2024 ರ 17.30 ಗಂಟೆಯವರೆಗೆ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 06–11–2024 ರ 11.00 ಗಂಟೆಗೆ ಆರ್ಥಿಕ ಬಿಡ್ ತೆರೆಯುವ ದಿನಾಂಕ: 08–11–2024 ರ 11.00 ಗಂಟೆಗೆ ಆಸಕ್ತ ಸಂಸ್ಥೆಯವರು ನಿಗಧಿತ ದಿನಾಂಕದೊಳಗೆ ಟೆಂಡರ್ ಸಲ್ಲಿಸುವುದು. ಹೆಚ್ಚಿನ ವಿವರವನ್ನು ಈ ಕಛೇರಿಯ ಕೆಲಸದ ವೇಳೆಯಲ್ಲಿ ಮತ್ತು https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ.

ಸಹಿ/–ಯೋಜನಾ ನಿರ್ದೇಶಕರು,
ಜಿಲ್ಲಾ ನಗರಾಭಿವೃದ್ಧಿ ಕೋಶ, ಹಾಸನ.

ವಾಸಾಸಂಇ/ಹಿಸನಿ/ಹಾಸನ/579/ಕೆಎಸ್‌ಎಂಸಿಎ/2024–25

